ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

ಮೇ 19, 2010 ರೂ. 12/-



ನಕ್ಸಲ್ ಚಳವಳಿ ಮತ್ತು ಗೋವಿಂದ ವಿಲಾಸ



ರೇಪಾ? ಟ್ರ್ಯಾಪಾ?

ಗ್ರಾಪಂ ಚುನಾವಣೆ


ಬಾಗಲಕೋಟೆ, ಬಿಜಾಪುರ ಕರಾವಳಿ, ಚಾಮರಾಜನಗರ ಚಿಕ್ಕಮಗಳೂರು




ಚಳ್ಳೆ ತಿನ್ನಿಸಿದ ಸೈಕಲ್ ರವಿ

ಪರಾರಿಯಾದಳು ಪ್ರಿಯಾ ಹಾಸನ್


ನಕ್ಸಲ್ ಚಳವಳಿ ಮತ್ತು ಗೋವಿಂದ 'ವಿಲಾಸ'



ಈ ದೇಶದಲ್ಲಿ ಹಲವು ಬಗೆಯ ಬುದ್ಧಿಜೀವಿಗಳಿದ್ದಾರೆ. ಅವರಲ್ಲಿ ಕೆಲವರು "ಪಕ್ಕದ ಕೋಣೆಯಲ್ಲಿ ಹೆಣ ಬಿದ್ದಿದ್ದಾಗ ನಾನು ನಿರಾಳವಾಗಿರಲಾರೆ" ಎಂಬ ನೈತಿಕತೆಯುಳ್ಳವರು. ಇನ್ನೂ ಕೆಲವರು "ಅಪರಾಧವೇ ಅಧಿಕಾರವಾಗಿ ರಾಜ್ಯವಾಳುತ್ತಿರುವಾಗ, ಬಾಯಿದ್ದೂ ಮೌನವಾಗುಳಿಯುವ ಪ್ರತಿಯೊಬ್ಬನೂ ಅಪರಾಧಿಯೇ" ಎಂಬ ತೀವ್ರ ನೈತಿಕತೆಯಲ್ಲಿ ಅಪರಾಧದ ಎದುರು ನಿಂತು ಅದಕ್ಕಾಗಿ ಸೆರೆವಾಸ, ಗುಂಡು, ಲಾಠಿಗಳ ರುಚಿ ಕಾಣುವವರು. ಇವರು ಸರ್ಕಾರ ಕೊಡುವ ಪದಕಗಳಿಗಿಂತ, ಸನ್ಮಾನಗಳಿಗಿಂತ ಹೋರಾಟದ ಬದುಕಿನಲ್ಲಿ ಆದ ಗಾಯಗಳೇ ಪದಕವೆಂದು ಭಾವಿಸುತ್ತಾರೆ. ಇವರಿಬ್ಬರ ಹೊರತಾಗಿ ಇನ್ನೂ ಒಂದು ಬಗೆಯ ಬುದ್ಧಿಜೀವಿಗಳಿದ್ದಾರೆ. ತಮ್ಮ ಖಾಸಗಿ ಬದುಕಿನಲ್ಲಿ ತಾವು ಬೋಧಿಸುವ ರಾಜಕೀಯ ಮತ್ತು ನೈತಿಕತೆಯನ್ನು ಕಿಂಚಿತ್ತೂ ಪಾಲಿಸದ ಇವರು ಹೋರಾಟದ ನೈತಿಕತೆಯ ಬಗ್ಗೆ ಎಲ್ಲರಿಗಿಂತ ಹೆಚ್ಚು ಮಾತನಾಡುತ್ತಾರೆ.


ಗೋವಿಂದರಾವ್

ಕರ್ನಾಟಕದಲ್ಲೂ ಈ ಎಲ್ಲಾ ಬಗೆಯ ಬುದ್ಧಿಜೀವಿಗಳಿದ್ದಾರೆ. ಇದರಲ್ಲಿ ಕೊನೆ ಬಗೆಯ ಉದಾರವಾದಿ ಬುದ್ಧಿಜೀವಿಗಳಿಗೆ ಕೆಲವು ಚಾಳಿಗಳಿವೆ. ಇವರು ತಮ್ಮ ಕಂಫರ್ಟ್ ಜೋನುಗಳಿಂದ ಕಿಂಚಿತ್ತೂ ಕದಲದೇ ಜಗತ್ತಿನ ಎಲ್ಲಾ ಬಗೆಯ ಶೋಷಣೆಗಳ ಬಗ್ಗೆ ತಮ್ಮ ವ್ಯಾಖ್ಯಾನಗಳನ್ನು ನೀಡುತ್ತಿರುತ್ತಾರೆ ಹಾಗೂ ದಮನ ಮತ್ತು ಶೋಷಣೆಗಳಿಗೆ ನಿರಂತರವಾಗಿ ಬಲಿಯಾಗುತ್ತಿರುವ ಜನ ಯಾವುದೇ ಕಾರಣಕ್ಕೆ ಶಾಂತಿಯುತ ಮತ್ತು ಕಾನೂನುಬದ್ಧ ಹೋರಾಟದಿಂದ ವಿಮುಖರಾದರೆ ಆಧ್ಯಾತ್ಮಿಕತೆ ಮತ್ತು ನೈತಿಕತೆಯನ್ನು ಕಳೆದುಕೊಂಡಂತಾಗುತ್ತದೆಂದು ಎಚ್ಚರಿಸುತ್ತಿರುತ್ತಾರೆ. ಆದರೆ ಎಂದಿಗೂ ಇವರು ಶೋಷಿತ ಜನರ ಶೋಷಣೆಯ ಸ್ವರೂಪ ಸ್ವಂತ ಅನುಭವವಾಗಲು ಬಿಟ್ಟುಕೊಳ್ಳುವುದೇ ಇಲ್ಲ. ಜಾತಿ ಅಪಮಾನವಿರಲಿ, ಕನಿಷ್ಠ ಉಪವಾಸ ಸತ್ಯಾಗ್ರಹದ ಹಸಿವನ್ನೂ ಇವರು ಎಂದೂ ಅನುಭವಿಸಿರುವುದಿಲ್ಲ. ಆದರೂ ಹಸಿದವರಿಗೆ ಉಪವಾಸ ಸತ್ಯಾಗ್ರಹದ ನೈತಿಕತೆಯನ್ನು ಬೋಧಿಸುವುದನ್ನೂ ಮಾತ್ರ ಬಿಡುವುದಿಲ್ಲ.



ತುತ್ತು ಅನ್ನಕ್ಕೆ, ತುಂಡು ಭೂಮಿಗೆ, ಮುರುಕಲು ಜೋಪಡಿಗೆ, ದಶಕಗಳಿಂದ ಕಾದೂ ಕಾದೂ ಬೇಸತ್ತು ಅಂತಿಮವಾಗಿ ಒಂದು ಮಿಲಿಟೆಂಟ್ ಹೋರಾಟವನ್ನು ಪ್ರಾರಂಭಿಸಿದರೆ, ನೊಂದ ಜನ ತಾವು ಬದುಕಿರುವಾಗಲೇ ಕನಿಷ್ಠ ಸೌಲಭ್ಯ ಕೇಳಿದರೆ, ಅದನ್ನು "ರಾಜಕೀಯ ಸಂಕುಚಿತತೆ" ಎಂದು ಹೀನಾಯ ಮಾಡುತ್ತಾರೆ. ಶತಮಾನಗಳಿಂದ ಬದುಕುತ್ತಾ ಬಂದಿರುವ ಆದಿವಾಸಿಗಳನ್ನು ಕಾಡಿನಿಂದ ಎತ್ತಂಗಡಿ ಮಾಡಿಸುತ್ತಿರುವ ಸರ್ಕಾರದ ವಿರುದ್ಧ ರಾಜಿರಹಿತ ಹೋರಾಟ ಮಾಡುವುದನ್ನೂ, ಕೊಲ್ಲಲು ಬಂದಿರುವ ಅರೆ ಸೈನಿಕ ಪಡೆಗಳ ವಿರುದ್ಧ ತಮ್ಮ ರಕ್ಷಣೆ ತಾವು ಮಾಡಿಕೊಳ್ಳುವುದನ್ನೂ "ತಮ್ಮ ಜೀವಿತಾವಧಿಯಲ್ಲೇ ಬದಲಾವಣೆಯಾಗಬೇಕೆಂದು ಬಯಸುವ ಸಂಕುಚಿತತೆ" ಎಂದು ನಿಂದಿಸುತ್ತಾರೆ.

ಆದರೆ ತಾವು ವಾಸಿಸುವ ಅಮರಾವತಿಗಳಲ್ಲಿ ನೀರು ಬರುವುದು ಒಂದು ಗಂಟೆ ತಡವಾದರೆ ಅಥವಾ ತಮ್ಮ ಓಣಿಯ ಹಿಂಬದಿಯಲ್ಲಿ ಹರಿಯುವ ಚರಂಡಿಯ ನೀರು ಕಟ್ಟಿಕೊಂಡು ದುರ್ನಾತವನ್ನು ಬಡಿದರೆ ಜೀವಿತಾವಧಿಯಲ್ಲಿರಲಿ ಗಂಟೆ ಒಪ್ಪತ್ತಿನಲ್ಲಿ ಬದಲಾಗಬೇಕೆಂದೂ ನಾಗರಿಕ ಸಹನೆಯ ಮಿತಿಗಳನ್ನೆಲ್ಲಾ ಮೀರಿ "ಗೋವಿಂದಾವತಾರ" ತಾಳಿ ಬಿಡುತ್ತಾರೆ. ಕಾನೂನುಬದ್ಧ ಹೋರಾಟದ ಮಿತಿಯನ್ನು ಮುರಿಯುವುದನ್ನೇ ಭಯೋತ್ಪಾದನೆಯೆಂದು ಪರಿಗಣಿಸುವ ಇಂಥಾ ಬುದ್ಧಿಜೀವಿಗಳು ಯಾವುದಾದರೂ ಅನಿವಾರ್ಯ ಒತ್ತಡದಿಂದ ಕಾನೂನು ಮುರಿದು ಬಂಧನಕ್ಕೊಳಗಾದರೆ ಕಾನೂನು ಸಹಜವಾದ ಮುಂದಿನ ಯಾವ ಪ್ರಕ್ರಿಯೆಗಳಿಗೂ ಒಳಗಾಗದೆ ಬಚಾವಾಗಲು ಎಲ್ಲಾ ಕಾನೂನುಬಾಹಿರ ಕ್ರಮಗಳನ್ನು ಅನುಸರಿಸುತ್ತಾರೆ. ಅಂತಿಮವಾಗಿ ತಮ್ಮ ಬದುಕಿನಲ್ಲಿ ಇರುವ ಈ ದ್ವಂದ್ವವನ್ನು ಈ ಬುದ್ಧಿಜೀವಿಗಳು ಎಂದಿಗೂ ಒಂದು ನೈತಿಕ ಪ್ರಶ್ನೆಯನ್ನಾಗಿಸಿಕೊಳ್ಳುವುದೇ ಇಲ್ಲ. ಆದರೂ ಸಮಾಜಕ್ಕೆ ಅದರಲ್ಲೂ ಶತಮಾನಗಳಿಂದ ಶೋಷಣೆ ಮತ್ತು ದಮನಕ್ಕೊಳಗಾಗುತ್ತಲೇ ಬಂದ ಜನರಿಗೆ ಮಾತ್ರ ನೈತಿಕತೆಯ ಪಾಠವನ್ನು ಹೇಳುವುದನ್ನು ಬಿಡುವುದಿಲ್ಲ. ಹೀಗಾಗಿಯೇ ಇವರ ನೈತಿಕತೆ ಹೆಚ್ಚೆಂದರೆ ಒಂದು ಕಂಫರ್ಟ್ ಜೋನಿನ ನೈತಿಕ ವ್ಯಸನವಷ್ಟೇ ಎಂಬ ಅಭಿಪ್ರಾಯ ಉತ್ಪ್ರೇಕ್ಷೆಯೇನಲ್ಲ.

ಇಷ್ಟೆಲ್ಲಾ ಹೇಳಲು ಕಾರಣವಿದೆ. ನಾವು ಬಯಸಲಿ ಬಿಡಲಿ ಸಮಾಜದಲ್ಲಿ ಈ ದೇಶದ ದುಡಿಯುವ ಜನ ಅದರಲ್ಲೂ ಆದಿವಾಸಿಗಳು ನಕ್ಸಲ್ ಚಳವಳಿಯ

ಚಾರ್ವಾಕ

▸ ಶಿವಸುಂದರ್

ಭಾಗವಾಗಿದ್ದಾರೆ. ಆದಿವಾಸಿಗಳ ವಿಮೋಚನೆಯ ದೃಷ್ಟಿಯಿಂದಲೇ ನೋಡಿದರೂ ಹಲವರಿಗೆ ನಕ್ಸಲ್ ಮಾರ್ಗದ ಬಗ್ಗೆ ಒಪ್ಪಿಗೆ ಇಲ್ಲ. ಅದೂ ಸಹಜವೇ. ಈವರೆಗೆ ಆದಿವಾಸಿಗಳ ಬದುಕಿನ ದುರವಸ್ಥೆಯ ಬಗ್ಗೆ ಎಂದಿಗೂ ತಲೆಕೆಡಿಸಿಕೊಳ್ಳದ ನಾಗರಿಕ ಸಮಾಜ ಹಾಗೂ ಪ್ರಭುತ್ವಕ್ಕೆ ಆದಿವಾಸಿಗಳ ಸಮಸ್ಯೆಯ ಅಗಾಧತೆಯನ್ನು ಪರಿಚಯ ಮಾಡಿಕೊಟ್ಟದ್ದೇ ನಕ್ಸಲ್ ಚಳವಳಿಯ ಬಗ್ಗೆ ಸರ್ಕಾರದ ಯೋಜನಾ ಆಯೋಗದ ಪರಿಣಿತರ ಸಮಿತಿ ನೀಡಿದ 2009ರ ವರದಿಯೇ ಸ್ಪಷ್ಟ ಪಡಿಸುತ್ತದೆ. ಪೊಲೀಸ್ ಮತ್ತು ಅರೆಸೇನಾ ಪಡೆಗಳನ್ನು ಹೊರತು ಪಡಿಸಿ ನಾಗರಿಕ ಸಮಾಜವಾಗಲೀ, ಪ್ರಭುತ್ವದ ಇತರ ಅಭಿವೃದ್ಧಿ ಯೋಜನೆಗಳಾಗಲೀ ತಲುಪದ ಕಡೆ ತಲುಪಿದವರು ನಕ್ಸಲರು. ಅರಣ್ಯ ಇಲಾಖೆ ಮತ್ತು ಕಾಂಟ್ರಾಕ್ಟರುಗಳ ಶೋಷಣೆಯಿಂದ ಅವರನ್ನು ಪಾರು ಮಾಡಿದವರು ನಕ್ಸಲರೇ. ಇದನ್ನು ಕೇವಲ ನಕ್ಸಲರೇ ಮಾಡಬೇಕಿರಲಿಲ್ಲ. ನಕ್ಸಲರು ಅಲ್ಲಿಗೆ ಹೋಗಿದ್ದು ಕೇವಲ 25 ವರ್ಷಗಳ ಕೆಳಗೆ. 1985ರಲ್ಲಿ, ಅದಕ್ಕೂ ಮುಂಚೆ ಈ ದೇಶದ ಸಮಾಜವಾದಿಗಳು, ಗಾಂಧೀವಾದಿಗಳು ಅಥವಾ ಇತರ ರಾಜಕೀಯ ಪಕ್ಷಗಳು ಅಲ್ಲಿಗೆ ಹೋಗಿ ಆದಿವಾಸಿಗಳನ್ನು ಸಂಘಟಿಸಬಹುದಿತ್ತು. ಪ್ರಭುತ್ವ ತನ್ನ ಸಂವಿಧಾನದ ಪ್ರಕಾರವೇ ನಡೆದುಕೊಂಡು ಆದಿವಾಸಿಗಳಿಗೆ ಏನೂ ಸೌಕರ್ಯ ನೀಡದಿದ್ದರೂ ಪರವಾಗಿಲ್ಲ ಮೊದಲು ಕಾಂಟ್ರಾಕ್ಟರುಗಳ ಪರವಾಗಿ, ಈಗ ಅಲ್ಲಿನ ಅದಿರಿನ ಮೇಲೆ ಕಣ್ಣಿಟ್ಟಿರುವ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ನಿಂತು ಅವರನ್ನು ಎತ್ತಂಗಡಿ ಮಾಡದೇ ಹೋಗಿದ್ದರೂ, ನಕ್ಸಲ್ ಹೋರಾಟಕ್ಕೆ ಭೂಮಿಕೆಯೇ ಸಿಗುತ್ತಿರಲಿಲ್ಲ.


ಅರುಂಧತಿ ರಾಯ್

ಅಷ್ಟೆಲ್ಲಾ ಏಕೆ? ಹಿಮಾಂಶು ಕುಮಾರ್ ಎಂಬ ಪಕ್ಕಾ ಗಾಂಧೀವಾದಿ ಆದಿವಾಸಿಗಳ ಪರವಾಗಿ ಆಶ್ರಮಗಳನ್ನು ತೆರೆದು ತನ್ನ ಕೈಯಲ್ಲಾಗುವ ಸಹಾಯ ಮಾಡಲು ಮುಂದಾದಾಗ ಅವರೇ ಹೇಳುವಂತೆ ನಕ್ಸಲರು ಅವರಿಗೆ ಸಹಾಯ ಮಾಡಿದರೆ ಪ್ರಭುತ್ವ ಅವರನ್ನು ಮಾವೋವಾದಿ ಬೆಂಬಲಿಗ ಎಂದು ಹಣೆಪಟ್ಟಿ ಕಟ್ಟಿ ಅವರನ್ನು ಛತ್ತೀಸ್‌ಗಢ್‌ದಿಂದ ಎತ್ತಂಗಡಿ ಮಾಡಿತು. ಕನಿಷ್ಠ ಕಾಡಿನೊಳಗೆ ಹೋದ ಈ ಗಾಂಧಿಯನ್ನಾದರೂ ಉಳಿಸಿಕೊಳ್ಳಲು ಈ ದೇಶದ ಸಮಾಜವಾದಿ, ಗಾಂಧೀವಾದಿಗಳು ಪ್ರಯತ್ನಿಸಬಹುದಿತ್ತು. ವಿಪರ್ಯಾಸವೆಂದರೆ ಈ ಗಾಂಧೀವಾದಿಯನ್ನು ಕಾಡಿನಲ್ಲೇ ಉಳಿಸಿಕೊಳ್ಳಲು ಹೆಚ್ಚಿನ ಪ್ರಯತ್ನ ಮಾಡಿದ್ದು ನಕ್ಸಲರೇ! ಹಾಗೆ ನೋಡಿದರೆ ಆಪರೇಷನ್ ಗ್ರೀನ್ ಹಂಟ್‌ನ ಮೊದಲ ಬಲಿಯೇ ಈ ಗಾಂಧಿವಾದಿ ಮತ್ತು ಗಾಂಧೀವಾದ.

ಹೀಗೆ ಪ್ರಭುತ್ವ ಮತ್ತು ನಾಗರಿಕ ಸಮಾಜ ಎರಡರಿಂದಲೂ ಹಿಂಸೆಗೆ ಒಳಗಾಗಿರುವ ಆದಿವಾಸಿಗಳ ಪರವಾಗಿ ಮಾವೋವಾದಿ ನಕ್ಸಲರು ಯಾವ ಬಗೆಯ ಹೋರಾಟ ಕಟ್ಟುತ್ತಿದ್ದಾರೆಂದು ಅರ್ಥಮಾಡಿಕೊಳ್ಳುವ ಗೋಜಿಗೆ ಹೋಗದ ಬುದ್ಧಿಜೀವಿಗಳು ತಮ್ಮ ಕಂಫರ್ಟ್ ಜೋನಿನಲ್ಲಿ ಕುಳಿತು ನಕ್ಸಲ್ ಚಳವಳಿಯ ಬಗ್ಗೆ ಮತ್ತು ಅದನ್ನು ಸಹಾನುಭೂತಿಯಿಂದ ಅರ್ಥಮಾಡಿಕೊಳ್ಳಬೇಕು ಎನುವವರ ಬಗ್ಗೆ ಪ್ರಭುತ್ವದ ಭಾಷೆಯಲ್ಲೇ ಫರ್ಮಾನುಗಳನ್ನು ಹೊರಡಿಸುತ್ತಿದ್ದಾಗ ಅದರ ಬಗ್ಗೆ ಪ್ರತ್ಯಕ್ಷ ಚಿತ್ರಣ ಕೊಟ್ಟದ್ದು ಖ್ಯಾತ ಲೇಖಕಿ ಅರುಂಧತಿ ರಾಯ್ ಔಟ್‌ಲುಕ್‌ನಲ್ಲಿ ಬರೆದ 32 ಪುಟಗಳ ಲೇಖನ. ಅದನ್ನು ಧೈರ್ಯದಿಂದ ಅನುವಾದ ಮಾಡಿ ಮೊದಲು ಈ 'ಲಂಕೇಶ್' ವಾರ ಪತ್ರಿಕೆ (ಮೂರು ವಾರ) ಆನಂತರ 'ಪ್ರಜಾವಾಣಿ' ಅದನ್ನು ಸಂಪೂರ್ಣವಾಗಿ ಧಾರಾವಾಹಿಯಾಗಿ ಪ್ರಕಟಿಸಿತು.

ಕರ್ನಾಟಕದಲ್ಲಂತೂ ನಕ್ಸಲರ ಬಗ್ಗೆ ಚರ್ಚೆ ನಡೆಯುವುದೇ ಅವರು ಕೊಲ್ಲಲ್ಪಟ್ಟಾಗ ಅಥವಾ ಅವರು ಯಾರನ್ನಾದರೂ ಕೊಂದಾಗ! ಇದನ್ನು ಹೊರತುಪಡಿಸಿ ನಕ್ಸಲ್ ಚಳವಳಿ ಎಂದರೇನು? ಯಾವ ಬಗೆಯ ಹೋರಾಟವನ್ನು ನಡೆಸುತ್ತಿದೆ? ಅವರನ್ನು ಆದಿವಾಸಿಗಳು ಏಕೆ ಬೆಂಬಲಿಸುತ್ತಿದ್ದಾರೆ ಇನ್ನಿತ್ಯಾದಿ ಪ್ರಶ್ನೆಗಳಿಗೆ ಉತ್ತರವನ್ನು ಪಡೆದುಕೊಳ್ಳಲು ಕನ್ನಡ ಓದುಗರಿಗೆ 'ಪ್ರಜಾವಾಣಿ'ಯಲ್ಲಿ ಬಂದ ಅರುಂಧತಿ ರಾಯ್‌ರವರ ಲೇಖನದ ಅನುವಾದ ಅವಕಾಶವನ್ನು ಒದಗಿಸಿತ್ತು. ನಾವು ಒಪ್ಪಲಿ ಬಿಡಲಿ ಇಂದು ಬೇರೆಲ್ಲಾ ಚಳವಳಿಗಳು ನೈತಿಕ ಹಾಗೂ ರಾಜಕೀಯ ಅಧಃಪತನದ ಕಡೆ ಧಾವಿಸುತ್ತಿರುವಾಗ ನಕ್ಸಲ್ ಚಳವಳಿಯ ಹಿಂದೆ ಏಕೆ

▸▸ 14

ನೋ ಕಾಮೆಂಟ್ಸ್

"ದೆಹಲಿಯ ಗುಜರಿ ಅಂಗಡಿಯಲ್ಲಿ ವಿಕಿರಣ ಸೋರಿಕೆಯಿಂದ ಆದ ಅನಾಹುತದ ಹಿಂದೆ ಆಳವಾದ ಇತರ ಕಾರಣಗಳಿವೆ. ಭಾರತ-ಅಮೆರಿಕ ನಾಗರಿಕ ಅಣು ಒಪ್ಪಂದವಾದ ನಂತರ ಪ್ರಧಾನ ಮಂತ್ರಿ ಕಾರ್ಯಾಲಯ, ಆಟಾಮಿಕ್ ಎನರ್ಜಿ ಕಮಿಷನ್, ಅಣುಶಕ್ತಿ ಇಲಾಖೆ, ಖಾಸಗಿ ಉದ್ಯಮ ಸಂಸ್ಥೆಗಳು ಹಾಗೂ ಅಣು ಅಪಘಾತಗಳ ನಿಯಂತ್ರಣದ ಬಗ್ಗೆ ನಿಗಾ ಇಡಬೇಕಾದ ಆಟಾಮಿಕ್ ಎನರ್ಜಿ ರೆಗ್ಯುಲೇಟರಿ ಬೋರ್ಡ್‌ಗಳು (AERB) ನಿಕಟವಾಗಿ ಮತ್ತು ನಿಗೂಢವಾಗಿ ಕೆಲಸ ಮಾಡುತ್ತಿವೆ ಹಾಗೂ ಉದ್ದೇಶಪೂರ್ವಕವಾಗಿ ಇಂಥಾ ಅಪಘಾತಗಳಿಗೆ ಕಾರಣವಾಗುವ ಅಂಶಗಳನ್ನು ಮರೆಮಾಚಿ ನಾಗರಿಕ ಅಣು ಒಪ್ಪಂದದ ಬಗ್ಗೆ ಸಾರ್ವಜನಿಕರಲ್ಲಿ ಸದಭಿಪ್ರಾಯ ಮೂಡಿಸಲು ಯತ್ನಿಸುತ್ತಿವೆ."

- ಎ. ಗೋಪಾಲಕೃಷ್ಣ, *AERB* ಯ ಮಾಜಿ ಅಧ್ಯಕ್ಷ

"ಫೋನ್ ಕದ್ದಾಲಿಕೆಯನ್ನು ಮಾಡುವಂತೆ ಬಹಳಷ್ಟು ಬಾರಿ ನಮಗೆ ಮೌಖಿಕ ಆದೇಶವನ್ನು ನೀಡಲಾಗುತ್ತದೆಯೇ ವಿನಃ ಲಿಖಿತ ಆದೇಶವನ್ನಲ್ಲ. ಫೋನ್ ಕದ್ದಾಲಿಕೆಯ ಬಗ್ಗೆ ಗೃಹಮಂತ್ರಿಗಳು ನೀಡಿರುವ ಹೇಳಿಕೆಯಲ್ಲಿ ಅಂಥಾ ತಂತ್ರಜ್ಞಾನ ಇರುವುದನ್ನಾಗಲೀ ಅಥವಾ ಅದನ್ನು ಬಳಸಿ ಕದ್ದಾಲಿಕೆಯನ್ನು ಮಾಡುತ್ತಿರುವುದನ್ನಾಗಲೀ ನಿರಾಕರಿಸಿಲ್ಲ. ಅವರು ಹೇಳಿರುವುದೆಲ್ಲಾ ಇಷ್ಟೇ, 'ನಾವು ಕದ್ದಾಲಿಕೆ ಮಾಡುವಂತೆ ಯಾರಿಗೂ ಲಿಖಿತ ಆದೇಶ ನೀಡಿರಲಿಲ್ಲ' ಎಂದು!"

- ಫೋನ್ ಕದ್ದಾಲಿಕೆ ಮಾಡುವ ಸರ್ಕಾರದ *NTRO* ಸಂಸ್ಥೆಯ ಅಧಿಕಾರಿಗಳು

"ಹಾಲಪ್ಪ ಪ್ರಕರಣದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪನವರು ನೀಡುತ್ತಿರುವ ಹೇಳಿಕೆಗಳನ್ನು ನೋಡಿದರೆ ಅವರು ಇದಕ್ಕೆ ಸಾಕ್ಷಿಯಾಗಿದ್ದಾರಾ ಎಂಬ ಅನುಮಾನ ಮೂಡುತ್ತದೆ. ತನಿಖೆ ಮುಗಿಯುವ ಮುನ್ನವೇ ಆರೋಪಿಯ ಪರವಾಗಿ ಹೇಳಿಕೆ ನೀಡುವುದು ಶೋಭೆ ತರುವುದಿಲ್ಲ. ಈ ಪ್ರಕರಣವನ್ನು ಸಿಬಿಐಗೆ ವಹಿಸುವುದೇ ಒಳ್ಳೆಯದು."

- ನ್ಯಾ. ಎಸ್.ಆರ್. ನಾಯಕ್, ಮಾನವ ಹಕ್ಕು ಆಯೋಗದ ಅಧ್ಯಕ್ಷ

"2007ರ ಅಜ್ಮೇರ್ ದರ್ಗಾ ಬಾಂಬ್ ಸ್ಫೋಟ ಪ್ರಕರಣಕ್ಕೆ ಸಂಬಂಧಿಸಿ ಮಧ್ಯಪ್ರದೇಶದಲ್ಲಿ ರಾಜಸ್ಥಾನ ಪೊಲೀಸರಿಂದ ಬಂಧನಕ್ಕೊಳಗಾಗಿರುವ ಚಂದ್ರಶೇಖರ್ ಪತಿದಾರ್ ಆರೆಸ್ಸೆಸ್ಸಿನ ಸಕ್ರಿಯ ಕಾರ್ಯಕರ್ತ."

- ಆರೋಪಿಯ ಸಹೋದ...

ನಂಬಿದ್ರೆನಂಬಿ ಬಿಟ್ರೆಬಿಡಿ

"ಕುಡಿಯುವ ನೀರಿನ ಸಮಸ್ಯೆಯ ಬಗ್ಗೆ ಸಾರ್ವಜನಿಕರಿಂದ ಯಾವುದೇ ದೂರುಗಳು ನಮಗೆ ಬಂದಿಲ್ಲ."

- ಮೇಯರ್ ನಟರಾ...

"ವಿರೋಧ ಪಕ್ಷಗಳ ಪ್ರತಿಭಟನೆಯ ಕಾರಣದಿಂದ ಸಂಸತ್ತಿನಲ್ಲಿ ಕೋಲಾಹಲದ ವಾತಾವರಣವಿರುವಾಗಲೇ ಲೋಕಸಭೆಯಲ್ಲಿ ಆರು ಮಸೂದೆಗಳು ಯಾವುದೇ ಚರ್ಚೆಯಿಲ್ಲದೆ ಪಾಸಾಗಿಬಿಟ್ಟವು."

- ವ...

ಅತ್ಯಾಚಾರಕ್ಕಿಂತ ಅಶ್ಲೀಲವಾದ ಹೇಳಿಕೆಗಳು

"ಹಾಲಪ್ಪ ನಿರ್ದೋಷಿ"

-ಈಶ್ವ...

"ಇದರ ಹಿಂದೆ ವಿರೋಧ ಪಕ್ಷಗಳ ಷಡ್ಯಂತ್ರವಿದೆ. ಹಾಲಪ್ಪ ಸಜ್ಜನ."

- ಯಡಿಯೂ...

"ಹಾಲಪ್ಪನ ವಿರುದ್ಧ ದೂರು ಸಲ್ಲಿಸಿರುವವರು ಈವ... ಪೊಲೀಸ್ ರಕ್ಷಣೆ ಕೇಳಿಲ್ಲ. ಹೀಗಾಗಿ ಕೊಟ್ಟಿಲ್ಲ."

- ವಿ.ಎಸ್. ಆಚಾ...

ಈ ಸತ್ಯ ಹೇಳಿದ್ದಕ್ಕೆ ಕರ್ಕರೆಯನ್ನು ಕೊಂದುಹಾಕಲಾಯಿತು!

"2007ರಲ್ಲಿ ಅಜ್ಮೇರ್ ದರ್ಗಾದಲ್ಲಿ ನಡೆದ ಸ್ಫೋಟಕ್ಕೂ ಮತ್ತು ಹೋದ ವರ್ಷ ಹೈದರಾಬಾದಿನ ಮೆ... ಮಸೀದಿಯಲ್ಲಿ ನಡೆದ ಸ್ಫೋಟಕ್ಕೂ ಸಂಬಂಧವಿದೆ. ಎ... ಹಿಂದೆಯೂ ಹಿಂದೂತ್ವವಾದಿ ಉಗ್ರಗಾಮಿ ಸಂಘಟನೆ... ಕೈವಾಡವಿದೆ."


- ಅಶ್ವನ್ ಕುಮಾರ್, ಸಿಬಿಐ ಮು...

ಸತ್ತವರು ರೈತರಲ್ಲ, ಯಡಿಯೂರಪ್ಪ ಮುಖ್ಯಮಂತ್ರಿಯೇ ಅಲ್ಲ!

"ಹಾವೇರಿ ಗೋಲಿಬಾರಿನಲ್ಲಿ ಸತ್ತವರು ರೈತರೇ ...

- ನ್ಯಾ. ಜಗನ್ನಾಥ ಶೆಟ್ಟಿ, ಆಯೋ...

ಯಥಾ ಸಿಎಮ್ಮು, ತಥಾ ಮಂತ್ರಿ



ಕಂಡಹಾಗೆ

ಗೌರಿ ಲಂಕೇಶ್

ಯಥಾ ಗುರು ತಥಾ ಶಿಷ್ಯ' ಎಂಬಂತಿದೆ ಯಡಿಯೂರ ಬಿಜೆಪಿ ಸರ್ಕಾರ. ಯಡಿಯೂರಪ್ಪ ತನ್ನ ಕೈಹಿಡಿದ ೯ ಕೈ ಕೊಟ್ಟಿರಲ್ಲವೆ? ಬೇರೆ ಹೆಣ್ಣಿನ ಸ್ನೇಹಕ್ಕೆ ಬಿದ್ದು ಕೀಯದಲ್ಲಿ ಯಡವಟ್ಟು ಮಾಡಿಕೊಂಡರಲ್ಲವೇ? ವಿನ ಗುಣಗಳೇ ಇಂಥದಾದ್ದರಿಂದ ಅವರ ಶಿಷ್ಯರೂ ಹ ಗುಣಗಳನ್ನೇ ಮೈಗೂಡಿಸಿಕೊಂಡಿರುವುದು ಅಚ್ಚರಿ

ನ್ನ ಗುಣ, ತನ್ನ ಶಿಷ್ಯರ ಗುಣಗಳನ್ನು ಯಡಿಯೂರಪ್ಪ ರಾದ್ದರಿಂದಲೇ ಮೊನ್ನೆ ಪರಸ್ತ್ರೀಯೊಬ್ಬರ ಮೇಲೆ ಚಾರದ ಆರೋಪ ಹೊತ್ತ ಮಾಜಿ ಸಚಿವ ಹರತಾಳು ಪ್ಪನನ್ನು ಯಡ್ಡಿ 'ಸಾತ್ವಿಕ ಮನುಷ್ಯ' ಎಂದು ವರ್ಣಿಸಿ ಬೆನ್ನು ತಟ್ಟಿದ್ದು. ಹಾಗೆ ಹೇಳುವ ಮೂಲಕ ಈ ' ಪದಕ್ಕೆ ಯಡ್ಡಿ ಹೊಸ ಅರ್ಥಗಳನ್ನು ನೀಡಿದ್ದಾರೆ. ಘಂಟಿನ ಪ್ರಕಾರ 'ಸಾತ್ವಿಕ' ಅಂದರೆ: ಸಾತ್ವಿಕ, ರಾಜಸ ತಾಮಸ ಎಂಬ ಮೂರು ಬಗೆಯ ಗುಣಗಳಲ್ಲಿ ; ಒಳ್ಳೆಯ ಗುಣಗಳಿಂದ ಕೂಡಿದವನು; ಸಾಧು ದವನು; ಒಳ್ಳೆಯತನ, ಸತ್ಯಸಂಧತೆ.

ದರೆ ಹರತಾಳು ಹಾಲಪ್ಪನನ್ನು 'ಸಾತ್ವಿಕ' ಎಂದು ರುವ ಯಡಿಯೂರಪ್ಪ ಈಗ ದದಕ್ಕೆ 'ವ್ಯಭಿಚಾರಿ', 'ಕ- ಹರುಕ', ಲಂಪಟ', 'ಚಿ- ಚತುರ' ವ ಅರ್ಥಗಳನ್ನು ಕೊಟ್ಟಿದ್ದಾರೆ

ಅಂದಹಾಗೆ, ಈ 'ಸಾತ್ವಿಕ' ೄ ಈಗ ಯಡಿಯೂರಪ್ಪ ನ್ನಿ ವಿಶ್ಲೇಷಿಸಿರುವ ರೀತಿಗೂ ಕ ಸಂಬಂಧವಿದೆ ಎಂದು ೀಧಕ ಚಿದಾನಂದಮೂರ್ತಿಗಳು ಅರೆಬರೆ ಇತಿಹಾಸಕಾರ ಎಲ್. ಭೈರಪ್ಪ ಕೂಡಲೇ ೀಧಿಸಿ ರಾಜ್ಯದ ಜನರ ನೆರವಿಗೆ ೀಕಿದೆ!)

ಹಾಲಪ್ಪನ ವಿರುದ್ಧ ಅತ್ಯಾಚಾರದ ೀಪ ಮಾಡಿರುವ ಚಂದ್ರಾವತಿ ಅವರ ವಾಸ ಏನೇ ಆಗಿರಬಹುದು. ಯೇ ಆಕೆಯ ಗಂಡ ವೆಂಕಟೇಶ ೯ಿಯ ಅಪರಾತಪರಾಗಳೂ ಹದ್ದೇ ಆಗಿರಬಹುದು. ಅವೆರಡರ ವತಾಗಿ ಇಲ್ಲಿರುವ ಮುಖ್ಯ ತಳ್ಯಾವುವು ಅಂದರೆ: ಮೂರ್ತಿ ತಿಗಳು ದುಷ್ಟರಾಗಿದ್ದರೆ ಹಾಲಪ್ಪ ಯಾಕೆ ಅವರೊಂದಿಗೆ ಮಾಡಿದ್ದರು? ಯಾಕೆ ಅವರ ಮನೆಯಲ್ಲಿ ತಂಗುವ ಠತವನ್ನು ಬೆಳೆಸಿಕೊಂಡಿದ್ದರು? ಯಾಕೆ ಅವರ ಮುಲ್ಲಿ ಅರೆನಗ್ನರಾಗಿ ಸಿಕ್ಕಿಬೀಳಬೇಕಿತ್ತು? ಯಾಕೆ ಇವತ್ತು ಚಾರದಂತಹ ಆರೋಪವನ್ನು ಎದುರಿಸಬೇಕಿತ್ತು? ಇಂತಹ ಪ್ರಶ್ನೆಗಳಿಗೆ ಯಡಿಯೂರಪ್ಪ ನೀಡಿರುವ ಉತ್ತರ ಪ್ಪ ಬಿಜೆಪಿ ಪಕ್ಷದ ನಿಷ್ಠಾವಂತ." ಅಂದರೆ ಏನರ್ಥ? ಪ್ಪನಂತೆ ದುಷ್ಟರೊಂದಿಗೆ ಸ್ನೇಹ ಬೆಳೆಸುವವರು, ಂಡವವರ ಮನೆಯಲ್ಲಿ ತಂಗುವವರು, ಹಾಗೆ ಲ್ಲದೆ ಅತ್ಯಾಚಾರದ ಆರೋಪವನ್ನು ಆಹ್ವಾನಿಸಿಕೊಳ್ಳು ಭಾರತೀಯ ಜನತಾ ಪಕ್ಷದ ಅರ್ಹ ಸದಸ್ಯರು, : ಈ ಪಕ್ಷದ ನಿಷ್ಠಾವಂತ ಸೇವಕರು ಎಂದೇ ವಲ್ಲವೇ?

ಯಡಿಯೂರಪ್ಪನಿಗೆ ಬೆಪ್ಪೋ? ಹುಚ್ಚೋ?


ಯಥಾ ಗುರು ತಥಾ ಶಿಷ್ಯ' ಎಂದಿದ್ದಕ್ಕೆ ಕಾರಣಗಳೂ ಈ ಯಡಿಯೂರಪ್ಪ ತನ್ನ ಮಡದಿ ಮೈತ್ರಾದೇವಿಯನ್ನು ತ್ತ ದೂಡಿದ ರಾಮನಭಕ್ತ, ಆಕೆಯ ತಂದೆ, ತಮ್ಮಂದಿ ವಂಚಿಸಿದ ವಿಶ್ವಾಸದ್ರೋಹಿ. ಹಾಗೆಯೇ ತನ್ನ ಆಪ್ತೆ ಾ ಕರಂದ್ಲಾಜೆಯ ಏಳಿಗೆಗಾಗಿ ಬೇಡವಾದದ್ದನ್ನೆಲ್ಲ ಗಣಿ ರೆಡ್ಡಿ ಗ್ಯಾಂಗಿನ ಕೆಂಗಣ್ಣಿಗೆ ತುತ್ತಾಗಿ ರಾಷ್ಟ್ರ ದಲ್ಲಿ ಎಲ್ಲರ ಮುಂದೆ ಅವಮಾನ ಮಾಡಿಸಿಕೊಂಡ ಳ ನಾಯಕ. ಈ ನಾಯಕ/ಗುರುವೇ ಇಂಥ ತ್ಯಗಳಿಗೆ ಕುಖ್ಯಾತಿ ಪಡೆದಿರುವಾಗ ಆತನಂತೆಯೇ ಶಿಷ್ಯರೂ ಮಾಡುತ್ತಾರೆ.

ಉಡುಪಿಯ ಶಾಸಕ ರಘುಪತಿ ಭಟ್ಟ ತನ್ನ ಹೆಂಡತಿ ಪ್ರಿಯಾಳನ್ನು ಇನ್ನಿಲ್ಲದಂತೆ ಪೀಡಿಸಿ ಆಕೆ ತನ್ನ ಮಕ್ಕಳನ್ನೇ ತೊರೆದು ಹೋಗುವಂತೆ ಮಾಡಿದ. ಪ್ಪಿಸಿಕೊಂಡು ಹೋದನಂತರವೂ ನೆಮ್ಮದಿಯಿಂದ ಲು ಬಿಡದೆ ಆಕೆ ಆತ್ಮಹತ್ಯೆ ಮಾಡಿಕೊಳ್ಳುವಂತೆ ಗೃಹ ಸಚಿವ ವಿ.ಎಸ್. ಆಚಾರ್ಯ, ಯಡಿಯೂರಪ್ಪ ಕೊಂಡರು. ಅಷ್ಟೂ ಸಾಲದೆಂಬಂತೆ ಪದ್ಮಪ್ರಿಯಾಳಿಗೆ ನೀಡಿದ್ದ ಸ್ನೇಹಿತ ಅತುಲ್‌ರಾವ್‌ನನ್ನೇ ಬಲಿಪಶು ಮಾಡಿ ಆತನ ಬದುಕೇ ಅಂತ್ಯವಾಗುವಂತೆ ಪೊಲೀಸರನ್ನು ಛೂಬಿಟ್ಟರು ಈ ಬಿಜೆಪಿಗಳು.

ಇನ್ನು ರೇಣುಕಾಚಾರ್ಯನ ಕತೆಯೂ ಇದಕ್ಕಿಂತ ಭಿನ್ನವಾಗಿಲ್ಲ. ನರ್ಸ್ ಜಯಲಕ್ಷ್ಮಿಯೊಂದಿಗೆ ಚಕ್ಕಂದ ಆಡಿದ ರೇಣುಕಾಚಾರಿ, ಮನೆಯಲ್ಲಿ ಹೆಂಡತಿ ಮಕ್ಕಳಿದ್ದರೂ ಜಯಲಕ್ಷ್ಮಿ ತನ್ನನ್ನು ಮದುವೆ ಆಗುವಂತೆ ಪೀಡಿಸಿದ. ಆಕೆ ಒಪ್ಪದಿದ್ದಾಗ ತನ್ನೊಂದಿಗೆ ಆಕೆ ಇರುವ ಫೋಟೋಗಳನ್ನು ಬಹಿರಂಗಗೊಳಿಸುವುದಾಗಿ ಬೆದರಿಸಿದ. ಕೊನೆಗೂ ಈತನ ಮಾನಮರ್ಯಾದೆ ರಾಜ್ಯದೆಲ್ಲೆಡೆ ಹರಾಜಾಯಿತ್ತು. ಆದರೂ ರೇಣುಕಾಚಾರ್ಯ ತನ್ನನ್ನೂ ಬ್ಲಾಕ್‌ಮೇಲ್ ಮಾಡಿದ್ದರಿಂದ ಯಡ್ಡಿ ಆತನನ್ನು ತಮ್ಮ ಸಂಪುಟಕ್ಕೆ ಸೇರಿಸಿಕೊಂಡರು. ಪಾಪ ಇಷ್ಟೊಂದು 'ಖ್ಯಾತಿ' ಗಳಿಸಿದ್ದ ವ್ಯಕ್ತಿಗೆ ಒಂದು ಗೂಟದ ಕಾರ್‌ಅನ್ನು ನಿರಾಕರಿಸಲಾಗಲಿಲ್ಲ ಯಡ್ಡಿಗೆ.

ಒಂದೆಡೆ ದೇಶ, ಧರ್ಮ, ದೇವರು, ಸಂಸ್ಕೃತಿ ಹೆಸರಿನಲ್ಲಿ ಜನರ ದಾರಿ ತಪ್ಪಿಸಿ ಅಧಿಕಾರ ಹಿಡಿದಿರುವುದು, ಇನ್ನೊಂದೆಡೆ ಭಟ್ಟ, ರೇಣುಕಾಚಾರ್ಯ, ಹಾಲಪ್ಪನಂಥವರನ್ನು ರಕ್ಷಿಸಿ, ಪ್ರೋತ್ಸಾಹಿಸಿ, ಅವರೆಲ್ಲ 'ಸಾತ್ವಿಕ'ರು ಮತ್ತು ಪಕ್ಷದ ನಿಷ್ಠಾವಂತರು ಎನ್ನುವ ನಾಯಕ ಯಡಿಯೂರಪ್ಪ.

ಕರ್ನಾಟಕ ಎಂಬ ಸುಸಂಸ್ಕೃತ ನಾಡು ಇಂತಹ ನಾಯಕನನ್ನಾಗಲಿ, ಸರ್ಕಾರವನ್ನಾಗಲಿ, ಜನಪ್ರತಿನಿಧಿಗಳನ್ನಾಗಲಿ ಪಡೆಯುವ ದಾರಿದ್ರ್ಯವನ್ನು ಎಂದೂ ಕಾಣಬಾರದಿತ್ತು...



* * * * * *

ಚಂದಿರ. ಹಲವೊಮ್ಮೆ ಮುತ್ತಿನ ಮಣಿಯಂತೆ ಹೊಳೆಯುವ, ಹಲವೊಮ್ಮೆ ಕಿತ್ತಲೆಹಣ್ಣಿನಂತೆ ಕಾಣುವ ಸುಂದರ ಚಂದಿರ. ಈ ಚಂದಿರನ ಬೆಳದಿಂಗಳಲ್ಲಿ ನಾವು ಚಿಕ್ಕವರಾಗಿದ್ದಾಗ ಅದೆಷ್ಟು ಬಾರಿ ತಾರಸಿ ಮೇಲೆ ಅಪ್ಪನೊಂದಿಗೆ ಅಕ್ಕಿರೊಟ್ಟಿ-ಎಣ್ಣೆಗಾಯಿ ಊಟವನ್ನು ಮಾಡಿಲ್ಲ... ಹದಿಹರೆಯದವಳಾಗಿದ್ದಾಗ ಅದೆಷ್ಟು ಬಾರಿ ನನ್ನ ಹೃದಯದಾಳದ ಆಶಯಗಳನ್ನು 'ನನ್ನವನಿಗೆ' ಕಳುಹಿಸು ಎಂದು ಚಂದಾಮಾಮಾನನ್ನು ಕೇಳಿಕೊಂಡಿಲ್ಲ. ಇತ್ತೀಚೆಗೆ ಆತ ಆಕಾಶದಲ್ಲಿ ಕಂಗೊಳಿಸಿದಾಗಲೆಲ್ಲ ಕೂಡಲೇ ನನ್ನ ಪುಟ್ಟ ಮಗಳಿಗೆ ಫೋನ್ ಮಾಡಿ **"See the Moon,** ಎಷ್ಟು ಚಂದಾ ಇದೆ ನೋಡು" ಎಂದಿಲ್ಲ. ಹಾಗೆಯೇ ಅದೆಷ್ಟು ಚಂದ್ರಗ್ರಹಣಗಳನ್ನು ವೀಕ್ಷಿಸಿಲ್ಲ....

ಇಲ್ಲಿಂದ ಇಷ್ಟು ಸುಂದರವಾಗಿ ಕಾಣಿಸುವ, ಎಲ್ಲರಲ್ಲಿ ಒಂದು ತರಹದ ಮಧುರ ಭಾವನೆಯನ್ನೂ, ಉಲ್ಲಾಸವನ್ನೂ ಮೂಡಿಸುವ ಚಂದಿರ ವಾಸ್ತವವಾಗಿ ಬೋಳುಬೋಳಾದ ಉಪಗ್ರಹ; ಅದರ ಮೇಲೆ ಇಲ್ಲಿನಂತೆ ಹೂಗಿಡಗಳಿಲ್ಲ, ನದಿ ಸಮುದ್ರಗಳಿಲ್ಲ, ಪ್ರಾಣಿಪಕ್ಷಿಗಳಿಲ್ಲ, ಗಾಳಿ-ಬಿರುಗಾಳಿ ಗಳೂ ಇಲ್ಲ.

ಆದರೂ ಚಂದ್ರನ ಬಗ್ಗೆ ಯಾಕೆ ವಿಜ್ಞಾನಿಗಳಿಗೆ ಅಷ್ಟು ಕುತೂಹಲ? ಯಾಕೆ ಹಲವಾರು ದೇಶಗಳು ಕೋಟಿ ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಿ 3,80,000 ಕಿಲೋಮೀಟರ್ ದೂರವಿರುವ ಚಂದ್ರನತ್ತ ಸ್ಯಾಟಲೈಟುಗಳನ್ನು ಮತ್ತು ಆತನ ಮೇಲೆ ಮನುಷ್ಯರನ್ನು ಕಳುಹಿಸುತ್ತಾರೆ? ಅದರಲ್ಲೂ ಭಾರತದಂತಹ ದೇಶಕ್ಕೆ, ಇಲ್ಲಿನ ಬಡವರಿಗೆ ನೆಟ್ಟಗೆ ರೇಷನ್ ಕೂಡ ಕೊಡಲಾಗದಂತಹ ಭಾರತಕ್ಕೆ ಕೋಟ್ಯಂತರ ರೂಪಾಯಿಗಳ ಬಂಡವಾಳ ಹೂಡಿ ಚಂದ್ರನ ಬಗ್ಗೆ ಸಂಶೋಧನೆ ನಡೆಸಲು ಚಂದ್ರಾಯನ 1 ಎಂಬ ಯೋಜನೆಯ ತೆವಲು ಏಕೆ?

ಮೊನ್ನೆ ಎಸ್.ಕೆ. ದಾಸ್ ಎಂಬುವವರು ಮಕ್ಕಳಿಗಾಗಿ ಬರೆದಿರುವ 'ಮಿಷನ್ ಮೂನ್' ಎಂಬ ಇಂಗ್ಲಿಷ್ ಪುಸ್ತಕ ಓದಿದೆ. ಆ ಪುಸ್ತಕದಲ್ಲಿ ಬಹಳಷ್ಟು ವಿಷಯಗಳನ್ನು ದಾಸ್ ಅವರು ನೀಡಿದ್ದು ಚಂದ್ರನನ್ನು ಹೇಗೆ ಮಾನವರು ಬಳಸಿಕೊಳ್ಳಲು ಹೊರಟಿದ್ದಾರೆ ಎಂದು ಅರ್ಥವಾಯಿತು.

ದಾಸ್ ಅವರ ಪ್ರಕಾರ ಚಂದಿರನಲ್ಲಿ ಖನಿಜಗಳ ಅಪಾರ ಭಂಡಾರವೇ ಅಡಗಿದೆಯಂತೆ. ಚಂದಿರನಲ್ಲೂ ಭೂಮಿಯ ಲ್ಲಿನಂತೆ ಕಬ್ಬಿಣ, ಸಿಲಿಕಾನ್, ಅಲ್ಯುಮಿನಿಯಮ್, ಕಾಲ್ಸಿಯಮ್, ಮೆಗ್ನೆಶಿಯಮ್ ಮತ್ತು ಟೈಟೆನಿಯಮ್ ಗಣಿಗಳಿವೆಯಂತೆ. ಅಂದರೆ ಇಲ್ಲಿನಂತೆ ಚಂದಿರನ ಮೇಲೂ ಗಣಿಗಾರಿಕೆ ಮಾಡಲಾರಂಭಿಸಿದರೆ, ಅಲ್ಲಿ ಸಿಗುವ ಈ ಖನಿಜ ಸಂಪತ್ತಿನಿಂದ ಮನುಷ್ಯ ಇನ್ನೂ ಹೆಚ್ಚಿಚ್ಚು ಕಟ್ಟಡಗಳನ್ನು ಕಟ್ಟಬಹುದು, ಕಾರ್ ಮತ್ತು ಗನ್‌ಗಳನ್ನು ತಯಾರಿಸ ಬಹುದು, ಕಂಪ್ಯೂಟರ್, ಬ್ಯಾಟರಿ, ಕೇಬಲ್‌ಗಳನ್ನು ತಯಾರಿಸಬಹುದು....

ಇದೆಲ್ಲಕ್ಕಿಂತ ಮುಖ್ಯವಾಗಿ ಚಂದಿರನ ಮೇಲೆ ಹೀಲಿಯಮ್-3 ಎಂಬ ಅನಿಲ ಕೂಡ ಇದೆಯಂತೆ. ಈ ಹೀಲಿಯಮ್-3 ಯಾವುದು ಗೊತ್ತಾ? ಮಕ್ಕಳ ಗ್ಯಾಸ್ ಬಲೂನ್‌ಗಳಿಗೆ ತುಂಬುತ್ತಾರಲ್ಲ ಅದೇ ಅನಿಲ. ಆದರೆ ಈ ಹೀಲಿಯಮ್-3 ಅನ್ನು ಒಂದು ಕಿಲೋ ಹೈಡ್ರೋಜನ್‌ನ ಐಸೋಟೋಪಾದ ಡ್ಯೂಟರಿಯಮ್‌ನೊಂದಿಗೆ ಸುಟ್ಟರೆ 19 ಮೆಗಾವಾಟ್ ವರ್ಷಗಳಷ್ಟು ವಿದ್ಯುತ್ ಅನ್ನು ಕೊಡುತ್ತದಂತೆ.

ಭೂಮಿಯ ಮೇಲೆ ಹೀಲಿಯಮ್-3 ಕಡಿಮೆ ಪ್ರಮಾಣದಲ್ಲಿದೆ. ಆದರೆ ಜಗತ್ತಿನಾದ್ಯಂತ ಪ್ರತಿ ವರ್ಷ 100 ಟನ್‌ಗಳಷ್ಟು ಹೀಲಿಯಮ್-3 ಗೆ ಬೇಡಿಕೆ ಇದ್ದು ಅದರ ಪ್ರತಿ ಟನ್ನಿನ ರೇಟ್ ಮೂರು ಬಿಲಿಯನ್ ಡಾಲರ್‌ಗಳಷ್ಟು. ಆದರೆ ಚಂದಿರನ ಮೇಲೆ ವಿಜ್ಞಾನಿಗಳ ಅಂದಾಜಿನ ಪ್ರಕಾರ 11,00,000 ಟನ್‌ಗಳಷ್ಟು ಹೀಲಿಯಮ್-3 ಇದೆ. ಇದರಲ್ಲಿ ಕೇವಲ 25 ಟನ್‌ಗಳಷ್ಟು ಹೀಲಿಯಮ್-3 ಮೂಲಕ ಅಮೆರಿಕಾಕ್ಕೆ ಒಂದು ವರ್ಷದಲ್ಲಿ ಬೇಕಾಗುವಷ್ಟು ವಿದ್ಯುತ್ ಅನ್ನು ತಯಾರಿಸಬಹುದು ಎಂದರೆ ಇನ್ನು 11,00,000 ಟನ್‌ಗಳಷ್ಟು ಹೀಲಿಯಮ್‌ನಿಂದ ಇನ್ನೇನೇನು ಸಾಧ್ಯ ಎಂದು ಊಹಿಸಿ.

ಅಂದರೆ ಇದೆಲ್ಲದರ ಅರ್ಥ ಏನು? ಭೂಮಿಯಲ್ಲಿನ ಖನಿಜ ಸಂಪತ್ತನ್ನು ಲೂಟಿ ಮಾಡಿದ ಮೇಲೆ ಚಂದಿರನನ್ನೂ ಲೂಟಿ ಮಾಡುವ ಉದ್ದೇಶ ಮಾನವರದ್ದು ಎಂದಲ್ಲವೇ? ಅದಕ್ಕೇ ಇಷ್ಟೆಲ್ಲಾ ರಾಕೆಟ್, ಸ್ಯಾಟ್‌ಲೈಟ್ ಮತ್ತು ಮೂನ್ ಲ್ಯಾಂಡಿಂಗ್‌ನಂತಹ ಕಸರತ್ತುಗಳಲ್ಲವೇ?

ಚಂದ್ರನ ಮೇಲೆ ಸದ್ಯದಲ್ಲೇ ಶಾಶ್ವತ ಕ್ಯಾಂಪ್‌ಗಳನ್ನು ಸ್ಥಾಪಿಸಿ ಅಲ್ಲಿನ ಖನಿಜ ಭಂಡಾರವನ್ನು ಲೂಟಿ ಮಾಡುವ ಉದ್ದೇಶ ಮಾನವರದ್ದು. ಆ ಚಿಂತನೆ ನಮ್ಮ ಇಸ್ರೋ ವಿಜ್ಞಾನಿಗಳಿಗೂ ಇದ್ದು ಅವರಾಗಲೇ ಚಂದ್ರನ ಮೇಲಿನ ತಮ್ಮ ಶಿಬಿರಕ್ಕೆ "ಚಂದ್ರ ವಿಹಾರ" ಎಂಬ ಹೆಸರನ್ನೂ ಆಯ್ಕೆ ಮಾಡಿದ್ದಾರಂತೆ.

ಮಾನವರ ಸ್ವಾರ್ಥ ಚಂದಾಮಾಮಾನನ್ನು ಕೊಳ್ಳೆ ಹೊಡೆಯುವಷ್ಟು ಬೆಳೆದಿದೆ ಎಂದರೆ ಈ ಜಗತ್ತಿಗೆ ಉಳಿಗಾಲವಿದೆಯೇ?

ಒಂದು ಮಕ್ಕಳ ಪುಸ್ತಕದಿಂದ ಕಲಿತದ್ದನ್ನು ಇಲ್ಲಿ ಹಂಚಿಕೊಂಡಿದ್ದೇವೆ....

* * * * * *

ಈ ಜಾತಿಯೆಂಬ ಅನಿಷ್ಟ ಪದ್ಧತಿ ಎಷ್ಟು ಕ್ರೂರವಾಗಬಲ್ಲದು ಎಂಬುದಕ್ಕೆ ಇತ್ತೀಚೆಗೆ ಜಾರ್ಖಂಡದ ಕೊಡೆರ್ಮ ನಗರದಲ್ಲಿ ಸಾವನ್ನಪ್ಪಿದ ಪತ್ರಕರ್ತೆ ನಿರುಪಮಾ ಪಾಠಕ್‌ಳ ಸಾವೇ ಒಂದು ಉದಾಹರಣೆ.

ನಿರುಪಮಾ ಪಾಠಕ್ ಓರ್ವ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿದವಳು. ಅಕ್ಷರಸ್ಥ ತಂದೆ ಬ್ಯಾಂಕ್ ಒಂದರಲ್ಲಿ ಆಫೀಸರ್. ಆಕೆಯ ಇಬ್ಬರು ಸಹೋದರರೂ ಪಿಎಚ್‌ಡಿ ಮಾಡಿಕೊಂಡಿ ರುವ ವಿದ್ಯಾವಂತರು. ಆಕೆಯ ತಾಯಿ ಅಪ್ಪಟ ಗೃಹಸ್ಥೆ.

ಇಂತಹ ವಿದ್ಯಾವಂತ ಕುಟುಂಬದ ನಿರುಪಮಾ ದೆಹಲಿಯಲ್ಲಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜರ್ನಲಿಸಂ (ನಾನು ಮತ್ತು ಸಾಕೇತ್ ರಾಜನ್ ಕೂಡ ಹಿಂದೊಮ್ಮೆ ಪತ್ರಿಕೋದ್ಯಮದ ಪಾಠ ಕಲಿತದ್ದೂ ಇದೇ ಕಾಲೇಜಿನಲ್ಲಿ)ನಿಂದ ಪದವಿ ಪಡೆದು ಪ್ರಮುಖ ಬಿಸಿನೆಸ್ ದಿನಪತ್ರಿಕೆಯಾದ 'ಬಿಸಿನೆಸ್ ಸ್ಟಾಂಡರ್ಡ್'ನಲ್ಲಿ ಕೆಲಸ ಮಾಡುತ್ತಿದ್ದಳು.

ಆದರೆ ನಿರುಪಮಾ ಐಐಎಂಸಿಯಲ್ಲಿ ಓದುತ್ತಿದ್ದಾಗ ಕಾಯಸ್ಥ (ಹಿಂದುಳಿದ) ಜಾತಿಗೆ ಸೇರಿದ ತನ್ನ ಸಹಪಾಠಿಯೊಬ್ಬನನ್ನು ಪ್ರೇಮಿಸಲಾರಂಭಿಸಿದಳು. ಇದು ಆಕೆಯ ಮನೆಯವರಿಗೆ ಗೊತ್ತಾಗಿ ದೊಡ್ಡ ರಂಪಾಟ ಮಾಡಿದರು. ಬ್ರಾಹ್ಮಣ ಕುಟುಂಬದವಳಾದ ನಿರುಪಮಾ ಹಿಂದುಳಿದ ಜಾತಿಯ ಯುವಕನನ್ನು ಮದುವೆ ಆಗಬಾರದೆಂದು ಆಕೆಯ ಮನೆಯವರು ಪಟ್ಟುಹಿಡಿದರು. ಆದರೆ ನಿರುಪಮಾಳ ಪ್ರೀತಿಗೆ ಜಾತಿ ಎಂಬ ಅನಿಷ್ಟ ಕಾಣಿಸಲೇ ಇಲ್ಲ. ಆಕೆ ಆತನನ್ನು ಎಷ್ಟು ಪ್ರೀತಿಸಿದ್ದಳೆಂದರೆ, ಆತನೊಂದಿಗೆ ಆಕೆಯ ಸಂಬಂಧ ಅದೆಷ್ಟು ಗಾಢವಾಗಿತ್ತೆಂದರೆ ಅವರ ವಿವಾಹ ಇನ್ನೂ ಅಧಿಕೃತವಾಗಿ ನೆರವೇರಿರದಿದ್ದರೂ ಆಕೆ ಮೂರು ತಿಂಗಳ ಗರ್ಭಿಣಿಯಾಗಿದ್ದಳು.

ಅಂತಹ ನಿರುಪಮಾಳನ್ನು "ಅಮ್ಮನಿಗೆ ತೀವ್ರ ಕಾಯಿಲೆ, ಬೇಗನೆ ಬಾ" ಎಂದು ಕೊಡೆರ್ಮಾಗೆ ಕರೆಸಿಕೊಂಡರು ಅವಳ ಕುಟುಂಬದವರು. ಅಲ್ಲಿ ಆಕೆ ತನ್ನ ಪ್ರಿಯಕರನನ್ನು ಮರೆತು ಬಿಡಬೇಕೆಂದೂ, ತಮ್ಮ ವಂಶದ 'ಮರ್ಯಾದೆ' ಯನ್ನು ಉಳಿಸಬೇಕೆಂದೂ ಒತ್ತಡ ಹೇರಿದರು.

ಇತ್ತೀಚೆಗೆ ನಿರುಪಮಾ ಸಾವನ್ನಪ್ಪಿದಳು. ಆಕೆ ಸತ್ತಾಗ ಆಕೆಯೊಂದಿಗೆ ಮನೆಯಲ್ಲಿ ಇದ್ದದ್ದು ಅವಳ ತಾಯಿ ಮಾತ್ರ. ಮೊದಮೊದಲು ಪೊಲೀಸರಿಗೆ ನಿರುಪಮಾ ವಿದ್ಯುತ್ ಶಾಕ್ ಹೊಡೆದು ತೀರಿಕೊಂಡಳು ಎಂದು ಹೇಳಿದ ತಾಯಿ, ಆನಂತರ ಆಕೆ ನೇಣು ಹಾಕಿಕೊಂಡು ಸತ್ತಳು ಎಂದು ಹೇಳಿದಳು.

ಪೊಲೀಸ್ ತನಿಖೆಯ ಪ್ರಕಾರ ನಿರುಪಮಾ ಸತ್ತಿದ್ದು ಉಸಿರುಗಟ್ಟುವಿಕೆಯಿಂದ. ಆದರೆ ಅದು ನೇಣು ಹಾಕಿ ಕೊಂಡಾಗ ಆದ ಉಸಿರುಗಟ್ಟುವಿಕೆಯಲ್ಲ, ಬದಲಾಗಿ ಯಾರೋ ನಿರುಪಮಾಳ ಮುಖದ ಮೇಲೆ ದಿಂಬನ್ನು ಒತ್ತಿ ಹಿಡಿದಿದ್ದರಿಂದ ಆಕೆ ಉಸಿರುಗಟ್ಟಿ ಸತ್ತಿದ್ದಳು.

ಯಾವ ತಾಯಿಯ ಆರೋಗ್ಯ ಸರಿ ಇಲ್ಲವೆಂದು ಆಕೆಯನ್ನು ನೋಡಲು ನಿರುಪಮಾ ಬಂದಿದ್ದಳೋ, ಅದೇ ತಾಯಿ ತಾನು ಹೆತ್ತ ಕುಡಿಯ ಜೀವವನ್ನೇ ನಿರ್ದಾಕ್ಷಿಣ್ಯವಾಗಿ ಚಿವುಟಿ ಹಾಕಿದ್ದಳು.

ಪೊಲೀಸರು ಈಗ ನಿರುಪಮಾಳ ತಾಯಿಯನ್ನು ಬಂಧಿಸಿದ್ದಾರೆ.


ತನ್ನ ಮಗಳ ಸಂತೋಷಕ್ಕಿಂತಲೂ, ನೆಮ್ಮದಿಯ ಬದುಕಿಗಿಂತಲೂ ಓರ್ವ ತಾಯಿಗೆ ತನ್ನ ಜಾತಿಯ ಹೆಚ್ಚುಗಾರಿಕೆ ಮತ್ತು ಕುಟುಂಬದ ಮರ್ಯಾದೆಯೇ ಮುಖ್ಯವಾಗುತ್ತದೆಂದರೆ ಇದೆಷ್ಟು ಅಮಾನವೀಯ ಪದ್ಧತಿ? 21ನೇ ಶತಮಾನದಲ್ಲೂ ಪಾಠಕರಂತಹ ಓರ್ವ ಮಧ್ಯಮ ವರ್ಗದ ಕುಟುಂಬ, ವಿದ್ಯಾವಂತರ ಸಂಸಾರ ಕೂಡ ಈ ಜಾತಿಯ ಗಡಿಯನ್ನು ದಾಟಲಾಗದೆ ತನ್ನ ಕುಡಿಯನ್ನೇ ಬಲಿತೆಗೆದುಕೊಳ್ಳುತ್ತದೆಂದರೆ ನಮ್ಮ ದೇಶ ನಿಜವಾಗಲೂ ಜಾತ್ಯತೀತವಾಗುವುದೆಂದು? ●

ಹರತಾಳು ಹಾಲಪ್ಪನನ್ನು ಕುರಿತು ಚಾಲ್ತಿಗೆ ಬಂದಿರುವ ಜೋಕ್‌ಗಳು

ರಾಸಲೀಲೆ ಪ್ರಕರಣಗಳ ರ್‍ಯಾಂಕಿಂಗ್ ಪಟ್ಟಿಯಲ್ಲಿ ಎರಡನೆ ಸ್ಥಾನಕ್ಕೆ ಕುಸಿದ ನಿತ್ಯಾನಂದ, ಮೊದಲ ರ್‍ಯಾಂಕಿಗೆ ಜಿಗಿದ ಹರತಾಳು ಹಾಲಪ್ಪ!

* * * * *

Buy 1 get 1 free ಯೋಜನೆಯಲ್ಲಿ ಈಗ ನಿತ್ಯಾನಂದನ ಒಂದು ಸಿಡಿ ಖರೀದಿಸಿದರೆ ಹಾಲಪ್ಪನ ಒಂದು ಸಿಡಿ ಫ್ರೀ!!


ಕತ್ತಿಗುಪ್ಪೆ ಲಿಂಗ

ಕತ್ತಿಗುಪ್ಪೆ ಲಿಂಗನ ಮರ್ಡರ್ ಸೈತಾನ್ ಸೈಕಲ್ ರವಿ ಪೊಲೀಸರಿಗೆ ಚಳ್ಳೆ ತಿನ್ನಿಸಿದ್ದು

ಪೊಲೀಸರು ಚಾಪೆಯಡಿ ನುಸುಳಿದರೆ ಕಿರಾತಕ ಸೈಕಲ್ ರವಿ ರಂಗೋಲಿ ಕೆಳಗೆ ನುಗ್ಗಿ ಚಳ್ಳೆ ಹಣ್ಣು ತಿನ್ನಿಸಿದ್ದಾನೆ. ಒಂದು ಎನ್‌ಕೌಂಟರ್ ಮಿಸ್ಸಾಗಿದೆ. ಪೊಲೀಸರು ಅದರಲ್ಲೂ ಜಂಟಿ ಕಮಿಷನರ್ ಅಲೋಕ್‌ಕುಮಾರ್ ಅದೆಷ್ಟು ಮೈಪರಚಿಕೊಂಡರೂ.

ಏಪ್ರಿಲ್ 29 ರ ಮಧ್ಯಾಹ್ನ ಇಟ್ಟಮಡುವಿನ ಮನೆಗೇ ನುಗ್ಗಿ ಲಿಂಗನನ್ನು ಕತ್ತರಿಸಿ ಹಾಕಿದ ಸೈಕಲ್ ರವಿಯ ಧಾರ್ಷ್ಟ್ಯಕ್ಕೆ ಕೇವಲ ಅಂಡರ್‌ವರ್ಲ್ಡ್ ಮಾತ್ರವಲ್ಲ ಪೊಲೀಸರೂ ದಂಗುಬಡಿದಿದ್ದರು. ಪಾತಕ ಪಾಳಯದಲ್ಲಿ ದುಷ್ಮನಿ ಅದೆಂಥದ್ದೇ ಇದ್ದರೂ ರೌಡಿಯೊಬ್ಬನ ಮನೆಗೇ ನುಗ್ಗಿ ಆತನ ಹೆಂಡತಿ ಮಕ್ಕಳ ಮುಂದೆಯೇ ಕತ್ತರಿಸಿಕೊಲ್ಲುವಂಥ ಕ್ರೌರ್ಯಕ್ಕೆ ಈತನಕ ಯಾವೊಬ್ಬ ದುರಾಚಾರಿಯೂ ಕೈಹಾಕಿರಲಿಲ್ಲ. ಸಾಕ್ಷಾತ್ ಸೈತಾನ್ ಸ್ವರೂಪಿ ಸೈಕಲ್ ರವಿಗೆ ನೀತಿ ನಿಜಾಯಿತಿಹಾಳಾಗಲಿ ಪೊಲೀಸ್ ಭೀತಿಯೂ ಇದ್ದಂತಿರಲಿಲ್ಲ.

ಪಾತಕಿಯೊಬ್ಬ ಈ ಮಟ್ಟಕ್ಕಿಳಿದ ಎಂದರೆ ಅದು ಪೊಲೀಸ್ ಅಸ್ತಿತ್ವಕ್ಕೆ ಸವಾಲೆಸೆದಂತೆ. ಇಲ್ಲಿಗೆ ವರ್ಷದ ಹಿಂದೆ ಅಂದರೆ 2009 ರ ಏಪ್ರಿಲ್ 3 ರಂದು ಲಾಲ್‌ಭಾಗ್‌ನಲ್ಲಿ ತನ್ನ ತಾಯಿ ಮತ್ತು ಪತ್ನಿಯ ಜೊತೆ ಬೆಳಗಿನ ವಾಕಿಂಗ್ ಮಾಡುತ್ತಿದ್ದಾಗಲೇ ಸೈಕಲ್ ರವಿ, ಪರಂಧಾಮನ ಜೊತೆ ಸೇರಿ ಇಟ್ಟಮಡು ಬಾಬು ಎಂಬ ಬಿಜೆಪಿ ನಾಯಕನನ್ನು ಕೊಂದದ್ದು ಕೂಡ ಇಂಥದ್ದೇ ಕಿರಾತಕ ಪ್ರವೃತ್ತಿಯ ಪ್ರತೀಕವಾಗಿತ್ತು. ಬಾಬು ಕೊಲೆ ನಡೆದ ಮೂರನೇ ದಿನಕ್ಕೇ ಪರಂಧಾಮನನ್ನು ಎನ್‌ಕೌಂಟರ್ ಮಾಡಿ ಪೊಲೀಸರು ಎದುರುತ್ತರ ಕೊಟ್ಟರಾದರೂ ಪರಂಧಾಮನಿಗಿಂತಲೂ ಇಪ್ಪತ್ತು ಪಟ್ಟು ಅನಾಹುತಕಾರಿಯಾದ ಸೈಕಲ್ ರವಿ ಬಚಾವಾಗಿಬಿಟ್ಟ.


ಅವತ್ತು ಬೆಳ್ಳಂಬೆಳಗ್ಗೇ ಲಾಲ್‌ಭಾಗ್‌ಗೆ ನುಗ್ಗಿ ಇಟ್ಟಮಡು ಬಾಬುವನ್ನು ಮುಗಿಸಿದ ಸೈಕಲ್ ರವಿಗಾಗಿ ಪೊಲೀಸರು ಏನೆಲ್ಲಾ ಬಲೆ ಬೀಸಿದರೂ ಚಾಲಾಕಿ ರವಿ ಮಾತ್ರ ಸಿಗಲೇ ಇಲ್ಲ. ಹಾಗೇ ಪೊಲೀಸರಿಗೆ ಚಳ್ಳೆಹಣ್ಣು ತಿನ್ನಿಸಿಕೊಂಡೇ ಬಂದವನು ಮೊನ್ನೆ ಏಕಾಏಕಿ ಲಿಂಗನ ಮನೆಗೇ ನುಗ್ಗಿ ಇನ್ನೊಂದು ಅನಾಹುತಕಾರಿ ಕೊಲೆ ಎಸಗಿದ್ದು ಪೊಲೀಸರನ್ನು ಅದೆಂಥಾ ಫಜೀತಿಗೆ ಬೀಳಿಸಿತ್ತೆಂದರೆ; ಇನ್ನು ಆತ ಉಳಿಯಕೂಡದೆಂದು ಸ್ವತಃ ಜಂಟಿ ಪೊಲೀಸ್ ಕಮಿಷನರ್ ಅಲೋಕ್‌ಕುಮಾರ್ ಕಿಡಿಕಾರಿದ್ದರು. ಮೊದಲೇ ಆತನ ಚಾಲು ಗೊತ್ತಿದ್ದರಿಂದ 'ಯಾರೂ ಆತನನ್ನು ಸರೆಂಡರ್ ಮಾಡಿಸಿಕೊಳ್ಳಬೇಡಿ...' ಎಂದು ಬೆಂಗಳೂರಿನ ಪ್ರತಿ ಪೊಲೀಸ್ ಠಾಣೆಗೂ ಅಲಿಖಿತ ಫರ್ಮಾನು ಹೊರಡಿಸಿದ್ದರು.


ಅಲೋಕ್‌ಕುಮಾರ್

ಸ್ವತಃ ಅಲೋಕ್‌ಕುಮಾರ್ ಸಾಹೇಬರೇ ಇಂಥದೊಂದು ಆದೇಶ ಹೊರಡಿಸಿದ ಮೇಲೆ ಯಾವ ಇನ್ಸ್‌ಪೆಕ್ಟರ್ ತಾನೇ ಸೈಕಲ್ ರವಿಯನ್ನು ಸರೆಂಡರ್ ಮಾಡಿಸಿಕೊಳ್ಳುತ್ತಾನೆ?

ಇಷ್ಟಾಗಿದ್ದೇ ತಡ, ಸೈಕಲ್ ರವಿಯ ಎನಕೌಂಟರ್ ಗ್ಯಾರಂಟಿಯೆಂಬುದು ಬಟ್ಟಂಬಯಲಾಗಿದೆ. ಈ ಹೊತ್ತಿಗಾಗಲೇ ಒಂದಿಬ್ಬರು ಆಳ್ಕಾಟಗಳ ಮೂಲಕ ಸರೆಂಡರಾಗಲು ಡೀಲು ಕುದುರಿಸುತ್ತಿದ್ದ ರವಿಗೆ ಯಾವೊಬ್ಬ ಪೊಲೀಸ್ ಅಧಿಕಾರಿಯೂ ಈ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ ಎಂಬುದು ನಿಕ್ಕಿಯಾಗುತ್ತಿದ್ದಂತೆ ತನ್ನ ಎನ್‌ಕೌಂಟರ್ ಗ್ಯಾರಂಟಿಯೆಂಬುದು ಖಾತರಿಯಾಗಿದೆ. ಬಚಾವಾಗುವ ಕೊನೆಯ ಮಾರ್ಗೋಪಾಯವೆಂಬಂತೆ ತನ್ನ ವಕೀಲ ಲಕ್ಷ್ಮಿಕಾಂತ್‌ಗೆ ವಿಷಯ ಮುಟ್ಟಿಸಿದ್ದಾನೆ. ಅದರ ಪರಿಣಾಮ ಗೊತ್ತಾಗಿದ್ದು ಮರುದಿನ ಅಂದರೆ ಮೇ 3ರಂದು.

ಅವತ್ತು ಬೆಳಗ್ಗೆಯೇ ಪೊಲೀಸ್ ಮಹಾ ನಿರ್ದೇಶಕರ ಕಚೇರಿ ಪಕ್ಕದ ಎರಡನೇ ಜೆಎಂಎಫ್‌ಸಿ ಕೋರ್ಟ್‌ನ ಕಟಕಟೆ ಪಕ್ಕದ ಕುರ್ಚಿಯಲ್ಲಿ ಸದ್ದಿಲ್ಲದೆ ಹೋಗಿ ರವಿ ಕುಳಿತಿದ್ದ. ಜೊತೆಗೆ ಮತ್ತೊಬ್ಬ ಹಂತಕ ಜಾಂಟಿಯೂ ಇದ್ದ. ಒಮ್ಮೆ ಕೋರ್ಟ್ ಆವರಣ ಹೊಕ್ಕ ಯಾವೊಬ್ಬ ಪಾತಕಿಯನ್ನು ಪೊಲೀಸರು ಮುಟ್ಟುವಂತಿಲ್ಲ. ಅದರಲ್ಲೂ ಕೋರ್ಟ್ ಕಲಾಪ ಶುರುವಾದ ಮೇಲೆ ಜಡ್ಜ್ ಎದುರಿಗೆ ಬಂದು ಕೂತ ಮೇಲಂತೂ ಪೊಲೀಸರು ಕೆಮ್ಮುವಂತೆಯೇ ಇಲ್ಲ. ರವಿ ಕೋರ್ಟ್‌ಗೇ ಬಂದು ಕೋರ್ಟ್ ಹಾಲ್‌ನಲ್ಲೇ ಕೂತಿದ್ದಾನೆಂಬ ಮಾಹಿತಿ ಸಿಸಿಬಿಯ ಬಾಳೇಗೌಡ ಮತ್ತು ಅಶೋಕನ್‌ಗೆ ಸಿಕ್ಕಿದೆ. ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ವಾಸುದೇವ ನಾಯಕ್ ಕೂಡ ಧಾವಿಸಿ ಬಂದಿದ್ದಾರೆ. ಪೊಲೀಸರದ್ದು ಎಂಥಾ ಫಜೀತಿಯೆಂದರೆ ಕಣ್ಣೆದುರೇ ಹಂತಕ ಕುಳಿತಿದ್ದರೂ ಮುಟ್ಟುವಂತಿಲ್ಲ. ನೋಡುನೋಡುತ್ತಿದ್ದಂತೆಯೇ ವಕೀಲ ಲಕ್ಷ್ಮಿಕಾಂತ್ ನ್ಯಾಯಾಧೀಶರಿಗೆ ಅರ್ಜಿ ಸಲ್ಲಿಸಿಬಿಟ್ಟರು. ಮಧ್ಯಾಹ್ನದ ಊಟಕ್ಕೆ ಬಿಡುವ ಮೊದಲೇ ರವಿಯ ಅರ್ಜಿ ಕೈಗೆತ್ತಿಕೊಂಡ ನ್ಯಾಯಾಧೀಶರು ಜಾಂಟಿಯೂ ಸೇರಿದಂತೆ ಸೈಕಲ್ ರವಿಯನ್ನು ನ್ಯಾಯಾಂಗದ ಕಸ್ಟಡಿಗೆ ಒಪ್ಪಿಸಿಬಿಟ್ಟರು. ಒಮ್ಮೆ ಕೋರ್ಟ್‌ಗೆ ಶರಣಾಗಿ ಅಲ್ಲಿನ ಜಡ್ಜ್ ಆದೇಶದ ಮೇರೆಗೆ ಯಾರೇ ಕೊಲೆಗಡುಕನನ್ನು ಪೊಲೀಸ್ ವಶಕ್ಕೆ ಕೊಟ್ಟರೆಂದರೆ ಅಲ್ಲಿಗೆ ಆತನ ಎನ್‌ಕೌಂಟರ್ ಯೋಚನೆಯನ್ನೇ ಪೊಲೀಸರು ಕೈಬಿಡುತ್ತಾರೆ. ಕೋರ್ಟ್‌ಗೆ ಶರಣಾದ ಯಾರೇ ಆರೋಪಿಯನ್ನು ಎನ್‌ಕೌಂಟರ್ ಮಾಡುವ ರಿಸ್ಕ್‌ಗೆ ಪೊಲೀಸರು ಯಾವತ್ತೂ ಕೈಹಾಕುವುದಿಲ್ಲ.


ಸೈಕಲ್ ರವಿ

ಇದು ಗೊತ್ತಿದ್ದೇ ರವಿ ತನ್ನ ಜೊತೆ ಜಾಂಟಿಯನ್ನು ಕರಕೊಂಡು ಕೋರ್ಟ್ ಆವರಣವನ್ನು ಹೊಕ್ಕಿದ್ದ. ಹಾಗೇ ಜ್ಯುಡಿಷಿಯಲ್ ಕಸ್ಟಡಿಗೆ ಒಪ್ಪಿಸಲ್ಪಟ್ಟ ಸೈಕಲ್ ರವಿ ಮತ್ತು ಜಾಂಟಿಯನ್ನು ಬೆನ್ನತ್ತಿದ ಟೀವಿ ವರದಿಗಾರರು ನೇರವಾಗಿ ಚನ್ನಮ್ಮನಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ಬಂದಿದ್ದಾರೆ. ಇನ್ಸ್‌ಪೆಕ್ಟರ್ ವಾಸುದೇವ ನಾಯಕ್ ಬೆಂಗಳೂರಿಗೇ ಹೊಸಬ. ಎಸ್.ಕೆ. ಉಮೇಶ್, ಲೋಕೇಶ್ವರ್, ನಂಜುಂಡೇಗೌಡ, ರೇವಣ್ಣರಂಥ ಇನ್ಸ್‌ಪೆಕ್ಟರ್‌ಗಳಾಗಿದ್ದರೆ ಹೇಗೆ ಟೀವಿಗಳ ಕಣ್ಣುತಪ್ಪಿಸಿ ಕಾರ್ಯಸಾಧಿಸಬೇಕೆಂಬುದು ಕರಗತವಾಗಿರುತ್ತದೆ. ಆದರೆ ನಾಯಕ್ ದುಡುಕಿಗೆ ಬಿದ್ದು ಪೊಲೀಸ್ ಠಾಣೆಯಲ್ಲೇ ಹಂತಕರನ್ನು ಟೀವಿ ಕ್ಯಾಮೆರಾಗಳ ಮುಂದೆ ಮಾತಾಡಲು ಬಿಟ್ಟರು. ಎದುರಿಗೆ ಟೀವಿ ಕ್ಯಾಮೆರಾ ಬಂದಿದ್ದೇ ತಡ, ಸೈಕಲ್ ರವಿ ವೀರಾವೇಶದಲ್ಲಿ 'ಲಿಂಗನ ಕೊಲೆಗೂ ನನಗೂ ಸಂಬಂಧವೇ ಇಲ್ಲ, ನಾನು ಕೊಲೆ ಮಾಡೇ ಇಲ್ಲ...' ಎಂದು ಡೈಲಾಗಿನ ಮೇಲೇ ಡೈಲಾಗು ಹೊಡೆದುಬಿಟ್ಟ. ನೇರವಾಗಿ ಕೋರ್ಟ್‌ಗೆ ಬಂದು, ಕೋರ್ಟ್ ಮೂಲಕವೇ ಪೊಲೀಸ್ ಕಸ್ಟಡಿಗೆ ಬಂದು, ಪೊಲೀಸ್ ಠಾಣೆಯಲ್ಲೇ ಟಿವಿಗಳಿಗೆ ಸಂದರ್ಶನ ಕೊಟ್ಟ ಮೇಲೆ ಯಾವ ಪೊಲೀಸ್ ಅಧಿಕಾರಿ ತಾನೇ ಎನಕೌಂಟರ್‌ನಂಥ ರಿಸ್ಕಿಗೆ ಕೈಹಾಕುತ್ತಾನೆ?

ಇದು ಸೈಕಲ್ ರವಿ ಎನ್‌ಕೌಂಟರ್‌ನಿಂದ ಬಚಾವಾದ ರೀತಿಯಾದರೆ ಆತ ಲಿಂಗನನ್ನು ಮುಗಿಸಿದ್ದು ಇನ್ನೂ ನಿಗೂಢ ಮತ್ತು ಭಯಾನಕ. ಕೊಲೆಗೂ ತನಗೂ ಸಂಬಂಧವಿಲ್ಲ ಎನ್ನುವ ಇದೇ ಸೈಕಲ್ ರವಿ ಈಗ ತನ್ನ ಬಾಮೈದ ರಾಜೇಂದ್ರನ ನೇತೃತ್ವದ ಮತ್ತೊಂದು ಹಂತಕ ಪಡೆಯನ್ನು ಹನುಮಂತನಗರ ಪೊಲೀಸರಿಗೆ ಸರೆಂಡರ್ ಮಾಡಿಸಿದ್ದಾನೆ. ಅತ್ತ ರವಿ ಕೋರ್ಟ್‌ಗೆ ಬಂದು ಶರಣಾಗುವುದಕ್ಕೂ, ಇತ್ತ ಮಿಕ್ಕೆಲ್ಲ ಹಂತಕರು ಬೇರೊಂದು ಪೊಲೀಸ್ ಠಾಣೆಯ ಮೂಲಕ ಪ್ರತ್ಯಕ್ಷರಾಗಿದ್ದಕ್ಕೂ ಪರಸ್ಪರ ಸಂಬಂಧವಿದ್ದೇ ಇದೆ.

ಸದ್ಯ ಚನ್ನಮ್ಮನಕೆರೆ ಪೊಲೀಸರು ಬಾಯಿ ಬಿಡಿಸಿದ ಪ್ರಕಾರ ಲಿಂಗನ ಚಲನವಲನಗಳ ಬಗ್ಗೆ ಸೈಕಲ್‌ಗೆ ಮಾಹಿತಿ ಕೊಡುತ್ತಿದ್ದದ್ದು ಅದೇ ಇಟ್ಟಮಡುವಿನ ಜಿಮ್ಮರ್ ನವೀನ. ಈತ ಇಟ್ಟಮಡು ಪಕ್ಕದ ಭುವನೇಶ್ವರಿನಗರದವನು. ಈತನ ಅಣ್ಣ ಯಾರಿಂದಲೋ ಸಾಲ ಪಡೆದು ಕೊಟ್ಟ ಚೆಕ್ ಬೌನ್ಸ್ ಆಗಿತ್ತು. ಸಾಲ ಕೊಟ್ಟವನು ಲಿಂಗನ ಕಡೆಯವನು. ಆತನ ಪರವಾಗಿ ಲಿಂಗ ನವೀನನ ಅಣ್ಣನಿಗೆ ಫೋನ್ ಮಾಡಿ ಸಾಲ ತೀರಿಸುವಂತೆ ಧಮಕಿ ಹಾಕಿದ್ದನಂತೆ. 'ಅದಕ್ಕೆ ನಾನು ಕ್ಯಾಟ್ ವಿಜಿ, ಇಟ್ಟಮಡು ಸಂತೋಷ, ರಾಜೇಂದ್ರ ಅಲಿಯಾಸ್ ಟ್ಯೂಬು, ಮಂಡ್ಯದ ಕರಿಯ ಆನಂದ ಮುಂತಾದವರ ಜೊತೆ ಸೇರಿಕೊಂಡು ಲಿಂಗನ ಮನೆಗೆ ನುಗ್ಗಿ ಕತ್ತರಿಸಿದೆ....' ಎನ್ನುತ್ತಾನೆ ನವೀನ.

ಇದು ನವೀನ ಹೇಳುವ ಕತೆಯಾದರೆ ವಾಸ್ತವವೇ ಬೇರೆಯಿದೆ. ಇಲ್ಲಿಗೆ ಆರು ತಿಂಗಳ ಹಿಂದಿನಿಂದಲೇ ಲಿಂಗ ತನ್ನ ಕತ್ತಿಗುಪ್ಪೆಯ ಮನೆ ಬದಲಿಸಿ ಇಟ್ಟಮಡುವಿನ ತಾಯಿಯ ಮನೆಗೆ ಹೋಗಿಬರುತ್ತಿದ್ದದ್ದನ್ನು ಸೈಕಲ್ ರವಿ ಗಮನಿಸಿದ್ದ. ಮೊದಮೊದಲು ಅಪರೂಪಕ್ಕೆಂಬಂತೆ ಬಂದಿರುತ್ತಿದ್ದ ಲಿಂಗ ಇಲ್ಲಿಗೆ ತಿಂಗಳಿಂದೀಚೆಗೆ ಅಲ್ಲೇ ಉಳಿದಿದ್ದ. ಅದಕ್ಕೂ ಮುನ್ನ ಸೈಕಲ್ ರವಿ ನವೀನನನ್ನು ಲಿಂಗನ ಗ್ಯಾಂಗ್‌ನ ಒಳಕ್ಕೆ ತೂರಿಸಿದ್ದ. ಹೊಸಕೆರೆಹಳ್ಳಿ ರಿಂಗ್ ರಸ್ತೆಯಲ್ಲಿ ಸಾಯಿ ಮೋಟಾರ್ಸ್ ಹಿಂಭಾಗದಲ್ಲಿದ್ದ ಜಿಮ್ಮಿಗೆ ಪ್ರತಿನಿತ್ಯ ನವೀನ ಬರುತ್ತಿದ್ದ. ಹಾಗೇ ಜಿಮ್ ಮುಗಿಸಿಕೊಂಡು ಇಟ್ಟಮಡುವಿನ ಲಿಂಗನ ತಾಯಿಯ ಮನೆಯ ಪಕ್ಕದಲ್ಲಿದ್ದ ಬೇಕರಿ ಬಳಿ ವಿನಾಕಾರಣ ನಿಂತು ಟೀ ಕುಡಿಯುವುದು, ಸಿಗರೇಟ್ ಸೇದುವುದು ಮಾಡಿಕೊಂಡೇ ಇದ್ದ. ಪ್ರತಿನಿತ್ಯ ಅಲ್ಲಿಗೆ ಲಿಂಗನ ಹುಡುಗರೂ ಬರುತ್ತಿದ್ದರು. ಅವರನ್ನು ಮೇಲೆ ಬಿದ್ದು ಪರಿಚಯಿಸಿಕೊಂಡ ನವೀನ ಒಂದೆರಡು ವಾರದಲ್ಲೇ ಲಿಂಗನಿಗೆ ಆತ್ಮೀಯನಾದ.


ಸೈಕಲ್ ರವಿ ಮತ್ತು ಜಾಂಟಿ

ಹೇಗೂ ಬೇಕರಿ ಬಳಿ ಪರಿಚಯವಾದವನಲ್ಲವೆ? ಲಿಂಗನಿಗಾಗಲಿ ಆತನ ಹುಡುಗರಿಗಾಗಲಿ ನವೀನನ ಬಗ್ಗೆ ಗುಮಾನಿ ಬರಲಿಲ್ಲ. ಪರಿಚಯವಾದ ವಾರಕ್ಕೇ ನವೀನನನ್ನು ತನ್ನ ತಾಯಿ ಮನೆಗೇ ಕರೆಸಿಕೊಂಡ ಲಿಂಗ ಮಟನ್ ಊಟ ಹಾಕಿಸಿದ್ದ. ಅದಾಗಿ ವಾರಕ್ಕೇ ನವೀನ ಸಿನಿಮಾ ಸೀಡಿಯೊಂದನ್ನು ಲಿಂಗನಿಗೆ ಕೊಟ್ಟು ಹೋದ. ಪದೇಪದೇ ಲಿಂಗನ ಮನೆಯೆದುರೇ ಹಾದು ಹೋಗುವುದು, ಬಂದಾಗಲೆಲ್ಲ ಲಿಂಗನನ್ನು ಕಂಡು ಮಾತಾಡುವುದು ಮಾಡಿಕೊಂಡೇ ಇದ್ದ ನವೀನ ತನ್ನನ್ನು ಮುಗಿಸಲು ಸೈಕಲ್ ರವಿ ಛೂಬಿಟ್ಟ ಸಾವಿನ ದೂತನೆಂಬುದು ಮಾತ್ರ ಲಿಂಗನಿಗೆ ಗೊತ್ತಾಗಲಿಲ್ಲ.

ಲಿಂಗನ ಓಡಾಟ, ಆರೋಗ್ಯ, ಹುಡುಗರ ವಿವರ, ಮನೆಯ ಪರಿಸ್ಥಿತಿ, ಗಾಡಿಗಳ ಸಂಖ್ಯೆ ಎಲ್ಲವನ್ನೂ ವ್ಯವಸ್ಥಿತವಾಗಿ ಸೈಕಲ್ ರವಿಗೆ ನವೀನ ತಲುಪಿಸುತ್ತಲೇ ಇದ್ದ. ಮಧ್ಯಾಹ್ನದ ಊಟಕ್ಕೆಂದು ಹುಡುಗರೆಲ್ಲ ಪಕ್ಕದ ರಸ್ತೆಯಲ್ಲಿದ್ದ ಮಿಲ್ಟ್ರಿ ಹೋಟೆಲಿಗೆ ಹೋಗುತ್ತಾರೆಂಬ ಮಹತ್ವದ ಮಾಹಿತಿಯನ್ನೂ ಆತನೇ ಕಳಿಸಿ ಹಾಕಿದ್ದ. ಪಾಲಿಕೆ ಚುನಾವಣೆ ಕಳೆದು ಏಪ್ರಿಲ್ 20 ರ ಹೊತ್ತಿಗೆಲ್ಲ ಹಂತಕ ಪಡೆ ರೆಡಿಯಾಗಿದೆ. ಇಟ್ಟಮಡು ಸಂತೋಷ, ಸೈಕಲ್ ರವಿಯ ಪತ್ನಿ ಸೆಲ್ವಿಯ ತಮ್ಮ ರಾಜೇಂದ್ರ, ಕ್ಯಾಟ್ ವಿಜಿ (ಈತ ಕೊಲೆಯಾದ ರವಿ ಸಹಚರ ವೆಂಕಿಯ ಶಿಷ್ಯ), ಮಂಡ್ಯದ ಬಸರಾಳುವಿನ ಕರಿಯ ಆನಂದ, ಜಯನಗರದ ಕಿರಣ, ಬನಾಯ್ಸ್ ತಂಡದಲ್ಲಿದ್ದ ಅರುಣ, ಸೈಕಲ್‌ನ ಬಲಗೈ ಬಂಟ ಜಾಂಟಿ ಮುಂತಾದವರೆಲ್ಲ ರೌಂಡಿಂಗ್ ಶುರು ಹಚ್ಚಿಕೊಂಡಿದ್ದಾರೆ.

ಏಪ್ರಿಲ್ 29 ರ ಮಧ್ಯಾಹ್ನ ಲಿಂಗನ ಬೆಂಗಾವಲಿಗಿದ್ದ ಹುಡುಗರೆಲ್ಲ ಊಟಕ್ಕೆಂದು ಹೊರಟಿದ್ದು ಗೊತ್ತಾಗಿದೆ. ಒಂದು ಸುಮೋ, ಎಂಟತ್ತು ಬೈಕುಗಳಲ್ಲಿ ಲಿಂಗನ ಮನೆ ಸುತ್ತ ಹಂತಕ ಪಡೆ ಜಮೆಯಾಗಿದೆ. ಅದೆಂಥಾ ತಯಾರಿಯೊಂದಿಗೆ ಸೈಕಲ್ ಗ್ಯಾಂಗ್ ಬಂದಿತ್ತೆಂದರೆ; ಹಾಗೊಮ್ಮೆ ಲಿಂಗ ಬಾಗಿಲು ಹಾಕಿಕೊಂಡರೆ ಗೋಡೆ ಒಡೆದೇ ಕೆಲಸ ಮುಗಿಸಲೆಂದು ಹಾರೆ, ಪಿಕಾಸಿ, ಗುದ್ದಾರಿಗಳನ್ನು ತಂದಿದ್ದರು. ಮನೆಗೆ ನುಗ್ಗಿದ್ದು ಎಂಟ್ಹತ್ತು ಮಂದಿಯಾದರೆ ಮನೆಯ ಸುತ್ತಮುತ್ತಲ ರಸ್ತೆಗಳಲ್ಲಿ ಕಮ್ಮಿಯೆಂದರೂ ನಲವತ್ತು ಮಂದಿ ಹೊಂಚು ಹಾಕುತ್ತಿದ್ದರು.

ದಾಳಿ ಮಾಡುತ್ತಿದ್ದಾಗಲೇ ಊಟಕ್ಕೆ ಹೋಗಿದ್ದ ಲಿಂಗನ ಹುಡುಗರೇನಾದರೂ ಬಂದರೆಂದರೆ ಅವರನ್ನು ಪಕ್ಕದ ರಸ್ತೆಯಲ್ಲೇ ಅಡ್ಡಗಟ್ಟಲು ಮೂವತ್ತಕ್ಕೂ ಅಧಿಕ ಹುಡುಗರಿದ್ದ ಮತ್ತೊಂದು ಗ್ಯಾಂಗ್ ಅಣಿಯಾಗಿತ್ತು. ಮಂಕಿ ಕ್ಯಾಪ್ ಧರಿಸಿದ್ದವರ ಪೈಕಿ ಮುಖಕ್ಕೆ ಉದ್ದದ ಕುಯ್ದ ಮಾರ್ಕ್ ಇದ್ದದ್ದು ರವಿಯ ಭಾಮೈದ ರಾಜೇಂದ್ರನಿಗೆ. ಕುಂಟಿಕೊಂಡು ಬಂದಿದ್ದ ಮಂಕಿ ಕ್ಯಾಪ್ ಧಾರಿಯೇ ಬಳ್ಳನಂತೆ. ಐದೇ ನಿಮಿಷದಲ್ಲಿ ಲಿಂಗನನ್ನು ಮುಗಿಸಿದ್ದಾನೆ ಸೈಕಲ್ ರವಿ.

ಅದೃಷ್ಟವೋ ಅಥವಾ ಕೇಡುಗಾಲಕ್ಕೋ ಗೊತ್ತಿಲ್ಲ; ಎಷ್ಟು ನಿರಾಯಾಸವಾಗಿ ಲಿಂಗನನ್ನು ಮುಗಿಸಿದನೋ ಅಷ್ಟೇ ಸಲೀಸಾಗಿ ಎನ್‌ಕೌಂಟರ್‌ನಿಂದಲೂ ಬಚಾವಾಗಿದ್ದಾನೆ. ಮೈಪರಚಿಕೊಳ್ಳುವುದು ಬಿಟ್ಟರೆ ಪೊಲೀಸರಿಗೆ ಇನ್ನಾವ ದಾರಿಯಿದೆ? ಯಾರೋ ಹಿಂದೆಮುಂದಿಲ್ಲದ ಜಾನ್ಸನ್ ಎಂಬಾತನನ್ನು ಎಳೆದುತಂದು ಎನ್‌ಕೌಂಟರ್ ಮಾಡುವ ಪೊಲೀಸರಿಗೆ ಸೈಕಲ್ ರವಿಯಂಥ ಸೈತಾನನ ಕೂದಲೂ ಕೊಂಕಲಾಗುತ್ತಿಲ್ಲ ಎಂದರೆ ಏನರ್ಥ?


• ರಾ. ಸೋಮನಾಥ್
ra.somanath2010@gmail.com

40 ಕೋಟಿಯ ರಿಯಲ್ ಎಸ್ಟೇಟ್ ಸಾಮ್ರಾಜ್ಯ

ಈ ಪಾಟಿ ತಯಾರಿ ನಡೆಸಿ, ಇಷ್ಟೆಲ್ಲಾ ರಿಸ್ಕಿಗೆ ಕೈಹಾಕಿ, ಪೊಲೀಸರು ತನ್ನನ್ನು ಎನ್‌ಕೌಂಟರ್ ಮಾಡುವುದು ಶತಸ್ಸಿದ್ಧ ಎಂದು ಗೊತ್ತಿದ್ದೂ ಸೈಕಲ್ ರವಿ ಲಿಂಗನಿಗೆ ಸ್ಕೆಚ್ ಹಾಕಿದ್ದು ಕೇವಲ ಜಿದ್ದಿಗಾಗಿ ಮಾತ್ರವೇ?

ಜಿದ್ದು, ಪ್ರತಿಕಾರ, ಗ್ಯಾಂಗ್ ದುಷ್ಮನಿಯನ್ನೂ ಮೀರಿದ ಆಯಾಮವೊಂದು ಲಿಂಗನ ಕೊಲೆಯ ಹಿಂದಿದೆಯೆ?

ಸದ್ಯ ಬನಶಂಕರಿ ಸುತ್ತಮುತ್ತ ಹೊಗೆಯಾಡುತ್ತಿರುವ ಲೆಕ್ಕಾಚಾರದ ಪ್ರಕಾರವೇ ಹೇಳುವುದಾದರೆ; ಅದು ಕಮ್ಮಿಯೆಂದರೂ ನಲವತ್ತು ಕೋಟಿಯ stake ಎಂದು ಗೊತ್ತಿದ್ದೇ ಸೈಕಲ್ ರವಿ ಲಿಂಗನ ಹತ್ಯೆಗೆ ಕೈ ಹಾಕಿದ್ದಾನೆ! ಬನಶಂಕರಿ, ಕತ್ತಿಗುಪ್ಪೆ, ಇಟ್ಟಮಡು, ಹೊಸಕೆರೆ ಹಳ್ಳಿ, ಗಿರಿನಗರ, ಉತ್ತರಹಳ್ಳಿ, ಪದ್ಮನಾಭನಗರ ಇತ್ಯಾದಿ ಏರಿಯಾಗಳ ರಾಜಕೀಯಕ್ಕೂ, ಅಲ್ಲಿನ ರಿಯಲ್ ಎಸ್ಟೇಟ್ ದಂಧೆಗೂ ಅನಾದಿಕಾಲದ ಸಂಬಂಧವಿದೆ. ಈ ಭಾಗದ ಶಾಸಕರು, ಮಂತ್ರಿಗಳಿಂದ ಹಿಡಿದು ಈಗ ಗೆದ್ದು ಕೌನ್ಸಿಲರ್‌ಗಳಾಗಿರುವವರೆಲ್ಲರೂ ಒಂದಲ್ಲ ಒಂದು ರೂಪದಲ್ಲಿ ರಿಯಲ್ ಎಸ್ಟೇಟ್ ಕುಳಗಳೆ. ಈ ಪೈಕಿ ಹೊಸಕೆರೆ ಹಳ್ಳಿಗೆ ಬಿಜೆಪಿಯಿಂದ ನಿಂತು ಗೆದ್ದ ಛೇರ್ಮನ್ ನಾರಾಯಣ, ಕತ್ತಿಗುಪ್ಪೆಯ ಕೌನ್ಸಿಲರ್ ವೆಂಕಟೇಶ್ ಮೂರ್ತಿ, ಕುಮಾರಸ್ವಾಮಿ ಲೇಔಟಿನ ಪಾರ್ಕ್ ಸುರೇಶ, ಬ್ಯಾಂಕ್ ಕಾಲೋನಿಯ ವೆಂಕಟೇಶ್, ಪದ್ಮನಾಭನಗರದ ಶ್ರೀನಿವಾಸ್ ಇತ್ಯಾದಿ ಅರ್ಧ ಡಜನ್ ಬಿಜೆಪಿ ಕೌನ್ಸಿಲರ್‌ಗಳೆಲ್ಲ ಲಿಂಗನನ್ನು ಮುಂದಿಟ್ಟುಕೊಂಡೇ ಗೆದ್ದು ಬಂದವರು. ಮತ್ತು ರಾಜಕೀಯವಾಗಿ ಮಂತ್ರಿ ಅಶೋಕ್ ಅನುಯಾಯಿಗಳು.



ಈಗ ಲಿಂಗನ ಕೊಲೆಯಾಗಿರುವುದರಿಂದ ಹೆಚ್ಚು ಲುಕ್ಸಾನಾಗಿರುವುದು ಇವರಿಗೇ. ಇದಕ್ಕಿಂತಲೂ ದೊಡ್ಡ ನಷ್ಟ ಅಂತಿದ್ದರೆ ಇಲ್ಲಿನ ರಿಯಲ್ ಎಸ್ಟೇಟ್ ಖದೀಮರಿಗೆ. ಗಿರಿನಗರದಿಂದ ಹಿಡಿದು ಉತ್ತರಹಳ್ಳಿ ತನಕ, ಬನಶಂಕರಿಯಿಂದ ಹಿಡಿದು ಕನಕಪುರ ರಸ್ತೆಯ ತನಕ ಇಂಥ ರಿಯಲ್ ಎಸ್ಟೇಟ್ ಕೌನ್ಸಿಲರ್‌ಗಳು ಮತ್ತವರ ಬೇನಾಮಿಗಳು ಬೇಲಿ ಹಾಕಿಕೊಂಡಿರುವ ಆಸ್ತಿಗಳ ಒಟ್ಟು ಮೊತ್ತವೇ ಐವತ್ತು ಕೋಟಿಗೂ ಅಧಿಕ.

ಹೀಗೆ ಆಕ್ರಮಿಸಿಕೊಂಡ ಸೈಟು, ಆಸ್ತಿಗಳಿಗೆ ಬೆಂಗಾವಲಾಗಿದ್ದವನು ಕತ್ತಿಗುಪ್ಪೆ ಲಿಂಗ. ಈಗ ಲಿಂಗನ ಕೊಲೆಯಾಗಿದೆ. ಸಹಜವಾಗೇ ಈ ಎಲ್ಲಾ ಡೀಲುಗಳ ಮೇಜುವಾನಿಕೆ ಸೈಕಲ್ ರವಿ ಕೈಗೆ ಬರುತ್ತದೆ. ಇಂಥ ಯಾವುದೇ ಒಂದು ಆಸ್ತಿಯನ್ನು ಸೈಕಲ್ ರವಿ ಮರು ವಶಪಡಿಸಿಕೊಂಡನೆಂದರೆ ಅಥವಾ ಕಾಂಪೌಂಡ್ ಹಾಕಿಸುವಲ್ಲಿ ಯಶಸ್ವಿಯಾದರೆ ಅದೇ ಮೂರ್ನಾಲ್ಕು ಕೋಟಿಯ ಬಾಬತ್ತಾಗುತ್ತದೆ. ಜೊತೆಗೆ ಈ ಭಾಗದ ಲಿಂಗನ ನೆರವಿನಿಂದ ಗೆದ್ದ ಕೌನ್ಸಿಲರ್‌ಗಳಿಂದಲೂ ಕೆಲಸ ಮಾಡಿಸಿಕೊಳ್ಳಬಹುದು.


ಇಂಥದೊಂದು ಅಗಾಧ ಆರ್ಥಿಕ ಸಾಮ್ರಾಜ್ಯವನ್ನು ವಶಪಡಿಸಿಕೊಳ್ಳುವ ಲೆಕ್ಕ ಹಾಕಿಯೇ ಲಿಂಗನ ಹತ್ಯೆಗೆ ರವಿ ಕೈಹಾಕಿದ್ದಾನೆ. ಪರಂಧಾಮನ ಎನ್‌ಕೌಂಟರ್‌ಗೆ ಆ ಪಾಟಿ ಆಸಕ್ತಿ ವಹಿಸಿದ ಮಂತ್ರಿ ಅಶೋಕ್ ಈಗ ಬಿಜೆಪಿಯ ಆಧಾರ ಸ್ತಂಭದಂತಿದ್ದ ಲಿಂಗನೇ ಕೊಲೆಯಾದರೆ ತೆಪ್ಪಗಿದ್ದುಬಿಟ್ಟಿದ್ದಾರೆ. ಇದರರ್ಥ ಯಾರು ಸತ್ತರೇನು? ಕೊಂದವನನ್ನು ಬುಟ್ಟಿಗೆ ಹಾಕಿಕೊಂಡು ಕಾರ್ಯಸಾಧಿಸುವುದು ಇಲ್ಲಿನ ರಿಯಲ್ ಎಸ್ಟೇಟ್ ಕೌನ್ಸಿಲರ್‌ಗಳ ಪ್ರವೃತ್ತಿ. ಬಹುಶಃ ಲಿಂಗನ ನಂತರ ಆತನಿಗೊಬ್ಬ ಸಮರ್ಥ ಉತ್ತರಾಧಿಕಾರಿಯಿದ್ದಿದ್ದರೆ ಬಿಜೆಪಿ ಗ್ಯಾಂಗ್ ಬೆಂಬಲಿಸುತ್ತಿತ್ತೇನೊ. ಲಿಂಗನ ಬಲಗೈ ಬಂಟನಂತಿದ್ದ ಮಚ್ಚು ಮುನಿಯ ಅಸಾಧ್ಯ ಫೈಟರ್ ನಿಜ, ಆದರೆ ಡೀಲಿಂಗ್ ಗೊತ್ತಿಲ್ಲ. ಮತ್ತೊಬ್ಬ ಬಂಟ ದೀಪು ಇನ್ನೂ ಪಳಗಿಲ್ಲ. ಪವನ, ವಾಲೆಸೀನ, ಲೋಕಿ, ಸಂಜೀವ, ಪೋರ್ಕಿ ರಾಜು, ಡಬಲ್ ಮೀಟ್ರು ಮೋಹನ ಇತ್ಯಾದಿ ಲಿಂಗನ ಶಿಷ್ಯದ್ವಾರಿಗೂ ಇಡೀ ತಂಡವನ್ನು ಸಂಬಾಳಿಸುವಷ್ಟು ತಾಕತ್ತಿಲ್ಲ.

ಲಿಂಗನೇ ಮುಗಿದ ಮೇಲೆ ಆತನ ಗ್ಯಾಂಗ್ ಉಸಾಬರಿ ಕಟ್ಟಿಕೊಂಡು ಬಿಜೆಪಿ ಕೌನ್ಸಿಲರ್‌ಗಳಿಗೇನಾಗಬೇಕು? ಲಿಂಗನಿಗೆ ಕೊಡುತ್ತಿದ್ದ ಕಪ್ಪವನ್ನೇ ಸೈಕಲ್ ರವಿಗೆ ಕೊಟ್ಟರೆ ಯಾರಿಗೇನು ನಷ್ಟ?

ಪರಾರಿಯಾದಳು ಪ್ರಿಯಾ ಹಾಸನ್

ಕನ್ನಡದ ವಿಜಯಶಾಂತಿ, ಜೂನಿಯರ್ ಮಾಲಾಶ್ರೀ, ...ತಿ ರವಿಚಂದ್ರನ್, ಜಂಬದ ಹುಡ್ಗಿ, ಬಿಂದಾಸ್ ಹುಡ್ಗಿ... ...ಗೆ ಹಲವಾರು ಸ್ವಯಂಘೋಷಿತ ಬಿರುದುಗಳನ್ನು ...ಡಿಗೇರಿಸಿಕೊಂಡಿರುವ ಪ್ರಿಯಾ ಹಾಸನ್ ಎಂಬ ...ಬೀರಿ ಹೆಣ್ಣು ಈಗ ಪೊಲೀಸರಿಂದ ತಪ್ಪಿಸಿಕೊಂಡು ...ಪ್ ಆಗಿದ್ದಾಳೆ.

...ತಾನೋರ್ವ ಲೇಡಿ ಹೀರೋ ಎಂಬಂತೆ ಪೋಸು ...ಸುತ್ತಿದ್ದ ಈಕೆ ಈಗ ಲೇಡಿ ವಿಲನ್ ಆಗಿದ್ದಾಳೆ... ...ೂ ಒಬ್ಬ ಮಹಿಳೆಯ ಮೇಲೆ ಹಲ್ಲೆ ಮಾಡಿದ ...ೋಪಕ್ಕೆ ಎದುರಿಸುತ್ತಿರುವ ಪ್ರಿಯಾ ಪರಾರಿಯಾಗಿದ್ದಾಳೆ!



ಮಂಜುಳಾ ಜೊತೆಗೆ ಮೋಹನ್‌ಗೌಡ

...ಪ್ರಿಯಾ ಹಾಸನ್ ಎಂಬ ಹೆಣ್ಣು ಮಗಳು ಚಿತ್ರರಂಗ ...ಸಿಕ್ಕಾಪಟ್ಟೆ ಹೆಸರು ಮಾಡಿದ್ದು 2007ರ ಈಚೆಗೆ. ...ದೊಡ್ಡ ರಾದ್ಧಾಂತದ ಮೂಲಕ. ಸ್ವತಃ ಈಕೆಯೇ ...ಸಿ, ನಟಿಸಲು ಮುಂದಾದ 'ಜಂಬದ ಹುಡುಗಿ' ...ಚಿತ್ರವೊಂದು ಸೆಟ್ಟೇರಿತ್ತು. ಆಗ ಕಥೆಗಾರ ಕೆ. ...ಂಡ ರೆಡಿಮಾಡಿದ್ದ ಅರ್ಧ ಕಥೆಗೆ ನಯಾಪೈಸೆಯನ್ನೂ ...ದೆ ಕ್ಯಾತೆ ತೆಗೆದು ಅವರನ್ನು ...ಲಿ ಓಡಿಸಿದ್ದಳು. ಸಿನಿಮಾ ಆರಂಭ ...ಒಂದೆರಡು ದಿನ ಕಳೆಯುತ್ತಿದ್ದಂತೆ ...ಸಿನಿಮಾದ ಸ್ಕ್ರಿಪ್ಟು, ಡೈಲಾಗು, ...ಮೊಂದೂ ರೆಡಿಮಾಡಿದ್ದ ನಿರ್ದೇಶಕ ...ರಾಮ್ ಕಾರಂತ್ ಅವರಿಗೆ "ನಾನು ...ದಂತೆ ಡೈರೆಕ್ಟ್ ಮಾಡೋದಿದ್ದರೆ ... ಇಲ್ಲಾಂದ್ರೆ ಹೋಗ್ತಾ ಇರು" ...ು ಬಾಯಿಗೆ ಬಂದಂತೆ ಬೈದು ಅವರನ್ನೂ ...ಯಲ್ಲಿ ಹೊರಹಾಕಿದ್ದಳು. ಅಷ್ಟೇ ಅಲ್ಲ, ಚಿತ್ರ ...ೇಶನದ ಆಆಇಈ ಗೊತ್ತಿಲ್ಲದ ಈಕೆ "ಈ ಚಿತ್ರಕ್ಕೆ ನಿರ್ದೇಶಕಿ" ಎಂದು ಘೋಷಿಸಿಕೊಂಡಳು.



ರಾಜೇಶ್


...ಇಂತಹ ಕೊಚ್ಚೆ ಹುಡುಗಿಯ ಮೇಲೆ ಕಲ್ಲು ಹಾಕಿ ...ಮೆಲ್ಲಾ ರಾಡಿ ಮಾಡಿಕೊಳ್ಳುವ ಉಸಾಬರಿಯೇ ... ಎಂದು ಸೀತಾರಾಮ ಕಾರಂತರೂ ಸೈಲೆಂಟಾದರು. ...ತ ಹಲವಾರು ಗಲಾಟೆಗಳ ಮೂಲಕ ಆಕೆಯ ...ಸಿಕ್ಕಾಪಟ್ಟೆ ಪುಕ್ಕಟೆ ಪ್ರಚಾರ ಪಡೆದಿದ್ದರಿಂದಲೋ ... ಒಂದೇ ಒಂದು ಸೆಂಟರಿನಲ್ಲಿ ಅದು ನೂರು ದಿನದ ಪ್ರದರ್ಶನ ಕಂಡಿತು. ಇದಾದನಂತರ ಈ 'ಜಂಭದ ಹುಡುಗಿ'ಯನ್ನು ಹಿಡಿದು ನಿಲ್ಲಿಸುವುದೇ ಅಸಾಧ್ಯವಾಯಿತು. ಆಮೇಲೆ 'ಬಿಂದಾಸ್ ಹುಡುಗಿ' ಎಂಬ ಚಿತ್ರವನ್ನು ಆರಂಭಿಸಿದಳು. 'ನನ್ನಿಂದ ಕಥೆ ಬರೆಸಿಕೊಂಡು ಹಣ, ಹೆಸರು ಎರಡೂ ಕೊಡದೆ ವಂಚಿಸಿದ್ದಾಳೆ' ಎಂದು ಆರೋಪಿಸಿ ತಮಿಳಿನ ಸುಂದರ್ ಎಂಬ ನಿರ್ದೇಶಕನೊಬ್ಬ ಈಕೆಯ ವಿರುದ್ಧ ಇತ್ತೀಚೆಗೆ ಛೇಂಬರ್‌ನಲ್ಲಿ ಕಂಪ್ಲೇಂಟೂ ನೀಡಿದ್ದಾನೆ.

ಬ್ಲಾಕ್ ಅಂಡ್ ವೈಟ್ ಹಿನ್ನೆಲೆ...

ಪ್ರಿಯಾ ಹಾಸನ್ ಪ್ರಚಾರಕ್ಕೆ ಬಂದಿದ್ದು ಈಗ್ಗೆ ನಾಲ್ಕು ವರ್ಷಗಳ ಹಿಂದೆಯಾದರೂ ಈಕೆ ಸಿನಿಮಾದವರ ಸಂಪರ್ಕಕ್ಕೆ ಬಂದು ಎಂಟೊಂಭತ್ತು ವರ್ಷಗಳೇ ಕಳೆದಿದೆ. ಬಹಳಷ್ಟು ಮಂದಿಗೆ ಗೊತ್ತಿರಲಿಕ್ಕಿಲ್ಲ, ಏಳು ವರ್ಷಗಳ ಹಿಂದೆ ಸಂಗೀತ ನಿರ್ದೇಶಕ ರಾಜೇಶ್ ರಾಮನಾಥ್ 'ಬ್ಲಾಕ್ ಅಂಡ್ ವೈಟ್' ಎಂಬ ಸಿನಿಮಾವೊಂದರಲ್ಲಿ ನಾಯಕನಟನಾಗಿ ನಟಿಸಿದ್ದರು. ಸಂಕಲನಕಾರ ಜನಾರ್ದನ್ ಜೊತೆ ಸೇರಿ ಈ ಸಿನಿಮಾವನ್ನು ನಿರ್ಮಿಸಿದ ರಾಜೇಶ್ ರಾಮನಾಥ್ ಪ್ರಿಯಾಳಿಗೆ ಆ ಚಿತ್ರದಲ್ಲಿ ಹೀರೋಯಿನ್ ಛಾನ್ಸು ಕೊಟ್ಟಿದ್ದೇ ಬಂತು ನೋಡಿ. ಸಿನಿಮಾ ಮಾತ್ರವಲ್ಲದೇ ಹೊರಗೂ ಇವರ ಸ್ನೇಹ ಸಂಬಂಧ ವೃದ್ಧಿಸಿತ್ತು. ಈ ನೆಪದಲ್ಲಿ ರಾಜೇಶ್ ರಾಮನಾಥ್‌ರಿಂದ ಸಿಕ್ಕಷ್ಟು ಸುಲಿದು ಆತನನ್ನು ಬರಿಗೈ ಮಾಡಿಬಿಟ್ಟಿದ್ದಳು. ಯುವ ಸಂಗೀತ ನಿರ್ದೇಶಕನೆನಿಸಿಕೊಂಡ ರಾಜೇಶ್ ಕನ್ನಡದ ಬಹಳಷ್ಟು ಚಿತ್ರಗಳಿಗೆ ಸಂಗೀತ ಸಂಯೋಜನೆ ಮಾಡಿ ಅಷ್ಟಿಷ್ಟು ಸಂಪಾದನೆ ಮಾಡಿದ್ದರು. ಆದರೆ ಪ್ರಿಯಾಳ ಸಹವಾಸದಿಂದ ರಾಜಾಜಿನಗರದಲ್ಲಿ ಆರಂಭಿಸಿದ್ದ ಸ್ಟುಡಿಯೋ ಸಮೇತ ಎಲ್ಲವನ್ನೂ ಕಳೆದುಕೊಂಡು ಬರ್ಬಾದ್ ಆಗಿಬಿಟ್ಟರು. ರಾಜೇಶ್ ಕೈ ಖಾಲಿಯಾಗಿದೆ ಎಂದು ತಿಳಿದ ಪ್ರಿಯಾ ಆತನಿಗೆ ಗುಡ್‌ಬೈ ಹೇಳಿ ದಿಕ್ಕು ಬದಲಿಸಿಬಿಟ್ಟಳು. ನಂತರ ಕನ್ನಡ ಚಿತ್ರರಂಗದಿಂದ ನಾಪತ್ತೆಯಾದ ಪ್ರಿಯಾ ಒಂದಷ್ಟು ದಿನ ಚೆನ್ನೈಗೆ ಹೋಗಿ ನೆಲೆಸಿದ್ದಳು. ಚೆನ್ನೈನಲ್ಲಿ ಈಕೆ ಅದೇನು ಬಿಜಿನೆಸ್ಸು ಮಾಡಿದಳೋ ಗೊತ್ತಿಲ್ಲ, ಮತ್ತೆ ಬೆಂಗಳೂರಿಗೆ ವಾಪಸ್ ಬರುವ ಹೊತ್ತಿಗೆ ಈಕೆಯ ಖದರ್ರೇ ಬದಲಾಗಿ ಹೋಗಿತ್ತು.



"ನಾನೇ ಹೀರೋಯಿನ್ನು, ನನ್ನ ಅಣ್ಣ ಮೋಹನ ಗೌಡನೇ ಪ್ರೊಡ್ಯೂಸರ್ರು..." ಎಂದು ಭಯಾನಕ ಪೋಸು ಕೊಡಲು ಆರಂಭಿಸಿದಳು. ಅಸಲಿಗೆ ಈಕೆ ಅಣ್ಣ ಎಂದು ಕರೆಸಿಕೊಳ್ಳುವ ಮೋಹನಗೌಡನಿಗೂ ಪ್ರಿಯಾಳಿಗೂ ಮುಖ-ಮೋರೆಯಲ್ಲಿ ಸಣ್ಣ ಹೋಲಿಕೆಯೂ ಇಲ್ಲ.



ಮೋಹನ್

ಪ್ರಿಯಾ ಎಲ್ಲೇ ಹೋಗಲಿ, ಬರಲಿ ಆಕೆಯ ಬೆನ್ನಿಗೆ ಮೊದಲಿನಿಂದಲೂ ಅಣ್ಣ ಮೋಹನ್ ಗೌಡ ಇದ್ದೇ ಇರುತ್ತಿದ್ದ. ಈಗ ಅದೇ ಅಣ್ಣನ ವಿಚಾರಕ್ಕೆ ಸಂಬಂಧಿಸಿದಂತೆ ರಾದ್ಧಾಂತ ಮಾಡಿಕೊಂಡು ಪ್ರಿಯಾ ತಲೆಮರೆಸಿಕೊಂಡಿದ್ದಾಳೆ.

ಶುರುವಾಯ್ತು ಪೆಟ್ ಲವ್ವು!

ಯಾವಾಗಲೂ ನಿಗೂಢವಾಗೇ ವರ್ತಿಸುವ ಮೋಹನ್ ಗೌಡನ ಸಂಬಂಧಗಳೂ ನಿಗೂಢವೇ. ಈತ ಎರಡು ವರ್ಷಗಳಿಂದ ಮಹಾಲಕ್ಷ್ಮಿ ಲೇಔಟ್‌ನಲ್ಲಿ ನಾಯಿ, ಬೆಕ್ಕು ಮಾರುವ ಪೆಟ್ ಶಾಪ್ ಹೊಂದಿರುವ ಮಂಜುಳಾ ಎಂಬಾಕೆಯೊಂದಿಗೆ ಸಂಬಂಧ ಹೊಂದಿದ್ದ. 32 ವರ್ಷ ವಯಸ್ಸಿನ ಈ ಹೆಂಗಸಿಗೆ ಈಗಾಗಲೇ 15 ವರ್ಷದ ಮಗನೂ ಇದ್ದಾನೆ. ಈಕೆಯ ಗಂಡ ಮೂರು ವರ್ಷಗಳ ಹಿಂದೆ ವಿಷ ಕುಡಿದು ಸೂಸೈಡ್ ಮಾಡಿಕೊಂಡನಂತೆ. ಆಮೇಲೆ ನಾಯಿ ಖರೀದಿಸಲು ಹೋದ ಮೋಹನ್ ಗೌಡನೊಂದಿಗೆ ಈಕೆಯ ಗೆಳೆತನ ಶುರುವಾಗಿದೆ. ಗೆಳೆತನದ ಗಡಿ ದಾಟಿ ಇವರಿಬ್ಬರೂ ಒಂದೇ ಮನೆಯಲ್ಲಿ ಬಾಳ್ವೆಯನ್ನು ಆರಂಭಿಸಿದ್ದಾರೆ. ಮಂಜುಳಾ ಹೇಳುವ ಪ್ರಕಾರ ಧರ್ಮಸ್ಥಳಕ್ಕೆ ಕರೆದೊಯ್ದು ಮೋಹನ್ ಈಕೆಗೆ ತಾಳಿಕಟ್ಟಿ ಮದುವೆಯೂ ಆಗಿದ್ದಾನಂತೆ.

ಸದಾ ತನ್ನ ಬಾಲಂಗೋಚಿಯಂತೆ ಅಂಟಿಕೊಂಡಿದ್ದ ಅಣ್ಣ ಮೋಹನ್ ಇದ್ದಕ್ಕಿದ್ದಂತೆ ಮನೆಗೆ ಬರುವುದನ್ನೇ ನಿಲ್ಲಿಸಿದ್ದು, ಮಂಜುಳಾ ಜೊತೆ ಸಂಬಂಧ ಬೆಳೆಸಿಕೊಂಡು, ಬಸವೇಶ್ವರನಗರದಲ್ಲಿ ಆಕೆಗೆ ಭೋಗ್ಯದ ಮನೆಯನ್ನೂ ಕೊಡಿಸಿ 'ಚಿನ್ನವೀಡು' ಆರಂಭಿಸಿರುವುದು ಪ್ರಿಯಾ ಹಾಸನ್‌ಗೆ ಗೊತ್ತಾಗುತ್ತಿದ್ದಂತೇ ಅಣ್ಣನ ವಿರುದ್ಧ ದೊಡ್ಡ ಗಲಾಟೆ ಶುರು ಮಾಡಿದ್ದಾಳೆ ಪ್ರಿಯಾ. ಮಂಜುಳಾಳ ಸಹವಾಸ ಬಿಡುವಂತೆ ಒತ್ತಡ ಹೇರಿದ್ದಾಳೆ. ಈಕೆ 'ಬಿಂದಾಸ್ ಹುಡುಗಿ' ಚಿತ್ರ ಆರಂಭಿಸಿದಾಗ ಮೋಹನ್ ಗೌಡನೇ ನಿರ್ಮಾಪಕ ಎಂದಾಗಿತ್ತಾದರೂ, ಮುಂದೆ ಬರುವ ಲಾಭವೆಲ್ಲಾ ಅಣ್ಣನ ಪಾಲಾಗಿ ಅದನ್ನೆಲ್ಲ ಆತ ಮಂಜುಳಾಳ ಮಡಿಲಿಗೆ ಸುರಿದುಬಿಟ್ಟರೆ ಎಂಬ ಲೆಕ್ಕಾಚಾರಕ್ಕೆ ಬಿದ್ದ ಪ್ರಿಯಾ ತನ್ನ ಚಿತ್ರದ ಪಬ್ಲಿಸಿಟಿ ಇತ್ಯಾದಿಗಳಲ್ಲಿ ಮೋಹನ್ ಗೌಡನ ಹೆಸರನ್ನೇ ಕಿತ್ತಾಕಿದಳು.

ಹೀಗೇ ಮುಂದುವರಿದರೆ ತಾನು ಬೀದಿಗೆ ಬೀಳಬೇಕು ಎಂಬುದನ್ನು ಅರಿತ ಮೋಹನ್ 'ತಂಗಿ'ಯ ಮಾತಿಗೆ ಕಟ್ಟುಬಿದ್ದು ಎರಡು ತಿಂಗಳಿಂದ ಮಂಜುಳಾಳ ಮನೆಕಡೆ ಹೋಗುವುದನ್ನೇ ಬಿಟ್ಟಿದ್ದಾನೆ. ಇತ್ತ ಪ್ರಿಯಾ ತನ್ನ ಅಣ್ಣನಿಗೆ ಬೇರೊಂದು ಮದುವೆ ಮಾಡಲು ಎಲ್ಲ ಸಿದ್ಧತೆಯನ್ನೂ ನಡೆಸಿದ್ದಾಳೆ. ಈ ವಿಚಾರ ಮಂಜುಳಾಳ ಕಿವಿಗೆ ಬೀಳುತ್ತಿದ್ದಂತೇ ಆಕೆ ಮೊನ್ನೆ ದಿನ ತನ್ನ ಸ್ನೇಹಿತೆ ರೇಖಾ ಎಂಬಾಕೆಯನ್ನು ಪ್ರಿಯಾ ಮನೆಗೆ ನ್ಯಾಯ ಕೇಳಲು ಕಳುಹಿಸಿದ್ದಾಳೆ. ಈ ಮಾಡ್ರನ್ ಲೇಡಿ ರೇಖಾ 'ನನ್ನ ಗೆಳತಿ ಮಂಜುಳಾಳನ್ನು ಕರೆದುಕೊಂಡು ಬಂದು ನಿಮ್ಮ ಮನೆತುಂಬಿಸಿಕೊಳ್ಳಿ' ಎಂದಿದ್ದಾಳೆ. ಮೊದಲೇ ಘಟವಾಣಿ ಹೆಣ್ಣು ಪ್ರಿಯಾ ಹಾಸನ್. ತನ್ನ ಮನೆಗೇ ಬಂದ ಮೂರನೇ ವ್ಯಕ್ತಿಯೊಬ್ಬಳು ಹೀಗೆಲ್ಲಾ ಮಾತಾಡಿದರೆ ಸುಮ್ಮನೆ ಬಿಡುವುದುಂಟೆ? ತನ್ನ ತಾಯಿ ಶಿವಮ್ಮ, ಕಾರು ಚಾಲಕ ಶೇಖರ್ ಜೊತೆ ಸೇರಿ ರೇಖಾಳ ಮುಂದಲೆ ಹಿಡಿದು ಬಾರಿಸಿದ್ದಾಳೆ.


ಆಗ ರೇಖಾ ಮತ್ತು ಮಂಜುಳಾ ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಪ್ರಿಯಾ ಹಾಸನ್ ಮತ್ತು ಆಕೆಯ ಕುಟುಂಬದ ವಿರುದ್ಧ 'ಜೀವಬೆದರಿಕೆ ನೀಡಿದ್ದಾರೆ' ಎಂದು ಕಂಪ್ಲೇಂಟು ಕೊಟ್ಟಿದ್ದಾರೆ. ಸಬ್‌ಇನ್ಸ್‌ಪೆಕ್ಟರ್ ಶೋಭಾ ಮತ್ತು ಇನ್ಸ್‌ಪೆಕ್ಟರ್ ಅನಿಲ್‌ಕುಮಾರ್ ಕೈಲಿ ಕೋಳ ಹಿಡಿದು ಪ್ರಿಯಾಳನ್ನು ಬಂಧಿಸಲು ಓಡಾಡುತ್ತಿದ್ದರೆ, ಪ್ರಿಯಾ ಮಾತ್ರ ಯಾರ ಕೈಗೂ ಸಿಗದಂತೆ ಪರಾರಿಯಾಗಿದ್ದಾಳೆ.

ಒಟ್ಟಾರೆಯಾಗಿ ನೋಡಿದರೆ, ಪ್ರಿಯಾ ಹಾಸನ್ ಎಂಬ ಅರೆಬರೆ ನಟಿ ಕಂ ನಿರ್ದೇಶಕಿ, ಆಕೆಯ ಅಣ್ಣ ಮೋಹನ್‌ಗೌಡ, ಮೋಹನ್ ಗೌಡನ ಪ್ರಿಯತಮೆ ಮಂಜುಳಾ ಎಂಬ ವಿಧವೆ, ಆಕೆಯ ಸ್ನೇಹಿತೆ ರೇಖಾ- ಈ ಎಲ್ಲರ ನಡವಳಿಕೆ, ವ್ಯಕ್ತಿತ್ವಗಳಾವುವೂ ಸಹಜವಾಗಿ ಕಾಣುತ್ತಿಲ್ಲ, ಒಬ್ಬೊಬ್ಬರ ಹಿಂದೆಯೂ ಸಾಕಷ್ಟು ಕತ್ತಲ ಕಥೆಗಳು, ಜಗತ್ತಿಗೆ ಕಾಣದ ರಹಸ್ಯಗಳು ಅಡಗಿದಂತೆ ಕಣುತ್ತಿದೆ...

ಮುಂದೆ ಅವೆಲ್ಲಾ ಹೊರಬರಬೇಕಿದೆಯಷ್ಟೇ...

• ಅರುಣ್ ಕುಮಾರ್.ಜಿ
arunodayagc@gmail.com

...ದ್ಯಾವ ಹಾಸನ...?




...ಪ್ರಿಯಾ ಹಾಸನ್ ಎಂಬ ಹೆಸರು ಕೇಳುತ್ತಿದ್ದಂತೇ ಈಕೆ ...ಶ್ರೀ ಕಮಲ್‌ಹಾಸನ್ ಅವರ ಕುಟುಂಬದವಳಾ? ನಟಿ ...ಹಾಸಿನಿಯ ಅಕ್ಕನ ಮಗಳಾ? ಎಂದು ಬಹಳಷ್ಟು ಜನ ...ಫ್ಯೂಸ್ ಆಗೋದುಂಟು. ಆದರೆ ಆ ಹಾಸನ್‌ಗೂ ...ಪ್ರಿಯಾಳಿಗೂ ಎಲ್ಲಿಂದೆಲ್ಲಿಯ ಸಂಬಂಧವೂ ಇಲ್ಲ.

...ರ್ನಾಟಕದ ಹಾಸನದ ಮೂಲ ಈಕೆಯದ್ದು. ಎಂಟು ...ಗಳ ಹಿಂದೆ ಕತ್ರಿಗುಪ್ಪೆಯ, ಇಟ್ಟಮಡುವಿನಲ್ಲಿ ...ೊಂದು ಬಾಡಿಗೆ ಮನೆಯಲ್ಲಿದ್ದ ಪ್ರಿಯಾ ಹಾಸನ್ ...ಡನೋಡುತ್ತಿದ್ದಂತೇ ಕೈತುಂಬ ಕಾಸು ಮಾಡಿ ...ೇಶ್ವರನಗರ, ಕುರುಬರಹಳ್ಳಿಯಲ್ಲಿ ಎಸ್.ನಾರಾಯಣ್ ಮನೆ ...ಪೇ ಒಂದು ಮನೆ ಮಾಡಿಕೊಂಡಳು. ಆಟೋ ಛಾರ್ಜ್ ... ಇಲ್ಲದೇ ಗಾಂಧಿನಗರದಲ್ಲಿ ಅಲೆಯುತ್ತಿದ್ದ ಈ ಹುಡುಗಿ ...ದ್ದಹಾಗೆ ದುಬಾರಿ ಕಾರುಗಳಲ್ಲಿ ಓಡಾಡಲು ಶುರು ...ಡಳು. ಸಿನಿಮಾ ಅವಕಾಶವೇ ಇಲ್ಲದ ಈಕೆಗೆ ಅದ್ಯಾವ ...ಸ್ನಿನಲ್ಲಿ ಈ ಪಾಟಿ ಹಣ ಬಂತು ಅನ್ನೋದು ಇವತ್ತಿಗೂ ...ಢ ರಹಸ್ಯವಾಗಿದೆ.

...ಒಂದು ಮೂಲದ ಪ್ರಕಾರ ಬೆಂಗಳೂರಿನ ಚಿನ್ನದ ...ಗೊಂದರ ಶೆಟ್ಟಿಯೊಬ್ಬ ಈಕೆಯ ಸಿನಿಮಾಕ್ಕೆ ಫೈನಾನ್ಸು ...ತ್ತಾನಂತೆ. ಆದರೆ ಆ ಶೆಟ್ಟಿ ಯಾರು? ಈಕೆಗೂ ...ಗೂ ಏನು ಸಂಬಂಧ ಎಂಬುದೂ ಗುಟ್ಟುಗುಟ್ಟೇ...!

ಬೆನ್ನಿಗೆ ನಿಂತ ಭಗವಾನ್...



ಪ್ರಿಯಾ ಹಾಸನ್ ಸಿನಿಮಾ ನಟನೆ ಆರಂಭಿಸುವ ಮುನ್ನ ಆದರ್ಶ ಫಿಲಂ ಇನ್‌ಸ್ಟಿಟ್ಯೂಟ್‌ನಲ್ಲಿ ಕೋರ್ಸು ಮುಗಿಸಿದ್ದಳು. ಆಗಿನಿಂದಲೇ ಹಿರಿಯ ನಿರ್ದೇಶಕ ಎಸ್.ಕೆ. ಭಗವಾನ್‌ಗೂ ಈಕೆಗೂ ಅದೇನೋ ಒಂಥರಾ ನಂಟು. ಪಾಪ... ಭಗವಾನ್ ಆದರೂ ಸಣ್ಣ ಪುಟ್ಟ ಜೂನಿಯರ್ ಆರ್ಟಿಸ್ಟುಗಳಿಗೆ ತಮ್ಮ ದಿವ್ಯ ಆಶೀರ್ವಾದವನ್ನು ನೀಡಿ ಅಷ್ಟಿಷ್ಟು ಛಾನ್ಸು ಕೊಡಿಸುತ್ತಾರೆ. ಅದೇ ರೀತಿ ಪ್ರಿಯಾ ಹಾಸನ್‌ಳ ಬೆಳವಣಿಗೆಗೆ, ಆಕೆಯ ಸರ್ವಾಂಗೀಣ ಅಭಿವೃದ್ಧಿಗೆ, ಆಕೆಯ ಬೆನ್ನಿಗೆ ನಿಂತಿದ್ದು ಕೂಡಾ ಇದೇ ಭಗವಾನ್!

ಚಿತ್ರರಂಗದ ಪ್ರತಿಯೊಬ್ಬರಿಗೂ ಗೊತ್ತಿರುವ ವಿಚಾರವೆಂದರೆ, ಭಗವಾನ್ 'ಹೊಸಾ ಹುಡುಗಿಯರಿಗೆ ಸಿಕ್ಕಾಪಟ್ಟೆ ಪ್ರೋತ್ಸಾಹ ಕೊಡ್ತಾರೆ' ಎನ್ನುವುದು. ಭಗವಾನ್ ನಿರ್ದೇಶನ ಮಾಡಿ ಅದೆಷ್ಟು ಖ್ಯಾತಿ ಪಡೆದರೋ? ಆದರೆ ಸಿನಿಮಾರಂಗದಲ್ಲಿ ಅವಕಾಶಕ್ಕಾಗಿ ಹಾತೊರೆಯುವ ಹೆಣ್ಣುಮಕ್ಕಳಿಗೆ ಸಹಾಯಹಸ್ತ ನೀಡುವುದರಲ್ಲಿ ಭಯಾನಕ ಪಾಪ್ಯುಲಾರಿಟಿ ಪಡೆದಿದ್ದಾರೆ. ಹೀಗಾಗಿ ಟೀವಿ ನಿರೂಪಕಿಯರಿಂದ ಹಿಡಿದು, ಸಿನಿಮಾದ ಸಹನಟಿಯರ ತನಕ ಬಹಳಷ್ಟು ಹೆಣ್ಣುಮಕ್ಕಳು ಭಗವಾನರನ್ನು ಥೇಟು ದೈವ ಸ್ವರೂಪಿಯಂತೇ ಆರಾಧಿಸುತ್ತಾರೆ!

ತಮ್ಮ ಸಹಪಾಠಿ ಮತ್ತು ಚಿತ್ರರಂಗ ಕಂಡ ಅತ್ಯಂತ ಕ್ರಿಯಾಶೀಲ ವ್ಯಕ್ತಿ ದೊರೈ ಚಿತ್ರ ನಿರ್ದೇಶನದಲ್ಲಿ ತಲ್ಲೀನರಾಗಿದ್ದರೆ, ಭಗವಾನ್ ಸಾಹೇಬರು ಮಾತ್ರ ನಿರ್ದೇಶನದ ಹೊರತಾಗಿ ಬೇರೆಲ್ಲ ಚಟುವಟಿಕೆಗಳಲ್ಲೂ ಬ್ಯುಸಿಯಾಗಿರುತ್ತಿದ್ದರು ಎಂಬ ಮಾತು ಬಹಳ ಹಿಂದಿನಿಂದಲೂ ಇದೆ.

ವಯಸ್ಸು ಎಂಭತ್ತಕ್ಕೆ ಹತ್ತಿರಾದರೂ ಇವತ್ತಿಗೂ ಚಿರ ಯುವಕನಂತಾಡುವ ಭಗವಾನ್ ಪ್ರಿಯಾ ಹಾಸನಳಿಗೆ ನೀಡಿರುವ ಸಹಕಾರ ಅಷ್ಟಿಷ್ಟಲ್ಲ. ಪ್ರಿಯಾ ನಿರ್ದೇಶಿಸಿದ (!) ಮೊದಲ ಚಿತ್ರಕ್ಕೇ ಪಟ ಹಿಡಿದು, ಲಾಬಿ ಮಾಡಿ ನಿರ್ದೇಶಕರ ಸಂಘದವರು ಪ್ರತಿ ವರ್ಷ ನೀಡುವ 'ಕಾಸ್ಮಿಡಾ ಅವಾರ್ಡು' ಕೊಡಿಸಿಕೊಟ್ಟರು. ನಿರ್ದೇಶಿಸಿದ ಮೊದಲ ಚಿತ್ರಕ್ಕೇ ಈಕೆಗೆ ಉತ್ತಮ ನಾಯಕಿ ಮತ್ತು ಉತ್ತಮ ನಿರ್ದೇಶಕಿ ಎಂಬ ಎರಡೆರಡು ಪ್ರಶಸ್ತಿಗಳನ್ನು ಕೊಡಿಸಿದ್ದಕ್ಕಾಗಿ ಸ್ವತಃ ನಿರ್ದೇಶಕರ ಸಂಘದಲ್ಲೇ ಹಲವಾರು ಭಿನ್ನಾಭಿಪ್ರಾಯ, ಗಲಾಟೆಗಳು ನಡೆದವು. ಆದರೆ ಭಗವಾನರು ಅದ್ಯಾವುದಕ್ಕೂ ತಲೆ ಕೆಡಿಸಿಕೊಳ್ಳದೇ ಪ್ರಿಯಾಳನ್ನು ಪೋಷಿಸುವುದನ್ನು ಮುಂದುವರೆಸಿದ್ದಾರೆ...

ಬೋಲೋ ಭಗವಾನ್ ಮಹಾರಾಜ್‌ಕೀ... ಜೈ!



ಭಗವಾನರೊಂದಿಗೆ ಪ್ರಿಯಾ

ರಗಳೆ ರಾಘವನ ಸಿಡಿ ಸದ್ದು; ಸಿಪಿಐ ಸೂರಜ್‌ಗೆ ಗುದ್ದು



ಹೈಗರ ಮಠಾಧೀಶ 'ಸಿಡಿ ಸ್ವಾಮಿ' ಯಾನೆ ರಗಳೆ ರಾಘವೇಶ್ವರನ ಲೌಕಿಕ ಲೀಲೆಗಳಿಂದ ಸರಣಿ ಅನಾಹುತಗಳಾಗುತ್ತಿವೆ. ಸಮಾಜದಲ್ಲಿ ಶಾಂತಿ-ಸಾಮರಸ್ಯ-ಸಂತೋಷ ಸ್ಥಾಪಿಸುವುದು ಯತಿಧರ್ಮ ತಾನೆ? ಅದು ಆ ಸೋಗಲಾಡಿ ಸ್ವಾಮಿಯಿಂದ ಸಾಧ್ಯವಿಲ್ಲ. ಆದ್ದರಿಂದ ಇವತ್ತು ಹವ್ಯಕ ಸಮುದಾಯದಲ್ಲಿ ಒಂಥರಾ ಕ್ಷೋಭೆ-ಭಯೋತ್ಪಾದನೆ-ಭಾನ್ಗಡಿಗಳು ಶುರುವಾಗಿವೆ. ರಾಘವನ ಒಣ ಪ್ರತಿಷ್ಠೆಯ ತೆವಲಿಂದ ಬ್ರಾಹ್ಮಣರು ಬರೋಬ್ಬರಿ ಎರಡು ಬಣವಾಗಿ ನಿತ್ಯ ಬಡಿದಾಟವಾಗುತ್ತಿದೆ....

ರಾಘವೇಶ ಗೋಕರ್ಣಕ್ಕೆ ಎಂಟ್ರಿ ಪಡೆದಿದ್ದೇ ತಡ, ಶಿವನ ಆತ್ಮಲಿಂಗವನ್ನು ಬಂಡವಾಳ ಮಾಡಿಕೊಂಡು ಹೊಟ್ಟೆ ಹೊರೆಯುತ್ತಿದ್ದ ಸ್ಥಳೀಯ ವೈದಿಕರನ್ನು ಬೀದಿ ಪಾಲಾಗಿಸಿಬಿಟ್ಟ. ಸಹಜವಾಗೇ ನಿರಾಶ್ರಿತ ಪುರೋಹಿತ ಪಡೆ ರಾಘವೇಶನ ರೌಡಿ ಗ್ಯಾಂಗಿನ ವಿರುದ್ಧ ತಿರುಗಿಬಿದ್ದಿತು. ನಿತ್ಯ ನೂತನ ಕದನ ಏರ್ಪಟ್ಟಿತು. ಆ ಕದನದ ಭಾಗವಾಗಿ ರಾಘವೇಶನ ಮಾನಹಾನಿಗೆ ಗೋಕರ್ಣದ ಬ್ರಾಹ್ಮಣರು 'ಸೆಕ್ಸ್ ಸಿಡಿ' ಒಂದನ್ನು ತಯಾರಿಸುತ್ತಿದ್ದಾರೆಂದೂ, ಅವರನ್ನೆಲ್ಲ ಕೂಡಲೆ ಬಂಧಿಸಿ 'ಹಿಂದೂ ಸ್ವಾಮಿಯ' ಮಾನವನ್ನು ರಕ್ಷಿಸಬೇಕೆಂದೂ ಗುಲ್ಲು ಹಬ್ಬಿತು.

ಆದರೆ ವಾಸ್ತವವೇನೆಂದರೆ, ಈ ಗೋಕರ್ಣದ ಭಟ್ಟಿಕ್ಕಳು ಇದ್ದಾರಲ್ಲಾ, ಅವರು ಮಹಾ ಪೊಕ್ಕು! ನಕಲಿ ಸೆಕ್ಸ್ ಸಿಡಿ ತಯಾರಿಸುವಂಥ ಧೈರ್ಯವಿರುವಂಥರಲ್ಲ. ಹಾಗೆಯೇ ದೂರದ ಕೇರಳಕ್ಕೆಲ್ಲ ಹೋಗಿ ರಾಸಲೀಲೆಯ ಶೂಟ್ ಮಾಡಿತರುವಷ್ಟು ಚಾಲಾಕಿತನ ಈ ತುಟ್ಟಿಕಾಸಿನ ಮಾಣಿಗಳಿಗೆ ಇದ್ದಂತಿಲ್ಲ. ಇನ್ನು ಕಂಪ್ಯೂಟರ್ ತಂತ್ರಜ್ಞಾನ, ಮಿಕ್ಸಿಂಗ್, ಡಿಸೈನಿಂಗ್, ಪೇಸ್ಟಿಂಗ್‌ಗಳ ಅರಿವೂ ಈ ಬೊಗಳೆ ಭೂಪರಿಗಿದೆಯೆಂದರೆ ನಂಬುವುದು ಕಷ್ಟ. ಯಾವುದಾದರೂ ಪುಣ್ಯಾಪೇಕ್ಷೆ ಪಾಪಿ ಕ್ರಿಯಾ-ಕರ್ಮಕ್ಕೆಂದು ಗೋಕರ್ಣಕ್ಕೆ ಬಂದರೆ ಆತನ ಕಾಸು ಖಾಲಿ ಮಾಡಿಸುವ 'ಪುರೋಹಿತಕೆ' ಹಿಕಮತ್ತು ಬಿಟ್ಟರೆ ಇಂಥ ನಕಲಿ ಸಿಡಿ ಮಾಡುವ ಎದೆಗಾರಿಕೆ ಗೋಕರ್ಣದ ಶೋಷಕ ವೈದಿಕ ವರ್ಗಕ್ಕಿಲ್ಲ! ಅಂದರೆ ಅಂತಹ ಒಂದು ಸಿಡಿ ತಯಾರಾದದ್ದರ ಬಗ್ಗೆಯೇ ಡೌಟೋ ಡೌಟು!



ಆದರೆ ಯಡ್ಡಿಯ ಚೆಡ್ಡಿ ಸರ್ಕಾರ ಸುಮ್ಮನಿದ್ದೀತೆ? ರಾಘವೇಶನ ಮಾನ ರಕ್ಷಿಸಲು ಗೋಕರ್ಣದ ಭಟ್ಟರಿಗೆ ಪಾಠ ಕಲಿಸಲು ಮುಂದಾಗಿ ಅವರಲ್ಲೆ ಕೆಲವರನ್ನು ಬಂಧಿಸಿತು. ಆದರೆ ಅವರೆಲ್ಲ ನ್ಯಾಯಾಲಯದಿಂದ ಬೇಲ್ ಪಡೆದರು ಮತ್ತು ಪೊಲೀಸರಿಂದ ಬಚಾವಾಗಿದ್ದ ಇನ್ನೂ ಹಲವರು ನಿರೀಕ್ಷಣಾ ಜಾಮೀನು ಪಡೆದು ಸೇಫ್ ಆದರು.

ಇದು ಸಾಧ್ಯವಾಗಿದ್ದು ಹೇಗೆಂದರೆ: ಗೋಕರ್ಣದ ಭಟ್ಟರಿಗೆ ಪಾಠ ಕಲಿಸಬೇಕೆಂದಿದ್ದ ಚೆಡ್ಡಿಗಳ ಮನದಿಂಗಿತ ಕುಂವಂಟಾದ ಸಿಪಿಐ ಸೂರಜ್ ನಾಯಕ್‌ಗೆ ಅರ್ಥವಾಗದಿದ್ದದ್ದು. ಈ ಪ್ರಮಾದಕ್ಕಾಗಿ ಆತನಿಗೀಗ ವರ್ಗಾವಣೆಯ ಶಿಕ್ಷೆ ಕೊಡಲಾಗಿದೆ. "ಆಪರೇಷನ್ ಆ್ಯಂಟಿ ಸ್ವಾಮಿ ಗ್ಯಾಂಗ್" ಹೊತ್ತಲ್ಲಿ ಈ ಸಿಪಿಐ ಕಠೋರವಾಗಿ ಕಾನೂನು ಬಳಸಲಿಲ್ಲವೆಂಬ "ಕರ್ತವ್ಯಚ್ಯುತಿ" ಚೆಡ್ಡಿ ಸರ್ಕಾರದ ಪಿತ್ಥವನ್ನು ನೆತ್ತಿಗೇರಿಸಿತು.



ಒಂದೇ ದಿನಕ್ಕೆ ನಕಲಿ ಸಿಡಿ ಆರೋಪಿಗಳು ಬೇಲ್ ಪಡೆದದ್ದು ಪೊಲೀಸರ ಕೈಗೆ ಸಿಗದೆ ತಲೆಮರೆಸಿಕೊಂಡಿದ್ದ ಇತರ 9 ಮಂದಿಗೂ ನಿರೀಕ್ಷಣಾ ಜಾಮೀನು ಸಿಕ್ಕಿದ್ದೆಲ್ಲ ಈ ಸಿಪಿಐ ಸೂರಜನ 'ಹೊಣೆಗೇಡಿತನ'ವೆಂಬುದು ಸರ್ಕಾರ ಮತ್ತು ಸ್ವಾಮಿ ಬಳಗದ ಭಾವನೆ. ಆತ ಸ್ವಾಮಿ ಶತ್ರುಗಳ ಮೇಲೆ ಕಠಿಣ ಆಕ್ಟ್‌ಗಳ ಹಾಕಿ ಜಾಮೀನು ಸಿಗದಂತೆ ಮಾಡಬೇಕಿತ್ತು, ತಲೆ ಮರೆಸಿಕೊಂಡವರಿಗೆ ಪರಾರಿಗೆ ಅವಕಾಶವೇ ಕೊಡದೆ ಎತ್ತಾಕಿಕೊಂಡು ಒಂದು ಸೆಲ್‌ನಲ್ಲಿ ರಿಪೇರಿ ಮಾಡಬೇಕಿತ್ತೆಂಬುದು ಸ್ವಾಮಿ ಗ್ಯಾಂಗಿನ ಅಪೇಕ್ಷೆ-ನಿರೀಕ್ಷೆಯಾಗಿತ್ತು.

ಆದರೆ ಅಂಥ ಹರಾಮಿ ಅಧಿಕಾರಿಯಲ್ಲದ ಸೂರಜ್ ನಾಯಕರಿಂದ ಸ್ವಾಮಿ ಮತ್ತು ಸರ್ಕಾರವನ್ನು ಖುಷಿಪಡಿಸುವ ಕಾನೂನುಬಾಹಿರ ಪೊಲೀಸ್‌ಗಿರಿ ಮಾಡಲಾಗಲಿಲ್ಲ. ಈ ನಕಲಿ ಸಿಡಿ ಕೇಸಿನಲ್ಲೇ ವಿರೋಧಾಭಾಸಗಳಿದ್ದುದರಿಂದ ಸೂರಜ್‌ಗೆ ಯಾವ ಆಕ್ಟ್-ಕಲಂ ಬಳಸಬೇಕೆಂಬ ಕನ್‌ಫ್ಯೂಜನ್ ಕಾಡಿತು. ಒಂದೆಡೆ ನಕಲಿ ಸಿಡಿ ತಯಾರಿಕೆ ಪ್ರಯತ್ನ ಎಂದರೆ, ಇನ್ನೊಂದೆಡೆ ನಕಲಿ ಸಿಡಿ ವಿತರಣೆ ಎನ್ನಲಾಗಿತ್ತು. ಮಗದೊಂದೆಡೆ ಸ್ವಾಮಿ ಮಾನ ಹಾರಾಜಾಕುವ ಕರಪತ್ರ ಹಂಚುವಿಕೆ ಎನ್ನಲಾಗಿತ್ತು. ಈ ಗೊಂದಲದಲ್ಲಿ ಸಿಪಿಐ ಸೂರಜ್ ಬಲಿಯಾಗಿದ್ದಾರೆ. ಆತನನ್ನು ಈಗ ಚೆಡ್ಡಿ ಸರ್ಕಾರ ಪುತ್ತೂರಿಗೆ ಎತ್ತಂಗಡಿ ಮಾಡಿಬಿಟ್ಟಿದೆ; ಪುತ್ತೂರಲ್ಲಿರುವ ಸ್ವಾಮಿ-ಸರ್ಕಾರ ನಿಷ್ಠ ಸಿಪಿಐ ಶ್ರೀಕಾಂತ ಎಂಬಾತನನ್ನು ಕುಮಟೆಗೆ ವರ್ಗಾಯಿಸಿದೆ. ಅಲ್ಲಿಗೆ ತಮ್ಮ ಮನದಿಂಗಿತಕ್ಕೆ ತಕ್ಕಂತೆ ಡ್ಯೂಟಿ ಮಾಡದ ಉದ್ಧಟ ಸೂರಜ್‌ನ ಸತಾಯಿಸಿದ ತೃಪ್ತಿ ಈ ಖಾಕಿ-ಖಾಕಿಗಳಿಗೆ ಸಿಕ್ಕಿದೆ.

ಈ ವರದಿ ಸಿದ್ಧವಾಗುತ್ತಿರುವ ಹೊತ್ತಿಗೆ ಮರ್ಯಾದಸ್ಥ ಅಧಿಕಾರಿ ಸೂರಜ್ ತನ್ನ ವರ್ಗಾವಣೆ ಆದೇಶಕ್ಕೆ ಸ್ಟೇ ತಂದಿದ್ದಾರೆ. ಅಲ್ಲಿಗೆ ಈ ಹಿಂದುಳಿದ ವರ್ಗದ ಆಫೀಸರ್ ವೈದಿಕವಾದಿಗಳಿಗೆ ಸ್ವಾಭಿಮಾನ ತೋರಿಸಿದಂತಾಗಿದೆ. ಆದರೆ ಶಿಷ್ಟರಿಗೆ ಶಿಕ್ಷೆ-ದುಷ್ಟರಿಗೆ ರಕ್ಷೆ ಎಂಬ ಮತಾಂಧ ಯಡ್ಡಿ ಸರ್ಕಾರದ ಸೂತ್ರದಡಿ ಸೂರಜ್ ಗಂಡಾಂತರಕ್ಕೀಡಾಗುವ ಸಾಧ್ಯತೆ ಇದ್ದೇ ಇದೆ.

ಒಂದಂತೂ ನಿಜ. ಕಾವಿಧಾರಿ ರಾಘವೇಶ ಮತ್ತು ಚೆಡ್ಡಿ ಸರ್ಕಾರ ಏನೇ ಹೇಳಲಿ; ಅದೇಕೋ ಈ ಸಿಡಿ ಪ್ರಕರಣ ನಂಬಲರ್ಹ ಅನ್ನಿಸುವುದೇ ಇಲ್ಲ. ಹಾಗಾಗಿ ಯಡ್ಡಿಗೆ, ಆಚಾರ್ಯನಿಗೆ ಮತ್ತು ರಾಘವೇಶನಿಗೆ ಮಂಪರು ಪರೀಕ್ಷೆ ಮಾಡಿಸಿ ಸತ್ಯ-ಸುಳ್ಳುಗಳನ್ನು ಹೊರಗೆಳೆಯೋಣ ಅಂದರೆ ಈಗ ಸುಪ್ರೀಂಕೋರ್ಟೇ ಅದಕ್ಕೆ ತಡೆತಂದಿದೆ, ಎಂತ ಮಾಡುವುದು?!

• ವರದಿಗಾರ

ಪೇಜಾವರನಾಗುವ ಪರಾಕ್ರಮ!

ರಾಮಚಂದ್ರಾಪುರ ಮಠದ ರಗಳೆ ರಾಘವೇಶ... ಎದುರಾಳಿಗಳೆಂಬ ಏಕೈಕ ಕಾರಣಕ್ಕೆ ನಿಷ್ಪಾಪಿಗಳ ಮೇಲೆ ಪೊಲೀಸರ ಛೂಬಿಟ್ಟು ಸತಾಯಿಸುತ್ತಿರುವ ಯಡ್ಡಿ ಸರ್ಕಾರ ಈಗ ಈ ಸೋಗಲಾಡಿ ಸ್ವಾಮಿಗೆ 'ಎಕ್ಸ್' ಕೆಟಗರಿ ಸೆಕ್ಯುರಿಟಿ ಕೊಟ್ಟು ಕೃತಾರ್ಥವಾಗಿದೆ! ಈಗ ಈ ಸರ್ವಸಂಗ ಪರಿತ್ಯಾಗಿಯ ಸುತ್ತ ಹಗಲಿರುಳೂ ಕೋವಿಧಾರಿಗಳು ಸುತ್ತುವರಿದಿರುತ್ತಾರೆ. ಪೊಲೀಸ್ ಕೋಟೆಯಲ್ಲಿ ಕುಳಿತು ಸನ್ಯಾಸಿಯೊಬ್ಬ ಶಿಷ್ಯ ಸಂಕುಲ ಉದ್ಧರಿಸುವ ಪ್ರವಚನ ಕೊಡುವುದೇ ಹಾಸ್ಯಾಸ್ಪದ ಅಲ್ಲವೇ?

ಅಲ್ಲಿಗೆ ಪೇಜಾವರ ಸ್ವಾಮಿಯ 'ಪೊಲಿಟಿಕಲ್ ಸ್ವಾಮಿ' ಪೀಠವೇರುವ ರಾಘವೇಶನ ಕಸರತ್ತಿಗೆ ಮೊದಲ ಸುತ್ತಿನ ಜಯ ಸಿಕ್ಕಂತಾಗಿದೆ. ಪೇಜಾವರರಂತೆ ಸರ್ಕಾರಗಳನ್ನು ಆಡಿಸುವ-ಕುಣಿಸುವ ಸ್ವಾಮಿ ತಾನಾಗಬೇಕೆಂಬ ಕನಸು ರಾಘವನಿಗೆ ಬಿದ್ದಿದ್ದು ಕುಮಾರಸ್ವಾಮಿಯ "ಕೋಜಾ" ಪರ್ವದಲ್ಲಿ. ಈಗಾತ ಬಿಜೆಪಿ ಸರ್ಕಾರದ ಆಸ್ಥಾನ ಪುರೋಹಿತನಾಗುವ ಹಿಕಮತ್ತಿನಲ್ಲಿದ್ದಾನೆ. ಪೇಜಾವರರಿಗೆ ವಯಸ್ಸಾಗಿದೆ. ಆತ ಚಲಾವಣೆ ಕಳೆಕೊಂಡಾಕ್ಷಣ ಉಡುಪಿ ಅಷ್ಟಮಠದ ಅನಿಷ್ಟನೊಬ್ಬ ಆ ಸ್ಥಾನಕ್ಕೇರುವ ಸಾಧ್ಯತೆ ಹೆಚ್ಚು. ಅದಕ್ಕೆ ಅವಕಾಶವಾಗದಂತೆ ಈಗಿಂದಲೇ ರಾಜಕೀಯ ತಾಲೀಮನ್ನು ರಾಘವೇಶ ಶುರುಹಚ್ಚಿಕೊಂಡಿದ್ದಾನೆಂಬುದು ರಾಮಚಂದ್ರಾಪುರ ಮಠದ ಶಿಷ್ಯ ವರ್ಗದಲ್ಲಿರುವ ಸುದ್ದಿ.



ಗನ್‌ಮ್ಯಾನ್‌ಗಳ ರಕ್ಷಣೆಯಲ್ಲಿ ಓಡಾಡುವ ದುಃಸ್ಥಿತಿ ತಂದುಕೊಂಡಿರುವ ರಾಘವನಿಗೀಗ ಪುಢಾರಿ ಕಳೆ ಬಂದುಬಿಟ್ಟಿದೆ. ಸಾಕ್ಷಾತ್ ಸಿ... ಸುಬ್ಬದ ಆತ ಒಂದು ಆ್ಯಂಗಲ್‌ನಲ್ಲಿ ಪೇಜಾವರರಿಗಿಂತ ಪವರ್‌ಫುಲ್ ಆಗಿ ಕಾಣಿಸುತ್ತಾನೆ. ಶಿವಳ್ಳಿ (ವೈಷ್ಣವ) ಬ್ರಾಹ್ಮಣ ಪೇಜಾವರರಿಗಿಂತ ಹವ್ಯಕ ಬ್ರಾಹ್ಮಣ ರಾಘವನ ಸಮುದಾಯದ ಸಂಖ್ಯಾ ತೂಕವೇ ಜಾಸ್ತಿ. ಆದರೆ ಪೇಜಾವರರಿಗೆ ಹೋಲಿಸಿದರೆ ಈ ರಸಿಕ ಸ್ವಾಮಿ ಅಪಾಯಕಾರಿ-ಅಬ್... ಪಾರಿ! ಮಲ್ಲಿಕಾ ಶೆರಾವತ್‌ಳಂಥ ಬಾಲಿವುಡ್ ಬಿಚ್ಚಮ್ಮ... ಪಕ್ಕ ಬೆಚ್ಚನೆ ಕುಳಿತು ಹಲ್ಲು ಕಿರಿವ ರಾಘವೇಶ... 'ನೈತಿಕತೆ'ಯೂ ಪೇಜಾವರರಷ್ಟು 'ಗಟ್ಟಿ' ಇಲ್ಲ. ಪೇಜಾವರ... ಧರ್ಮಕಾರಣದ ಅನಾಹುತಗಳೇನೇ ಇದ್ದರೂ ಆತ... ಕಚ್ಚೆಯಿಂದೂ ಸಡಿಲಾದ ಕುರುಹುಗಳಿಲ್ಲ!

ಪೊಲಿಟಿಕಲ್ ಸ್ವಾಮಿಯಾಗುವ ರಾಘವನ ತೆವ... ದಿನಕ್ಕೊಂದು 'ಧರ್ಮಸಂಕಟ' ಸೃಷ್ಟಿಸುತ್ತಿದೆ!

ಬೆಂಗಳೂರು ಉದಯವಾಣಿಗೂ ಬಂತು ಆರೆಸ್ಸೆಸ್ ಚೆಡ್ಡಿ

ಉದಯವಾಣಿ ದಿನಪತ್ರಿಕೆಯ ಬೆಂಗಳೂರು ಆವೃತ್ತಿಗೆ ಕಳೆದ ಹತ್ತೊಂಭತ್ತು ವರ್ಷಗಳಿಂದ ಸಂಪಾದಕಿಯಾಗಿ ಕಾರ್ಯ ನಿರ್ವಹಿಸಿದ, ಎಲ್ಲ ವಲಯದವರನ್ನೂ ಪತ್ರಿಕೆಯತ್ತ ಸೆಳೆದಿದ್ದ ಸಾಹಿತಿ-ಸಂಪಾದಕಿ ಪೂರ್ಣಿಮಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿದ್ದಾರೆ. ಆ ಮೂಲಕ ಉದಯವಾಣಿ ಸಂಸ್ಥೆಯಲ್ಲಿದ್ದ ಒಂದೇ ಒಂದು ಪ್ರಗತಿಪರ ಕೊಂಡಿಯೂ ಕಳಚಿಕೊಂಡಿದೆ; ದಿನಪತ್ರಿಕೆ ವಲಯದಲ್ಲಿದ್ದ ಒಬ್ಬೇ ಒಬ್ಬ ಮಹಿಳಾ ಸಂಪಾದಕಿಯೂ ಇಲ್ಲದಂತಾಗಿದೆ.

ಉದಯವಾಣಿ
ಕನ್ನಡ ದಿನಪತ್ರಿಕೆ

ಪೂರ್ಣಿಮಾ ಅವರ ರಾಜೀನಾಮೆಗೆ ಸಂಸ್ಥೆಯಲ್ಲಿನ ಆಂತರಿಕ ಭಿನ್ನಾಭಿಪ್ರಾಯವೇ ಕಾರಣವಾಗಿದೆ.

ಪೂರ್ಣಿಮಾ ಅವರು ಉದಯವಾಣಿಗೆ ಬರುವ ಮೊದಲು ಆ ಪತ್ರಿಕೆ ಬೋರ್ಡಿಗಿಲ್ಲದ ಪರಿಸ್ಥಿತಿಯಲ್ಲಿತ್ತು. ಪ್ರಜಾವಾಣಿ ಸಂಸ್ಥೆಯಿಂದ ಬಂದ ಪೂರ್ಣಿಮಾ ಮೊದಲು 'ತರಂಗ' ಪತ್ರಿಕೆಯಲ್ಲಿ ಕೆಲಸ ಪ್ರಾರಂಭಿಸಿದರು. ಅದೇ ವೇಳೆಗೆ ಆಗಿನ ಸಂಪಾದಕ ಗೋಪಾಲಕೃಷ್ಣ ಭಟ್ ಅವರ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲ ಎಂಬ ಕೂಗು ಕೇಳಿಬಂದಿತು. ಆ ಹೊತ್ತಿಗಾಗಲೇ ಸಂಸ್ಥೆಯ ಮಾಲೀಕರಾದ ಸಂಧ್ಯಾ ಪೈ ಅವರ ವಿಶ್ವಾಸವನ್ನು ಗಳಿಸಿದ ಪೂರ್ಣಿಮಾರಿಗೆ ಉದಯವಾಣಿಯ ಬೆಂಗಳೂರು ಆವೃತ್ತಿಯ ಸಂಪಾದಕ ಹುದ್ದೆ ನೀಡಲಾಯಿತು.

ಆದರೆ ಆಗ ಅಲ್ಲಿದ್ದ ಸಿಬ್ಬಂದಿಯನ್ನು ನಂಬಿ ಯಾವ ಕೆಲಸವೂ ಆಗುವುದಿಲ್ಲ ಎಂದರಿತ ಪೂರ್ಣಿಮಾ ಅವರು ಒಂದು ಹೊಸ ತಂಡವನ್ನೇ ಕಟ್ಟಿಕೊಂಡರು. ಪ್ರಜಾವಾಣಿಯಿಂದ ಮುರಳೀಧರ್ ಖಜಾನೆ, ಪ್ರಶಾಂತ್ ರೈ, ಪ್ರಸನ್ನ ಕುಮಾರ್ ಮತ್ತು ಜನವಾಹಿನಿಯಲ್ಲಿದ್ದ ಎಂ.ಎ.ಎಂ. ಇಸ್ಮಾಯಿಲ್‌ರನ್ನು ಉದಯವಾಣಿಗೆ ಸೇರಿಸಿಕೊಂಡರು. ಈ ತಂಡದೊಂದಿಗೆ ಪೂರ್ಣಿಮಾ ಪತ್ರಿಕೆಯನ್ನು ಕ್ರಿಯೇಟೀವ್ ಆಗಿ ರೂಪಿಸಲಾರಂಭಿಸಿದರು. ತಮಗೆ ಸಿಕ್ಕಿದ್ದ ಅವಕಾಶವನ್ನು ಛಾಲೆಂಜಿಂಗ್ ಆಗಿ ಸ್ವೀಕರಿಸಿ ಪತ್ರಿಕೆಯಲ್ಲಿ ಮೌಲಿಕವಾದ ಬದಲಾವಣೆಗಳನ್ನು ತಂದರು.

ದಿನಕಳೆದಂತೆ ಮಂಗಳೂರಿನ ಉದಯವಾಣಿ ಆವೃತ್ತಿಗೂ, ಬೆಂಗಳೂರಿನ ಎಡಿಷನ್‌ಗೂ ಅಜಗಜಾಂತರ ವ್ಯತ್ಯಾಸಗಳು ಕಂಡುಬಂದವು. ಬೆಂಗಳೂರಿನ ಸಂಪಾದಕಿ ಪೂರ್ಣಿಮಾರ ಆಶಯಗಳು, ಪ್ರಗತಿಪರ ನಿಲುವುಗಳು ಮಂಗಳೂರಿನ ಹಿಂದೂ ಕೋಮುವಾದಿ ವಲಯಕ್ಕೆ ಸರಿಹೊಂದುತ್ತಿರಲಿಲ್ಲ. ಆಗಿಂದಾಗ್ಗೆ ಒಂದೇ ಪತ್ರಿಕೆಯ ಈ ಎರಡೂ ಆವೃತಿಗಳ ನಡುವೆಯೇ ಸಂಘರ್ಷ ನಡೆಯುತ್ತಿತ್ತು. ಮಂಗಳೂರು-ಬೆಂಗಳೂರಿನ ಸೇತುವೆಯನ್ನು ಸರಿದೂಗಿಸಿಕೊಂಡು ಕಾರ್ಯನಿರ್ವಹಿಸುವುದು ಪೂರ್ಣಿಮಾರ ಪಾಲಿಗೆ ದೊಡ್ಡ ಸವಾಲೇ ಆಯಿತು.



ಆದರೆ ಮಂಗಳೂರಿನ ಆವೃತ್ತಿಯ ಕೆಲ ಚೆಡ್ಡಿಗಳ ಕಿತಾಪತಿಯಿಂದಾಗಿ ಪೂರ್ಣಿಮಾರ ಬೆನ್ನೆಲುಬಾಗಿದ್ದ ಪ್ರಸನ್ನ ಕುಮಾರ್ ಅವರನ್ನು ಹುಬ್ಬಳ್ಳಿ ವಿಭಾಗಕ್ಕೆ ವರ್ಗಾ ಮಾಡಲಾಯಿತು. ಇದರಿಂದ ಬೇಸರಗೊಂಡ ಪ್ರಸನ್ನ ಕುಮಾರ್ ತಮ್ಮ ಕೆಲಸಕ್ಕೇ ರಾಜೀನಾಮೆ ಬರೆದು ಹೊರನಡೆದರು. ಅದಾದನಂತರ ಪೂರ್ಣಿಮಾ ಕಟ್ಟಿಕೊಂಡಿದ್ದ ಕ್ರಿಯಾಶೀಲ ತಂಡದ ಒಬ್ಬೊಬ್ಬ ಸದಸ್ಯರೂ ಒಂದೊಂದು ದಾರಿ ಹಿಡಿಯಲಾರಂಭಿಸಿದರು. ಮುರಳೀಧರ್ ಖಜಾನೆ 'ದಿ ಹಿಂದೂ' ಸೇರಿದರೆ ಇಸ್ಮಾಯಿಲ್ 'ಪ್ರಜಾವಾಣಿ' ಸೇರಿದರು. ಪ್ರಶಾಂತ್ ರೈ 'ಡೆಕ್ಕನ್ ಹೆರಾಲ್ಡ್' ಪಾಲಾದರು.

ತಮ್ಮ ತಂಡದ ವಿಘಟನೆ ಪೂರ್ಣಿಮಾ... ಜಂಗಾಬಲವನ್ನೇ ಹುದುಗಿಸಿತು. ಇದೇ ಸಂದರ್ಭದಲ್ಲಿ ಬೆಂಗಳೂರಿನ ಉದಯವಾಣಿ... ಪ್ರಸಾರ ಸಂಖ್ಯೆಯೂ ಕುಸಿಯಿತು. ಪೂರ್ಣಿಮಾರನ್ನು ಮಣಿಸಲು ಹೊಂಚು ಹಾಕಿದ್ದ ಮಂಗಳೂರಿನ ವಿಪ್ರರು ಇದೇ ಛಾನ್ಸು ಎಂದು ಅವರ ವಿರುದ್ಧ ಮತ್ತಷ್ಟು ದ್ವೇಷದ ಕಿಡಿ ಕಾರಲು ಆರಂಭಿಸಿದರು. ಪತ್ರಿಕೆಯ ಅಧಃಪತನಕ್ಕೆ ಪೂರ್ಣಿಮಾರೇ ಸಂಪೂರ್ಣವಾಗಿ ಕಾರಣ ಎಂಬಂತೆ ಕೂಗಲಾರಂಭಿಸಿದರು.

ಹೀಗೆ ದಿನೇದಿನೇ ಉದಯವಾಣಿಯ... ಅರಾಜಕತೆ ಹೆಚ್ಚಾಗಿದ್ದರಿಂದ 'ಇವರೆಲ್ಲರ ಸಹವಾಸ ಸಾಕು' ಎಂದು ತೀರ್ಮಾನಿಸಿದ ಪೂರ್ಣಿಮಾ ಮ... ರಾಜೀನಾಮೆ ನೀಡಿ ಹೊರಬಂದಿದ್ದಾರೆ.

ಅಲ್ಲಿಗೆ ಉದಯವಾಣಿ ತನ್ನ ಸಂಸ್ಥೆಯಲ್ಲಿದ್ದ ಏಕೈಕ ಪ್ರಗತಿಪರ ಸಾಹಿತಿ ಸಂಪಾದಕೀಯವನ್ನು ಕಳೆದುಕೊಂಡಿದ್ದು ಮಾತ್ರವಲ್ಲ, ಈಗ ಬೆಂಗಳೂರಿನ ಆವೃತ್ತಿಯೂ ಆರೆಸ್ಸೆಸ್ ಚೆಡ್ಡಿ ತೊಟ್ಟಿದೆ.

• ಅರುಣ್

ಹಾಲಪ್ಪ ಓಡಿಹೋಗಿ ಮೋದಿ ಬೆನ್ನ ಬಿದ್ದನಂತಲ್ಲಾ!

ಥೂತ್ತೇರಿ

▸ ಯಾಹೂ

ಕರ್ನಾಟಕ ರಾಜಕಾರಣದ ಇತಿಹಾಸದಲ್ಲಿ ಈವರೆಗೆ ಕಂಡರಿಯದ ಪ್ರಕರಣ ಹೊರಬಿದ್ದರೂ, ಬಿಜೆಪಿ ಭಕ್ತರು ಬಲಿಯಾಗಿಲ್ಲವಂತಲ್ಲಾ. ನಾವು ಸುಸಂಸ್ಕೃತರು, ನಮ್ಮ ಭಾಷೆ ನಮ್ಮ ನಡವಳಿಕೆಯೆಲ್ಲವೂ ಆದರ್ಶಮಯ. ನಾವು ಯುರನ್ನು-ಅದು ಯಾವುದೇ ಸ್ತ್ರೀಯಾಗಿರಬಹುದು-ಮಾತೆ ಎನ್ನುತ್ತೇವೆ ಎಂದು ಗಳೆ ಬಿಡುತ್ತಿದ್ದವರು, ಹಾಲಪ್ಪನ ಪ್ರಕರಣದಲ್ಲಿ ಮಾತ್ರ "ಹಾಲಪ್ಪನ ಮೇಲೆ ರುಕೊಟ್ಟವನು ಸಾಚಾನೋ? ಅವನು ಮೊದಲ ಹೆಂಡತಿಯನ್ನು ಬೀದಿಗೆ ಾಡಿದ್ದಾನೆ. ಎರಡನೇ ಹೆಂಡತಿಯೊಡನೆ ಮನೆಯೊಳಗಿದ್ದಾನೆ" ಎಂದು ರತೊಡಗಿವೆಯಲ್ಲಾ,

ಇದಕ್ಕಿಂತಲೂ ತಮಾಷೆ ಸಂಗತಿಯೆಂದರೆ "ಇಡೀ ಪ್ರಕರಣ ಮೊದಲೇ ನನಗೆ ತ್ತಿತ್ತು, ಆದರೂ ಪಾರ್ಟಿ ಮರ್ಯಾದೆಗಾಗಿ ನಾನು ಸುಮ್ಮನಿದ್ದೆ; ಇನ್ನ ಸುಮ್ಮನಿರಲು ಕ್ಯವಿಲ್ಲ" ಎಂದು ಈಶ್ವರಪ್ಪ ಬೊಬ್ಬೆ ಹೊಡೆಯುತ್ತಿರುವುದು. "ಹಾಲಪ್ಪನ ಮೇಲೆ ಲ್ಲಾ ಆಪಾದನೆ ಮಾಡಿ ಚಂದ್ರಾವತಿಯ ಬಗ್ಗೆ ಕನಿಕರ ತೋರುವ ನೀವು ಲಪ್ಪನ ಹೆಂಡತಿ ಮನಸ್ಸಿಗೆ ಎಷ್ಟು ಬೇಸರವಾಗಬಹುದು, ಎಷ್ಟು ನೋವಾಗಿರಬಹುದು. ಯೋಚಿಸಿದ್ದೀರ?" ದನಂತಲ್ಲಾ ಈಶ್ವರಿ, ಥೂತ್ತೇರಿ!

* * * * *

ಈಶ್ವರಪ್ಪನೆಂಬ ಗಡವನನ್ನು ಸಿದ್ರಾಮಯ್ಯ 'ದಡ್ಡ' ಎಂದು ಸಂಭೋದಿಸಿದ ಕಾರಣಕ್ಕೆ ಕೆಲವು ಈಶ್ವರಿ ಅಭಿಮಾನಿಗಳು ಸಿಟ್ಟಾಗಿದ್ದಾರಲ್ಲ, ಈಗ ಈಶ್ವರಪ್ಪನ ಆಣಿಮುತ್ತುಗಳನ್ನು ನೋಡಿ ಅವರಿಗೆಲ್ಲ ಸಿದ್ರಾಮಯ್ಯನ ಟೀಕೆಯಲ್ಲಿ ಶಾನೆ ಂಶವಿದೆ ಎನಿಸಿದೆಯಂತಲ್ಲಾ, ಈ ಹಿಂದೆ ತನಗೆ ದೂರು ಹೇಳಲು ಬಂದ ಚಂದ್ರಾವತಿಯನ್ನು "ಪೊಲೀಸ್ ಟೆಗೆ ಹೋಗಿ" ಎಂದಿದ್ದ ಈಶ್ವರಪ್ಪ ಈಗ "ಹಾಲಪ್ಪ ರ್ಟೀಪಿ. ವೆಂಕಟೇಶ್‌ಮೂರ್ತಿ ಮನೇಲಿ ಮಲಗಿದ್ದ ಹಾಲಪ್ಪ ಟ್ರೋಹಾಲ್ ದೆಸೆಯಿದ ಮೂತ್ರವಿಸರ್ಜನೆಗೆಂದು ಎದ್ದಿದ್ದಾರೆ. ಕ ಆವರಿಗೆ ಮೂತ್ರಾಲಯವೆಲ್ಲಿದೆ ಎಂದು ಹೇಗೆ ಯುಬೇಕು? ಅದಕ್ಕೆ ತೆರೆದ ಬಾಗಿಲ ರೂಮಿಗೆ ನುಗ್ಗಿದ್ದಾರೆ. ಅಸ್ತವ್ಯಸ್ತವಾಗಿ ಮಲಗಿದ್ದ ಚಂದ್ರಾವತಿಯನ್ನ ನೋಡಿದ್ದಾರೆ. ಇಷ್ಟೇ ಪ್ರಕರಣಕ್ಕೆ ಅವರು ಮಂತ್ರಿ ಪದವಿಗೆ ರಾಜೀನಾಮೆ ಟ್ಟು ಬಿಜೆಪಿ ವರ್ಚಸ್ಸನ್ನು ಹೆಚ್ಚಿಸಿದ್ದಾರೆ. ಕಚ್ಚೆ ಹರುಕ ತ್ರಿಗಳಿಗೆ ಮಾದರಿಯಾಗಿದ್ದಾರೆ" ಎಂದರಂತಲ್ಲಾ, ಥೂತ್ತೇರಿ!!



* * * * *

ನಮ್ಮ ಕರ್ನಾಟಕಕ್ಕೆ ಯಾವ ಹಾದರ ರೋಗ ದುಕೊಂಡಿದೆ? ಈ ಹಿಂದೆ ಬಹಳ ಮರ್ಯಾದಸ್ಥರ ರ್ತ ಎಂದು ಭಾವಿಸಿದ್ದ ಜನತಾ ಪಕ್ಷ ಅಧಿಕಾರದಲ್ಲಿದ್ದಾಗ .ಡಿ.ದೇವೇಗೌಡರು ನಾದಿನಿಗೆ ಸೈಟು ಕೊಟ್ಟು ಸದನದಲ್ಲೇ ತಗ್ಗಿಸಿದ್ದರು. ಅನಂತರ ರಘುಪತಿ ಎಂಬ ಮಾರುತಿ ಬದ್ದನ್ನೆಲ್ಲಾ ಸಿನಿಮಾ ನಟಿ ಆರತಿಗೆ ಬರೆದು ಹಲ್ಲು ಸಿಕೊಂಡಿದ್ದರೂ ಆತನ ಗೆಳೆಯನಾದ ಆಳ್ವನಂತೂ ನತಿಗಳನ್ನೇ ಅಗಲಿಸಿ ಅನುಭವಿಸಿದ್ದೂ ಅಲ್ಲದೆ, ಅದನ್ನೇ ಒಂದು ಮನೋರೋಗ ಮಾಡಿಕೊಂಡು ಇಲ್ಲವಾದ. ಪಟೇಲ್, ಹೆಗಡೆ ಸಾಹೇಬರದ್ದೂ ಬಹಳ ಗೌರವಾನ್ವಿತ ಸಂಬಂಧವಾಗಿತ್ತು, ಇದ್ದದ್ದರಲ್ಲಿ ಎಸ್ಸೆಂ ಕೃಷ್ಣ ಸರ್ಕಾರವೇ ರ್ಮಾಂಗದ ಮರ್ಯಾದೆ ಉಳಿಸಿಕೊಂಡು ಬಾಳಿದ ನಂತರ ಬಂದ ಸರ್ಕಾರವೆಲ್ಲಾ ಹುಟ್ಟು ಹಾದರದ ಸರ್ಕಾರಗಳಾಗಿ ಮಾನ್ಯ ಜನರೇ ಮರ್ಯಾದೆಗಂಜಿ ಬಾಳುತ್ತಿದ್ದಾರಂತಲ್ಲಾ, ಥೂತ್ತೇರಿ!

* * * * *

ಹಾಲಪ್ಪನ ವಿಷಯದಲ್ಲಿ ತಮ್ಮನ್ನೇ ಬಗ್ಗಿ ನೋಡಿಕೊಂಡ ಎಡೂರಪ್ಪನವರು, ಹಾಲಪ್ಪನಂತಹ ಅವಾಂತರಕಾರಿ ತನ್ನ ಸ್ಥಾನಕ್ಕೆ ಸಂಚಕಾರ ತರಬಹುದೆಂದು ಹೆದರಿ ಕೂಡಲೇ ಆತನಿಂದ ರಾಜೀನಾಮೆ ಪಡೆದರಂತಲ್ಲಾ, ಇಷ್ಟಾದನಂತರ ಅಜೇಯನೂ ಅಲ್ಲದ, ಸಿಂಹನೂ ಅಲ್ಲದ, ಕುಮಾರ ಮೊದಲೇ ಅಲ್ಲದ ಡಿಜಿಪಿಯನ್ನು ಕರೆಸಿಕೊಂಡು "ಹೇಗಾದರೂ ಮಾಡಿ ಈ ಹಾಲಪ್ಪನನ್ನ ಬಂಧಿಸದಂತೆ ನೋಡಿಕೊಳ್ಳಲು ಸಾಧ್ಯವೇ?" ಎಂದರಂತಲ್ಲಾ, ಅದನ್ನು ಕೇಳಿ ಡಿಜಿಪಿ ಬಿಟ್ಟ ಹಲ್ಲನ್ನು ಮರೆಯಲೇ ನೋಡಿದ ಹಾಲಪ್ಪ ಕೂಡಲೇ ಕಳ್ಳಭಟ್ಟ ಖದೀಮನಂತೆ ಕಣ್ಮರೆಯಾದನಂತಲ್ಲಾ, ಹಾಲಪ್ಪ ಎಲ್ಲಿ ಹೋದನೆಂದು ಹುಡುಕುತ್ತಿದ್ದರೆ, ಸದ್ದಿಲ್ಲದೆ ನಿರೀಕ್ಷಣಾ ಜಾಮೀನು ಪಡೆದು ಮತ್ತೆ ಭೂಗತನಾಗಿ ಹೋದನಂತಲ್ಲಾ, ಹೀಗೆ ಭೂಗತನಾದ ಹಾಲಪ್ಪ ಗುಜರಾತ್‌ನಲ್ಲಿ ಕಾಣಿಸಿಕೊಂಡು, ನರೇಂದ್ರ ಮೋದಿಯ ರಕ್ಷಣೆಯಲ್ಲಿದ್ದಾನಂತಲ್ಲಾ, ಈ ನರೇಂದ್ರ ಮೋದಿ ಬಳಿ ಹಗಲು ಅಪರಾಧಿಗಳು, ಕೊಲೆಗಡುಕರು ಮತ್ತು ದೊಂಬಿಕೋರರೆಲ್ಲಾ ಜಮಾಗಿರುವುದಲ್ಲದೆ, ಅವರೆಲ್ಲಾ ಸುಖವಾಗಿರುವುದನ್ನು ನೋಡಿದ ಹಾಲಪ್ಪ ತಾಯಿ ಮಡಿಲು ಸೇರಿದ ಸಂತೃಪ್ತಿಯಲ್ಲಿ ಮೋದಿ ಹತ್ತಿರ ಇದ್ದಾನಂತಲ್ಲಾ, ಥೂತ್ತೇರಿ!

* * * * *

ಹಾಲಪ್ಪನ ಪ್ರಕರಣದ ನಂತರ ಶಿವಮೊಗ್ಗ ಜಿಲ್ಲೆಯ ಹೊಸನಗರ, ಸಾಗರ, ಸೊರಬ.. ಇಲ್ಲೆಲ್ಲಾ ಹಾಲಪ್ಪ ಯಾರ್‍ಯಾರ ಮನೆಗೆ ಹೋಗಿ ಮಲಗಿದ್ದನೊ ಅವರೆಲ್ಲಾ ಮರ್ಯಾದೆಗಂಜಿ ಎಲ್ಲೂ ಕಾಣಿಸಿಕೊಳ್ಳುತ್ತಿಲ್ಲವಂತಲ್ಲಾ, ಇದಕ್ಕಿಂತ ಹಾಲಪ್ಪ ಎಂಬ ಹೆಸರಿನವರೂ ಕೂಡ ತಮ್ಮ ಹೆಸರೇನೆಂದು ಕೇಳಿದರೆ ಹಾಲೇಶ್, ಹಾಲೇಗೌಡ, ಹಾಲಸ್ವಾಮಿ ಎಂದು ತೀರಾ ಕೀಳರಿಮೆಯಿಂದಲೇ ಹೇಳುತ್ತಿದ್ದಾರೆಂದರೆ, ಹಾಲಪ್ಪನ ಕೃತ್ಯ ಇನ್ನೆಂತಹದ್ದಾಗಿರಬಹುದು. ಎಂದು ಬುದ್ಧಿಜೀವಿಗಳು ಚರ್ಚಿಸುತ್ತ "ಅಲ್ಲಾ ಈ ಮೂರ್ಖ ಹಾಲ ಐಬಿಯಲ್ಲುಳಿದುಕೊಂಡು ಸರ್ಕಾರದ ಫಲಾನುಭವಿಗಳ ಪೈಕಿ ಯಾರನ್ನಾದರೂ ಕರೆದು 'ಒಂದು ಚಿಕ್ಕನ ಮರಿ ಬೇಕು, ಅದರ ಮೈ ಸವರುತ್ತಾ ಮಲಗುತ್ತೇನೆ' ಎಂದಿದ್ದರೂ ಸಾಕಿತ್ತು, ಸಿಡಿಗಳಿಂದ ತಪ್ಪಿಸಿಕೊಳ್ಳಬಹುದಿತ್ತು, ಅದೂ ಹೋಗಲಿ, ಪಾರ್ಟಿಯಲ್ಲೇ ಇರುವ ಕಮಲಮುಖಿಯರನ್ನ ಕರೆದು 'ಒಂದೆರಡು ದೇವರನಾಮ ಹೇಳಿ ಎಂದಿದ್ದರೂ ಸಾಕಿತ್ತು, ಬೆಳಿಗ್ಗೆ ಎದ್ದು ಹೋಗುತ್ತಿದ್ದರು' ಎಂದೆಲ್ಲಾ ಚರ್ಚಿಸುತ್ತಿವೆಯಂತಲ್ಲಾ, ಥೂತ್ತೇರಿ!

* * * * *

ಯಾಕೋ ಎಡೂರಪ್ಪನ ಸರ್ಕಾರಕ್ಕೂ, ಹೆಣ್ಣುಮಕ್ಕಳಿಗೂ ಆಗಿಬರುತ್ತಿಲ್ಲವಂತಲ್ಲಾ, ರಾಮರಾಜ್ಯ ಸ್ಥಾಪನೆಯ ಅಮಲಿನಲ್ಲಿ ಈಗಾಗಲೇ ಹಲವಾರು ಹೆಣ್ಣುಗಳನ್ನು ಬಲಿ ತೆಗೆದುಕೊಂಡರಂತಲ್ಲಾ, ಅಧಿಕೃತವಾಗಿ ಬಳ್ಳಾರಿಯಲ್ಲಿ ಒಬ್ಬ ಹೆಣ್ಣುಮಗಳ ಕೊಲೆಯಾಗಿದೆ. ಉಡುಪಿಯಲ್ಲಿ ಊರ್ಮಿಳೆಯಷ್ಟು ಒಳ್ಳೆಯವಳಾದ ಹೆಣ್ಣುಮಗಳನ್ನು ಓಡಿಸಿಕೊಂಡು ಹೋಗಿ ದೆಹಲಿಯಲ್ಲಿ ನೇಣುಹಾಕಲಾಗಿದೆ. ಶೋಭಾ ಕರಂದ್ಲಾಜೆಯನ್ನ ಸರ್ಕಾರದಿಂದ ಹೊರಗಿಡಲಾಗಿದೆ. ಇನ್ನು ಚಂದ್ರಾವತಿಯ ಮನೆಗೇ ಹೋಗಿ ರೇಪ್ ಮಾಡಲಾಗಿದೆ. ಇಷ್ಟೆಲ್ಲಾ ಆದರೂ ಭಂಡ ಸರ್ಕಾರ ಬೆಂಗಳೂರಿನ ಹರಕು ಬಾಯಿಯ ಶೂರ್ಪನಖಿಯೊಬ್ಬಳನ್ನು ಇಟ್ಟುಕೊಂಡು ಎಲ್ಲರಿಗೂ ಉತ್ತರ ಕೊಡುತ್ತಿದೆಯಲ್ಲಾ, ಸದರಿ ಶೂರ್ಪನಖಿ ಈ ಹಿಂದೆ ಶಾರ್ಪನಖಿಯಾಗಿದ್ದು ಆಕೆಯ ಉಗುರಿನ ಹೊಡೆತಕ್ಕೆ ಎಲ್ಲಾ ಹೆದರಿ ಸುಮ್ಮನಾದದ್ದೇ ಆಕೆಯ ಬಾಯಿ ಅಗಲವಾಗಲು ಕಾರಣವಾಯ್ತಂತಲ್ಲಾ, ಥೂತ್ತೇರಿ!!! ●



ಬೆಂಗಳೂರು ವಿ.ವಿ. ನಕಲಿ ಕಾಲೇಜುಗಳಿವು...

ನಕಲಿ ಬಿ.ಎಡ್. ಕಾಲೇಜ್‌ಗಳ ಅಸಲಿಯತ್ತು

ನಾಮಕಾವಸ್ತೆಗೊಂದು ಬಿಲ್ಡಿಂಗು, ಹೆಸರಿಗೊಂದು ನ ಬೋರ್ಡು, ಕೈಯಲ್ಲಿ ಬೆಂಗಳೂರು ವಿ.ವಿ. ರುವ ಮಾನ್ಯತಾ ಪತ್ರ.... ಇಷ್ಟಿದ್ದರೆ ಸಾಕು ಬಿ.ಎಡ್. ಜೊಂದು ರೆಡಿಯಾದಂತೆ. ಉಪನ್ಯಾಸಕರಿಲ್ಲದಿದ್ದರೂ ವಿದ್ಯಾರ್ಥಿಗಳ ಅಡ್ಮಿಷನ್ ನಡೆಯುತ್ತದೆ. ಪಾಠ ೀಬೇಕೆಂಬ ಜರೂರತ್ತಿಲ್ಲ, ಏಕೆಂದರೆ ಇಲ್ಲಿಗೆ ಬರುವ ತೇಕ ವಿದ್ಯಾರ್ಥಿಗಳಿಗೆ ಕ್ಲಾಸೇ ಬೇಕಾಗಿಲ್ಲ, ವರ್ಷದ ಮುಲ್ಲವರು ಕಾಸು ಕೊಟ್ಟು ಬಿಎಡ್ ಪಾಸು ಆಗುವ ಷ್ಕರು.

ೀಗೆ ನಾಯಿಕೊಡೆಗಳಂತೆ ಬಿ.ಎಡ್. ಕಾಲೇಜುಗಳಿಗೆ ಮತಿ ಕೊಟ್ಟ ಬೆಂಗಳೂರು ವಿ.ವಿ. ಈಗ ದಿಢೀರನೆ ಕ್ಕೊಂಡು 40 ಕ್ಕೂ ಹೆಚ್ಚು ಕಾಲೇಜುಗಳಿಗೆ ಎಚ್ಚರಿಕೆ ಿದೆ. ಈ ಕಾಲೇಜುಗಳ ವಿದ್ಯಾರ್ಥಿಗಳ ಫಲಿತಾಂಶ ತಡೆಹಿಡಿದಿದೆ. ಈ ವಿದ್ಯಾರ್ಥಿಗಳ ಪೈಕಿ ನಿಜ ಮೂ ಕಲಿಯಲೆಂದು ಬಂದ ಬಡವಿದ್ಯಾರ್ಥಿಗಳೀಗ ಕತ್ತರಿಗೆ ಸಿಕ್ಕುಬಿದ್ದಿದ್ದಾರೆ. ಬೆಂವಿವಿ ಮೊದಲೇ ಕ್ಕೊಂಡು ಈ ಕಾಲೇಜುಗಳ ಮಾನ್ಯತೆ ರದ್ದು ಮಾಡಿದ್ದರೆ ವಿದ್ಯಾರ್ಥಿಗಳ್ಯಾರೂ ಅಲ್ಲಿ ಪ್ರವೇಶ ಪಡೆಯುತ್ತಿರಲಿಲ್ಲ.

ಬೆಂವಿವಿ ವ್ಯಾಪ್ತಿಯಲ್ಲಿ ಒಟ್ಟು 135 ಬಿ.ಎಡ್. ಕಾಲೇಜುಗಳಿದ್ದು, ಇದರಲ್ಲಿ ಸುಮಾರು 20 ಕಾಲೇಜುಗಳು ಕನಿಷ್ಠ ಸಂಖ್ಯೆಯ ವಿದ್ಯಾರ್ಥಿಗಳಿಲ್ಲದ ಕಾರಣ ಉಸಿರಾಟ ನಿಲ್ಲಿಸಿವೆ. ಬದುಕುಳಿದ ಕಾಲೇಜುಗಳ ಪೈಕಿ 40ಕ್ಕೂ ಅಧಿಕ ಕಾಲೇಜುಗಳಲ್ಲಿ ಮೂಲಭೂತ ಸೌಕರ್ಯಗಳಿಲ್ಲ, ಉಪನ್ಯಾಸಕರೂ ಇಲ್ಲ. ಆದರೆ ಇವು ವಿದ್ಯಾರ್ಥಿಗಳಿಂದ ಅದೂ ಹೆಚ್ಚಾಗಿ ಹೊರರಾಜ್ಯದ ವಿದ್ಯಾರ್ಥಿಗಳಿಂದ 50 ಸಾವಿರದಿಂದ ಒಂದು ಲಕ್ಷ ಡೊನೇಷನ್ ಪಡೆದು ಅಡ್ಮಿಷನ್ ನೀಡುತ್ತವೆ. ಕ್ಲಾಸು ನಡೆಸುವುದಿಲ್ಲ, ಆದರೆ ವರ್ಷದ ಕೊನೆಗೆ ಪರೀಕ್ಷೆ ಬರೆಯಲು ಅವಕಾಶ ನೀಡುತ್ತವೆ! ಇನ್ನೊಂದಿಷ್ಟು ದುಡ್ಡು ಕೊಟ್ಟರೆ ಸರ್ಟಿಫಿಕೇಟ್ ವ್ಯವಸ್ಥೆಯೂ ಮನೆಬಾಗಿಲಿಗೇ ಬರುತ್ತದೆ.

ಇದನ್ನೆಲ್ಲಾ ಚೆಕ್ ಮಾಡಲು ವಿ.ವಿ. ಪರೀಶೀಲನಾ ಸಮಿತಿಯಿದೆ, ಸ್ಥಳೀಯ ವಿಚಾರಣಾ ಸಮಿತಿ(LEC) ಗಳಿವೆ. ಆದರೆ ಈ ಸಮಿತಿಗಳು ಕೂಡಾ ಕಾಲೇಜು ಆಡಳಿತ ಮಂಡಳಿಗಳ ಜೊತೆ ಸಹಕರಿಸುತ್ತ ಬಂದಿರುವುದರಿಂದ ನಕಲಿ ಕಾಲೇಜುಗಳನ್ನು ಕೇಳುವವರೇ ಇಲ್ಲವಾಗಿತ್ತು.

ಉಪನ್ಯಾಸಕರಿಲ್ಲ, but ಬಯೋಡಾಟಾ ಇವೆ...

ಯಾರಾದರೂ ಒಬ್ಬ ಉಪನ್ಯಾಸಕ ಹುದ್ದೆ ಕೇಳಿ, ಯಾವುದಾದರೂ ಶಿಕ್ಷಣ ಸಂಸ್ಥೆಗೆ ಬಯೋಡೆಟಾವನ್ನು ಬರೆದುಕೊಟ್ಟರೆ, ಇದೇ ಬಯೋಡೆಟಾ ಸಂಸ್ಥೆಯ ಕಳ್ಳುಬಳ್ಳಿಗಳ ಕಾಲೇಜುಗಳಲ್ಲಿ ಮತ್ತು ವೃತ್ತಿ ದಂಧೆಯ ಸ್ನೇಹಿತರ ಕಾಲೇಜುಗಳ ದಾಖಲೆಗಳಲ್ಲಿ ಸೇರಿಕೊಳ್ಳುತ್ತದೆ. ಎಲ್‌ಇಸಿ, ಬೋರ್ಡ್ ಸಮಿತಿಗಳು ಕಾಲೇಜಿಗೆ ಭೇಟಿ ಕೊಟ್ಟರೆ ಈ ಬಯೋಡೆಟಾ ಕೆಲಸಕ್ಕೆ ಬರುತ್ತದೆ. ಅಂದರೆ ಒಬ್ಬನೇ ಉಪನ್ಯಾಸಕ ಹಲವು ಕಾಲೇಜಿನಲ್ಲಿ ಏಕಕಾಲದಲ್ಲೇ ಪಾಠ ಮಾಡುತ್ತಾನೆ! ಇದು ಖಾಸಗಿ ಶಿಕ್ಷಣ ಸಂಸ್ಥೆಗಳ ಪವಾಡವೇ ಸರಿ!! ಉಪನ್ಯಾಸಕರುಗಳನ್ನು ನೇಮಿಸಿಕೊಂಡರೆ ಸಂಬಳ ಕೊಡಬೇಕು, ಬಯೋಡೆಟಾ ಇದ್ದರೆ ಸಂಬಳ ಉಳಿಸಿಕೊಳ್ಳಬಹುದು! ಇದು ಆಡಳಿತ ಮಂಡಳಿಗಳ ತಂತ್ರ.

ಈಗಲಾದರೂ ಬೆಂವಿವಿ ಎಚ್ಚೆತ್ತುಕೊಂಡು ನಕಲಿ ಕಾಲೇಜುಗಳ ಮಾನ್ಯತೆಯನ್ನು ರದ್ದು ಮಾಡಬೇಕಿದೆ. ಉಳಿದ ಕಾಲೇಜುಗಳಲ್ಲಿ ಸೀಟುಗಳು ಮಾರಾಟವಾಗದಂತೆ ತಡೆದು ಅರ್ಹರಿಗೆ ಅವಕಾಶ ಸಿಗುವಂತೆ ಮಾಡಬೇಕಿದೆ. ಮಕ್ಕಳ ಭವಿಷ್ಯ ರೂಪಿಸುವ ಶಿಕ್ಷಕರೇ ನಕಲಿ ಬಿ.ಎಡ್. ಕಾಲೇಜುಗಳ ಪ್ರಾಡಕ್ಟ್‌ಗಳಾಗಿಬಿಟ್ಟರೆ?

ಬೆಂ.ವಿ.ವಿ. ಬೇಗ ಕ್ರಮ ಕೈಗೊಳ್ಳಲಿ.

● ಕುಮಾರ ಸಮತಳ


ಅಡ್ಮಿಷನ್ ಮಾಡಿಸುವ ಮುನ್ನ...

ಬೆಂಗಳೂರು ವಿವಿ ವ್ಯಾಪ್ತಿಯಲ್ಲಿ ಹೀಗೆ 40 ಕ್ಕೂ ಹೆಚ್ಚು ಗೋಲ್‌ಮಾಲ್ ಬಿ.ಎಡ್ ಕಾಲೇಜುಗಳು ಇವೆ. ಅವುಗಳಲ್ಲಿ ತೆಪರುಘಟ್ಟ, ಮುಖ್ಯರಸ್ತೆಯ ಗಂಗಾ ಕಾವೇರಿ ಕಾಲೇಜು, ಕಮಲಾನಗರದ ಗೌತಮ್ ಕಾಲೇಜು, ಬಾಗೇಪಲ್ಲಿಯ ಧರ್ಮಗುರು ಕಾಲೇಜು, ಗಾಯತ್ರಿ, ನಗರದ ಎಸ್‌ವಿಎಸ್ ಕಾಲೇಜು ಸಾಕಷ್ಟು ಕುಖ್ಯಾತಿ ಗಳಿಸಿವೆ. ಯಾವುದಕ್ಕೂ ಬಿ.ಎಡ್. ಪ್ರವೇಶ ಪಡೆಯುವ ಮುನ್ನ ವಿ.ವಿ.ಯಿಂದ ಇಂತಹ ಬ್ಲಾಕ್‌ಲಿಸ್ಟೆಡ್ ಕಾಲೇಜುಗಳ ಪಟ್ಟಿ ಪಡೆಯಿರಿ.


ಕರಾವಳಿ ಗ್ರಾಮ ಸಮರ

ಹಿಂದೂತ್ವದ ಹಣಾಹಣಿ

ಕರಾವಳಿ ಕರ್ನಾಟಕವೆಂದರೆ ಹಿಂದೂತ್ವದ ಅನಾಹುತಕಾರಿ ಆಡಂಬೋಲ! ಉತ್ತರ ಕನ್ನಡ, ಉಡುಪಿ ಮತ್ತು ದಕ್ಷಿಣ ಕನ್ನಡದಲ್ಲಿ ದಿನವೂ ಒಂದಿಲ್ಲೊಂದು ಧರ್ಮಕಾರಣ ಸಮರ ಕರಾವಳಿಯಲ್ಲಿ ಇದ್ದದ್ದೇ. ಚುನಾವಣೆಗಳು ಅಧಿಕೃತವಾಗಿ ಘೋಷಣೆಯಾದರಂತೂ ಈ ಹಿಂದೂತ್ವದ ಪಾಲಿಟಿಕ್ಸ್‌ಗೆ ಖತರ್‌ನಾಕ್ ಖದರು ಬಂದುಬಿಡುತ್ತದೆ. ಮತಾಂಧರು ಎರಚುವ ಮಂಕುಬೂದಿಗೆ ಇಲ್ಲಿಯ ಮತದಾರರು ದಶಕಗಳಿಂದ ಮರುಳಾಗುತ್ತಲೇ ಇದ್ದಾರೆ.




ಆಚಾರ್ಯ



ಕಾಗೇರಿ

ಅದು ದಿಲ್ಲಿ ಪಾರ್ಲಿಮೆಂಟ್ ಇಲೆಕ್ಷನ್ನೇ ಇರಲಿ; ಅಥವಾ ಹಳ್ಳಿಯ ಗ್ರಾಮ ಪಂಚಾಯತಿ ಚುನಾವಣೆಯೇ ಆಗಿರಲಿ ಸಂಘಪರಿವಾರ ಮತದಾರರಲ್ಲಿ ಮತಾಂಧ ಮದವೇರಿಸಿ ಬೇಳೆ ಬೇಯಿಸಿಕೊಳ್ಳುವ ಷಡ್ಯಂತ್ರ ಕರಗತ ಮಾಡಿಕೊಂಡುಬಿಟ್ಟಿದೆ. ಹಿಂದೂತ್ವದ ರಾಜಕಾರಣವನ್ನು ಕಸುಬಾಗಿಸಿಕೊಂಡ ಹಿಂದು-ಹಿಂದು ಕಾವಿ-ಚೆಡ್ಡಿ ಪುಂಡಪುಢಾರಿಗಳ ದಂಡು-ದಂಡುಗಳೇ ತಯಾರಾಗುತ್ತಿದೆ. ಇವರಿಗೆಲ್ಲ ಅಡಗುದಾಣದಲ್ಲಿ ತಾನಿದ್ದು ಹುಂಬ ಶೂದ್ರರನ್ನು ಕೋಮು ಗಲಭೆಗೆ ಛೂಬಿಡುವ ಆರೆಸ್ಸೆಸ್ ಡಾನ್ ಕಲ್ಲಡ್ಕ ಭಟ್ಟನೇ 'ದಂಡ' ನಾಯಕ!



ಕಲ್ಲಡ್ಕ ಪ್ರಭಾಕರ್



ಆನಂದ್ ಅಸ್ನೋಟಿಕರ್

ದೊಡ್ಡ ದುರಂತವೆಂದರೆ ಕರಾವಳಿಯ ಸೋಕಾಲ್ಡ್ ಸೆಕ್ಯೂಲರ್ ಲೀಡರ್‌ಗಳಾದ ಕಾಂಗ್ರೆಸ್-ಜೆಡಿಎಸ್‌ನ ಮುಖಂಡರಿಗೆ ಬಿಜೆಪಿ-ಭಜರಂಗಿಗಳ ಪಾತಕವನ್ನು ಜನರಿಗೆ ಮನದಟ್ಟು ಮಾಡಿಕೊಟ್ಟು ಯುದ್ಧ ಗೆಲ್ಲುವ ಸಾಮರ್ಥ್ಯವೇ ಇಲ್ಲವಾಗಿದೆ. ಕಾಂಗ್ರೆಸ್‌ನ ಆಸ್ಕರ್ ಫರ್ನಾಂಡಿಸ್, ವೀರಪ್ಪ ಮೊಯ್ಲಿ, ಜನಾರ್ದನ ಪೂಜಾರಿ, ಆರ್.ವಿ. ದೇಶಪಾಂಡೆ, ಮಾರ್ಗರೆಟ್ ಆಳ್ವಾದಿಗಳೆಲ್ಲ ವೈಯಕ್ತಿಕ ಲಾಭ-ನಷ್ಟದ ಕಾಲೆಳೆಯುವ ಕ್ಷುದ್ರ ರಾಜಕಾರಣಕ್ಕೆ ಬಿದ್ದು ಸಮಷ್ಟಿಯ ಹಿತ ಕಡೆಗಣಿಸಿಬಿಟ್ಟಿದ್ದಾರೆ.

ಕಂತ್ರಿ ಪಾಲಿಟಿಕ್ಸ್

ಈಗ ಕರಾವಳಿಯ ಹಳ್ಳಿಗಾಡಿನಲ್ಲಿ ನರರಕ್ತ ಕುಡಿದು-ಕುಡಿದೂ ಬಲಾಢ್ಯವಾಗಿರುವ ಬಿಜೆಪಿ ಮತ್ತು ಹೈರಾಣಾಗಿರುವ ಕಾಂಗ್ರೆಸ್ ನಡುವೆ ಗ್ರಾಮ ಪಂಚಾಯ್ತಿ ಸಮರ ಏರ್ಪಟ್ಟಿದೆ. ಜೆಡಿಎಸ್ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ... ಜೆಡಿಎಸ್ ಇಲ್ಲಿ ಆಟಕ್ಕಷ್ಟೇ. ಗ್ರಾಪಂ ಇಲೆಕ್ಷನ್ ಅನ್ನು ಅಷ್ಟು ಹಗುರವಾಗಿ ಪರಿಗಣಿಸುವ ದಿನಮಾನವಿರಲ್ಲ, ಹೀಗಾಗಿ ಇದೊಂದು ಜಿದ್ದಾಜಿದ್ದಿನ ಮಿನಿ ಸಮರದಂತಾಗಿದೆ. ಈ ಚುನಾವಣೆ ಪಕ್ಷ ರಾಜಕಾರಣದ ಚಿಹ್ನೆಯಲ್ಲಿ ಜರುಗುವುದಿಲ್ಲವಾದರೂ ಪರೋಕ್ಷವಾಗಿ ಪಾರ್ಟಿಗಳ ಮೇಲಾಟ ಇದ್ದೇ ಇರುತ್ತದೆ. ಅಭ್ಯರ್ಥಿಗಳು ಪಕ್ಷದ ಹಿನ್ನೆಲೆಯೇ ಹೊಂದಿರುತ್ತಾರೆ. ಪಕ್ಷ ಅಧಿಕೃತ ಟಿಕೆಟ್ ಕೊಡುವುದಿಲ್ಲವಾದರೂ ಅಭ್ಯರ್ಥಿಗಳ ಆಯ್ಕೆ ಪಕ್ಷದ ಮಟ್ಟದಲ್ಲೇ ನಡೆಯುತ್ತದೆ. ದೊಡ್ಡ ನಾಯಕರು ತಮ್ಮ ಪ್ರತಿಷ್ಠೆ ಪಣಕ್ಕಿಟ್ಟು ಹಿಂಬಾಲಕರನ್ನು ಗೆಲ್ಲಿಸಲು ಹವಣಿಸುತ್ತಾರೆ.


ಹೀಗಾಗಿ ಕರಾವಳಿಯ ಪ್ರತಿ ತಾಲ್ಲೂಕಿನಲ್ಲೀಗ ಮಾಜಿ-ಹಾಲಿ ಶಾಸಕ-ಸಂಸದರ ಛಾಯಾ ಯುದ್ಧ ಗ್ರಾಪಂ ಇಲೆಕ್ಷನ್ ನೆಪದಲ್ಲಿ ನಡೆಯುತ್ತಿದೆ. ದೊಡ್ಡವರ ಈ ಕರಾಮತ್ತಿಗೆ ಕಾರಣವೂ ಇದೆ. ಮುಂಬರುವ ಅಸೆಂಬ್ಲಿ ಅಥವಾ ಪಾರ್ಲಿಮೆಂಟ್ ಇಲೆಕ್ಷನ್‌ನಲ್ಲಿ ಈಗ ಗ್ರಾಪಂಗೆ ಆಯ್ಕೆಯಾಗುವ ಸದಸ್ಯರೇ ಮುಂಚೂಣಿ ಸಮರ ಸೈನಿಕರಾಗಿ ತಮ್ಮ ತಲೆ ಕಾಯುತ್ತಾರೆಂಬ ಕಂತ್ರಿ ಲೆಕ್ಕಾಚಾರ ಹಾಲಿ-ಮಾಜಿಗಳದು. ಹೀಗಾಗಿ ಈ ಗ್ರಾಪಂ ಜಿದ್ದಾಜಿದ್ದಿ ಮುಂದಿನ ಅಸೆಂಬ್ಲಿ ಇಲೆಕ್ಷನ್‌ನ ದಿಕ್ಸೂಚಿ ಎಂಬ ಭಾವನೆಯೂ ಇದೆ. ಗ್ರಾಮೀಣ ಭಾಗದಲ್ಲಿ ಪಾರ್ಟಿ ಕಟ್ಟಲು ರಾಜಕೀಯ ಪಾರ್ಟಿಗಳಿಗಿದೊಂದು ಸಂದರ್ಭ!

ಈ ವಾಸ್ತವ ಸಂಘಪರಿವಾರದ ದೊರೆಗಳಾದ ಕಲ್ಲಡ್ಕ ಭಟ್, ಪೇಜಾವರ ಸ್ವಾಮಿಗಳ ಧರ್ಮಾಂಧ ಸೈನ್ಯಕ್ಕೆ ಅರ್ಥವಾದಂತೆ ಮೊಯ್ಲಿ-ಮ್ಯಾಗಿ-ದೇಶಪಾಂಡೆ-ಆಸ್ಕರ್‌ಗಳೆಂಬ ಕಾಂಗ್ರೆಸ್‌ನ ದಂಡ-ನಾಯಕರಿಗೆ ಹೊಳೆಯುವುದೇ ಇಲ್ಲ. ಈ ಕಾಂಗ್ರೆಸ್ ಕಿಂಗ್‌ಗಳು ತಮ್ಮ ಗುಲಾಮರಿಗೊಂದಿಷ್ಟು ಸ್ಥಾನ ಕೊಟ್ಟು ಅವರ ಗೆಲ್ಲಿಸಲು ತಮ್ಮ ಪಕ್ಷದ ವೈರಿಯ ಹಿಂಬಾಲಕರ ಸೋಲಿಗೆ ಶ್ರಮಿಸುತ್ತಾರೆಯೇ ವಿನಃ ಎದುರಾಳಿ ಬಿಜೆಪಿಯ ಮಣಿಸುವ ಉಸಾಬರಿಗೆ ಹೋಗುವುದೇ ಇಲ್ಲ. ಕಾಂಗ್ರೆಸಿಗರ ಈ ಮನೆಮುರುಕ ಜಾಯಮಾನ ಒಂದೇ ಸಾಕು, ಈ ಗ್ರಾಪಂ ಇಲೆಕ್ಷನ್‌ದಲ್ಲೂ ಬಿಜೆಪಿ ಸೈತಾನರೇ ಹೆಚ್ಚು ಗೆದ್ದು ಬಂದು ಹಳ್ಳಿಗಳಲ್ಲಿ ಕಾನೂನುಬಾಹಿರ ಕಾರುಬಾರು ನಡೆಸುತ್ತಾರೆಂದು ಅಂದಾಜಿಸಲು!

ಕ-ಮಲ ಕಲ್ಚರ್ ಕಾದಾಟ

ಗ್ರಾಮ ಪಂಚಾಯ್ತಿ ಇಲೆಕ್ಷನ್‌ಗೆ ಹಿಂದೆಂದೂ ಇಲ್ಲದ ತುರುಸು-ತರಲೆ ಈ ಬಾರಿ ಗಂಟು ಹಾಕಿಕೊಂಡಿದೆ! ಮೊದಲೆಲ್ಲ ಜಾತಿ, ಸ್ಥಳೀಯವಾಗಿ ಬೆಳೆಸಿಕೊಂಡಿದ್ದ ಇಮೇಜಿನ ಮೇಲೆ ಗ್ರಾಪಂ ಯುದ್ಧದಲ್ಲಿ ಮೇಲಾಟ ನಡೆಯುತ್ತಿತ್ತು, ಒಂದು ಕ್ಷೇತ್ರ ಇಲೆಕ್ಷನ್ ಕೆಲವೇ ನೂರು ರೂಪಾಯಿಗಳಲ್ಲಿ ಮುಗಿದುಹೋಗುತ್ತಿತ್ತು. ಈ ಬಾರಿ ಲಕ್ಷಗಳ ಬಜೆಟ್ ಅಭ್ಯರ್ಥಿಗಳು ಮಾಡಿಕೊಂಡಿದ್ದಾರೆ. ಈ ಹಣದ ಹಣಾಹಣಿ ರೋಗ ಶುರುವಾಗಿದ್ದು ಬಿಜೆಪಿ ಅಧಿಕಾರಕ್ಕೆ ಬಂದನಂತರ! ಆಪರೇಷನ್ ಕಮಲದ ನಂತರ ನಡೆದ ಅಸೆಂಬ್ಲಿ, ಪಾರ್ಲಿಮೆಂಟ್, ಪಿಎಲ್‌ಡಿ ಬ್ಯಾಂಕ್, ಸಹಕಾರ ಸಂಘದ ಇಲೆಕ್ಷನ್‌ಗಳೆಲ್ಲ ಧನಾದೇಶವೇ ಹೊರತು ಜನಾದೇಶವೇನಾಗಿರಲಿಲ್ಲ!


ಈ ಕುರುಡು ಕಾಂಚಾಣದ ಕರಾಮತ್ತೀಗ ಗ್ರಾಪಂ ಇಲೆಕ್ಷನ್‌ಗೂ ಲಗ್ಗೆಯಿಟ್ಟಿದೆ. ಹಿಂದೆಂದೂ ಇಲ್ಲದ ಮಹತ್ವ-ಗ್ರಾಪಂ ಮೆಂಬರಿಕೆಯ ಒಣ ತೆವಲು ಈ ಬಾರಿಯ ಇಲೆಕ್ಷನ್‌ನಲ್ಲಿದೆ! ಗ್ರಾಪಂ ಸದಸ್ಯನೆಂದರೆ ನಿಕೃಷ್ಟನೆಂದು ಗೇಲಿ ಮಾಡಿ ಮೂಗು ಮುರಿಯುತ್ತಿದ್ದ ಹಳ್ಳಿಗಳ ಪಾಳೆಗಾರಿ ಹೆಗಡೆ, ಭಟ್ಟ, ಗೌಡ, ಶೆಟ್ಟಿಗಳೇ ಒಂದು ಕೈನೋಡುವ ಉಮೇದಿಯಲ್ಲಿದ್ದಾರೆ. ಬಿಜೆಪಿಯ "ಕಾಸಿನ ಕಲ್ಚರ್"ನಲ್ಲಿ ಸೆಣಸಾಡಲು ಜಟ್ಟಿಗಳು ಶಸ್ತ್ರ ಸನ್ನದ್ಧರಾಗಿರುವುದಕ್ಕೊಂದು ನಿಗೂಢ ಪ್ರೇರಣೆಯೂ ಇದೆ!




ಕಾಸು ಖಾತ್ರಿ ಕನಸು

ಪಂಚಾಯತ್ ಮೆಂಬರಿಕೆ ಕನಸು ಕಟ್ಟಿರುವ ಅಭ್ಯರ್ಥಿಗಳ ಮುಂದಿರುವ ದೊಡ್ಡ ಆಕರ್ಷಣೆ-ಸೆಣಸಾಡುವ ಕೆಚ್ಚಿಗೆ ಕಾರಣ-ಗ್ರಾಪಂಗಳಿಗೆ ಕೇಂದ್ರ ಸರ್ಕಾರ ಕೊಡುವ ಕೋಟಿ-ಕೋಟಿ ರೂಪಾಯಿಗಳ 'ಉದ್ಯೋಗ ಖಾತ್ರಿ' ಯೋಜನೆಯ ರೊಕ್ಕದ ಖಜಾನೆ! ಈ ಯೋಜನೆಯ ಹಣವೇ ಈಗ ಚುನಾವಣೆಯಲ್ಲಿ ಗುಪ್ತಗಾಮಿಯಾಗಿ ಹರಿಯುತ್ತಿದೆ! ಪ್ರತಿ ಗ್ರಾಪಂಗೆ ಕೇಂದ್ರ ಸರ್ಕಾರ ಒಂದರಿಂದ ಎರಡು ಕೋಟಿ ರೂಪಾಯಿ ಅನುದಾನ ನೀಡುತ್ತಿದೆ. ಈ ಹಣ ವ್ಯಯಿಸುವ ಪೂರ್ಣ ಅಧಿಕಾರ ಗ್ರಾಪಂ ಸದಸ್ಯರಿಗೆ ಮಾತ್ರ. ಇದರಲ್ಲಿ ಶಾಸಕ-ಸಂಸದ-ಜಿಪಂ- ಸದಸ್ಯರಾರೂ ಮೂಗು ತೂರಿಸುವಂತಿಲ್ಲ.

ಹಳ್ಳಿಯ ಕೇರಿ ಉದ್ಧಾರ ಮಾಡುವ, ಬಡ ರೈತರ ಹೊಲಭೂಮಿ ಹಸನಾಗಿಸುವ, ಬಡ ಕೂಲಿಕಾರರಿಗೆ ಉದ್ಯೋಗ ಕೊಡುವ ಯೋಜನೆಯೇ ಈ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ. ಗ್ರಾಪಂ ಈ ಯೋಜನೆಯ ಅನುಷ್ಠಾನ ಏಜೆನ್ಸಿ. ಯೋಜನೆಯ ಹಣ ದಿಲ್ಲಿಯಿಂದ ನೇರವಾಗಿ ಗ್ರಾಪಂಗೆ ಬರುತ್ತದೆ. ಹೀಗಾಗಿ ಗ್ರಾಪಂಗಳು ಸೂಪರ್ ಪವರ್ ಆಗಿ ಹೊರಹೊಮ್ಮಿವೆ. ಇದರಿಂದಾಗಿ ಗ್ರಾಪಂಗೆ ವಿಧಾನಸೌಧದ ಕಳೆ ಬಂದಿದೆ. ಇಷ್ಟೊಂದು ಹಣ ಹರಿವಲ್ಲಿ ಲಾಬಿ-ಲೇವಾದೇವಿ ನಡೆಯದಿದ್ದೀತೇ? ಗ್ರಾಮಾಡಳಿತದ ಖದರೇ ಬದಲಾಗಿಬಿಟ್ಟಿದೆ. ಹಳ್ಳಿಯ ರಾಜಕಾರಣಕ್ಕೆ ಎಲ್ಲಿಲ್ಲದ ಮಹತ್ವ-ಪ್ರತಿಷ್ಠೆ ಮೂಡಿದೆ.



ಆಸ್ಕರ್



ದೇಶಪಾಂಡೆ

ಎಲ್ಲಕ್ಕಿಂತ ಹೆಚ್ಚಾಗಿ ಹಳ್ಳಿಯ ರಿಮೋಟ್ ನಾಯಕರ, ಗ್ರಾಪಂ ಮೆಂಬರ್‌ಗಳ ಲಕ್ ಖುಲಾಯಿಸಿದೆ. ಅಬ್ಬೇಪಾರಿಗಳೆಲ್ಲ ಈ ಸೆಂಟ್ರಲ್ ಸ್ಕೀಮಿನಿಂದ ಲಕ್ಷಾಧೀಶರಾಗಿ ಲಕಲಕಿಸುತ್ತಿದ್ದಾರೆ. ಗ್ರಾಪಂ ಸದಸ್ಯರ ಜೀವನ ಶೈಲಿ ಬದಲಾಗಿದೆ. ಬಹುತೇಕ ಗ್ರಾಪಂ ಏರಿಯಾದಲ್ಲಿ ಗ್ರಾಪಂ ಸದಸ್ಯರೇ ಬೇನಾಮಿ ಕಂಟ್ರಾಕ್ಟರ್‌ಗಳು. ಬಡ ಕೂಲಿಕಾರರಿಗೆ ಕೊಡಬೇಕಾಗಿದ್ದ ಕೆಲಸ ಜೆಸಿಬಿಗಳಿಂದ ಕಡಿಮೆ ಖರ್ಚಿನಲ್ಲಿ ಮುಗಿಸಿ ದಾಖಲೆಗಷ್ಟೇ ಹಾಜರಿ ಪಟ್ಟಿ ಸೃಷ್ಟಿಸಲಾಗಿದೆ! ಇದಕ್ಕೆ ಅಧಿಕಾರಿಗಳ ಕುಮ್ಮಕ್ಕಿದೆ. ಅವರಿಗೆ ಪಾಲು ಸಿಕ್ಕಿದೆ. ಬಿಲ್‌ಗಳು ಲೀಲಾಜಾಲವಾಗಿ ಪಾಸ್ ಆಗಿವೆ. ಸದಸ್ಯರಿಗೆ ತಾವು ಮಾಡಿದ ಕಾಮಗಾರಿ ಬಿಟ್ಟು ಉಳಿದವುಗಳಿಂದಲೂ ಪರ್ಸೆಂಟೇಜು ಸಿಕ್ಕಿದೆ. ಹಳ್ಳಿಗಳಲ್ಲಿ ಹಣದ ಹೊಳೆಯೋ ಹೊಳೆ!



ವಸಂತ್ ಬಂಗೇರ



ರಮಾನಾಥ್ ರೈ

ಈ ರೋಜಗಾರ್ ರೊಕ್ಕದ ಮಹಿಮೆಗೆ ಶಾಸಕರೇ ದಂಗಾಗಿಹೋಗಿದ್ದಾರೆ. ಶಾಸಕನಾಗುವುದಕ್ಕಿಂತ ಗ್ರಾಪಂ ಮೆಂಬರ್ ಆದರೆ ಕಮಾಯಿ ಜಾಸ್ತಿ ಎಂದು ಎಮ್ಮೆಲ್ಲೆಗಳೇ ಅಲವತ್ತುಕೊಳ್ಳುತ್ತಿದ್ದಾರೆ. ಒಟ್ಟಿನಲ್ಲಿ ಕೋಟ್ಯಂತರ ರೂಪಾಯಿ ಕಾಮಗಾರಿ ಹಳ್ಳಿಗಳ ರಾಜಕಾರಣದ ಚಹರೆಯನ್ನೇ ಬದಲಿಸಿಬಿಟ್ಟಿದೆ. ಗ್ರಾಪಂ ಮೆಂಬರಿಕೆಯ ಆಸೆಗೆ ಪದ್ವೆಗಳು ಬಿದ್ದಿವೆ. ಈಗಾಗಲೇ ಮೆಂಬರ್ ಆದವರಿಗೆ ರೋಜಗಾರ್ ರುಚಿ ಹತ್ತಿದೆ. ಹಣ ಖಾತ್ರಿಯೆಂಬುದು ಗ್ಯಾರಂಟಿಯಾಗಿ ಮತ್ತೆ ಸದಸ್ಯರಾಗುವ ಹಠಕ್ಕೆ ಬಿದ್ದಿದ್ದಾರೆ. ಈ ತಿರಬೋಕಿಗಳ ದೌಲು-ದೌಲತ್ತು ನೋಡಿದವರು ತಾವೇ ಏಕೆ. ಗ್ರಾಪಂಗೆ ಸ್ಪರ್ಧಿಸಿ ಗೆದ್ದು ಕಾಸು ಮಾಡಬಾರದೆಂಬ ಹುಮ್ಮಸ್ಸಿನಲ್ಲಿದ್ದಾರೆ. ಇವರೆಲ್ಲ 600-800 ಮತದಾರರಿರುವ ಕ್ಷೇತ್ರದಲ್ಲಿ ಮೂರ್ನಾಲ್ಕು ಲಕ್ಷ ಖರ್ಚು ಮಾಡಲು ಸಿದ್ಧರಿದ್ದಾರೆ. ಗೆದ್ದರೆ ಕಾಸು ಖಾತ್ರಿ ತಾನೆ? ಇವರಿಗೆಲ್ಲ ಬಿಜೆಪಿಯ ಧನಾಧಾರಿತ ಇಲೆಕ್ಷನ್ ಸಂಸ್ಕೃತಿಯೇ ಮಾದರಿ-ಆದರ್ಶ. ಹೀಗಾಗಿ ಗ್ರಾಪಂ ಇಲೆಕ್ಷನ್ ಅಖಾಡದಲ್ಲಿ ಭರ್ಜರಿ ಹಣದ ಹಣಾಹಣಿ!

ಯಾರಿಗುಂಟು? ಯಾರಿಗಿಲ್ಲ?

ಗ್ರಾಪಂನ ರೊಕ್ಕದ ಸೊಕ್ಕಿನ ಸ್ಪರ್ಧೆಯಲ್ಲೂ ಸ್ಥಳೀಯ ಹಾಲಿ-ಮಾಜಿ ಶಾಸಕರ ಪ್ರತಿಷ್ಠೆ-ಅಸ್ತಿತ್ವದ ಪ್ರತಿಷ್ಠೆ ಪಣಕ್ಕಿಟ್ಟಂತಾಗಿದೆ. ಕರಾವಳಿಯಲ್ಲಿ ತಮಗಿರುವ ಪ್ರಾಬಲ್ಯ-ಪಾರುಪತ್ಯ ಉಳಿಸಿಕೊಳ್ಳಲು ಬಿಜೆಪಿ ಈಗಾಗಲೇ ಮತಾಂಧ ಮಸಲತ್ತು ಶುರು ಹಚ್ಚಿಕೊಂಡಿದೆ. ಕರಾವಳಿಯ ಮೂರು ಜಿಲ್ಲೆಯ ಮೂರೂ ಸಂಸದರು ಮತ್ತು 19ರಲ್ಲಿ 11 ಶಾಸಕರನ್ನು ಹೊಂದಿರುವ ಬಿಜೆಪಿಗೆ ಅವಕಾಶಗಳು ಜಾಸ್ತಿ. ಸತತ ಕೋಮು ಕಿತಾಪತಿಯಿಂದ ಮತದಾರರ ಬ್ರೈನ್‌ವಾಷ್ ಮಾಡಿದ ಬಲ ಬಿಜೆಪಿಗಿದೆ. ಅದಕ್ಕಿಂತ ಹೆಚ್ಚು ದುರ್ಬಲ ಕಾಂಗ್ರೆಸ್ಸೇ ಬಿಜೆಪಿ ಭೂಪರಿಗೆ ವರದಾನದಂತಾಗಿದೆ.

ದಕ್ಷಿಣ ಕನ್ನಡದಲ್ಲಿ ತಲಾ ನಾಲ್ಕು ಬಿಜೆಪಿ-ಕಾಂಗ್ರೆಸ್ ಎಮ್ಮೆಲ್ಲೆಗಳಿದ್ದಾರೆ. ಪುತ್ತೂರು-ಸುಳ್ಯದಲ್ಲಿ ಬಿಜೆಪಿಯ ಹಿಂದೂತ್ವದ ಅಲೆ ಜೋರಾಗಿದೆ. ಆದರೂ ಕಾಂಗ್ರೆಸ್‌ಗೂ ಇಲ್ಲಿ ನೆಲೆಯಿದೆ. ಕಾಂಗ್ರೆಸ್ ನಾಯಕರು ಒಂದಾಗಿ ದುಡಿದರೆ ಬಿಜೆಪಿ ಸೋಲಿಸುವುದು ಕಷ್ಟವಲ್ಲ. ಮೂಡಬಿದಿರೆಯಲ್ಲಿ ಕಾಂಗ್ರೆಸ್‌ನ ಅಭಯಚಂದ್ರ ಜೈನ್ ಎಮ್ಮೆಲ್ಲೆ. ಈತನಿಗೆ ಪೈಪೋಟಿ ಕೊಡುವುದು ಜೆಡಿಎಸ್‌ನ ವೃದ್ಧ ಲೀಡರ್ ಅಮರನಾಥ ಶೆಟ್ಟಿ. ಮಂಗಳೂರು (ಉ) ಶಾಸಕ ಮಂತ್ರಿ ಪಾಲೇಮಾರ್. ಮುಸ್ಲಿಮ್ ಏರಿಯಾಗಳೂ ಇಲ್ಲಿವೆ. ಹಾಗಾಗಿ ಫಿಫ್ಟಿ-ಫಿಫ್ಟಿ ಛಾನ್ಸ್ ಬಿಜೆಪಿ-ಕಾಂಗ್ರೆಸ್‌ಗೆ. ಉಳ್ಳಾಲದಲ್ಲಿ ಕಾಂಗ್ರೆಸ್ ಶಾಸಕ ಯು.ಟಿ. ಖಾದರ್ ರೂಟ್ ಲೆವೆಲ್ ನಾಯಕ. ಹೀಗಾಗಿ ಬಿಜೆಪಿಗಿಲ್ಲಿ ಕಷ್ಟ! ಖಾದರ್‌ನ ಸೆಕ್ಯೂಲರ್ ಸ್ವಭಾವವೇ ಬಿಜೆಪಿಗಿಲ್ಲಿ ಮೈನಸ್.

ಹಾಗೇ ಬಂಟ್ವಾಳಕ್ಕೆ ಬಂದರೆ ಮಾಜಿ ಮಂತ್ರಿ-ಹಾಲಿ ಕರಾವಳಿ ಅಭಿವೃದ್ಧಿ ಮಂಡಳಿ ಎಂಬ ನಾಮಕಾವಸ್ತೆ ಏಜೆನ್ಸಿಯ ಗೂಟದ ಕಾರಿನ ಯಜಮಾನ ನಾಗರಾಜ ಶೆಟ್ಟಿ ಮತ್ತು ಮಾಜಿ ಮಂತ್ರಿ ಕಾಂಗ್ರೆಸ್‌ನ ರಮಾನಾಥ ರೈಗಳ ಜಿದ್ದಾಜಿದ್ದಿ ಕಾಣಿಸುತ್ತದೆ. ಮಹಾಮತಾಂಧ-ಅದಿರು ಸಾಗಾಣಿಕಾ ದೊರೆ ನಾಗರಾಜನ ಬಗ್ಗೆ ಜನರಿಗಿನ್ನೂ ಅಲರ್ಜಿ ಹಾಗೇ ಇದೆ. ರೈಗೆ ಜೀವ ಭಾರವಾದರೂ ಜನರೊಂದಿಗೆ ಬೆರೆವ ಸ್ವಭಾವವಿರುವುದು ಗ್ರಾಪಂ ಇಲೆಕ್ಷನ್‌ನಲ್ಲಿ ಆತನ ಕ್ಯಾಂಡಿಡೇಟ್‌ಗಳಿಗೆ ಅನುಕೂಲ ಕಲ್ಪಿಸಿದೆ. ಬೆಳ್ತಂಗಡಿಯಲ್ಲಿ ಒರಟು ಜನನಾಯಕ ವಸಂತ ಬಂಗೇರಾಗೆ ಹಳ್ಳಿಗಳಲ್ಲಿ ಬೇರುಗಳಿವೆ. ಆತನಿಗೆ ಒಡಹುಟ್ಟಿದ ತಮ್ಮ-ಬಿಜೆಪಿಯ ಪ್ರಭಾಕರ ಬಂಗೇರಾನೇ ಎದುರಾಳಿ. ಈತನೂ ಎರಡು ಬಾರಿ ಚೆಡ್ಡಿ ಪಕ್ಷದ ಶಾಸಕನಾದಾತ. ಹೀಗಾಗಿ ತುರುಸು ಜೋರಾಗಿದೆ. ಆದರೂ ಕಾಂಗ್ರೆಸ್‌ಗೆ ಲಾಭ ಹೆಚ್ಚಾಗಲಿದೆ.

ಉಡುಪಿ ಜಿಲ್ಲೆಯ ಕಾರ್ಕಳ ಬಿಟ್ಟರೆ ಉಳಿದ ನಾಲ್ಕೂ ಕಡೆ ಬಿಜೆಪಿ ಶಾಸಕರೇ ಇದ್ದಾರೆ. ಹೇತ್ಲಾಂಡಿ-ಕುತಂತ್ರಿ ಮಂತ್ರಿ ಆಚಾರ್ಯನ ಸೇನಾಧಿಪತ್ಯ ಚೆಡ್ಡಿಗಳಿಗಿದೆ. ಆದರೂ ಬಿಜೆಪಿ ಬಗ್ಗೆ ಅಂಥ ಸದ್ಭಾವನೆ ಜನರಿಗಿಲ್ಲ. ಆಡಳಿತ ಪಕ್ಷವೆಂಬ ನೆಲೆ-ಮತಾಂಧ ಅಲೆಯ ಆಸರೆಯಲ್ಲಿ ಚೆಡ್ಡಿಗಳು ಸೇಫಾಗಿದ್ದಾರೆ. ಕಾಂಗ್ರೆಸ್‌ನ ಆಸ್ಕರ್‌ನ ನಿದ್ದೆಗೇಡಿತನವೇ ಕಾಂಗ್ರೆಸ್‌ಗೆ ಉರುಳಾಗಿದೆ.

ಅಖಾಡದಲ್ಲಿ ಮಾಜಿ ಶಾಸಕ!



ಇದು ಮಾಜಿ ಶಾಸಕ ಬಾಕಿಲ ಹುಕ್ರಪ್ಪರ ದುರಂತ ಕತೆ!

ಈ ಮುಗ್ಧ ದಲಿತ ನಾಯಕ 1983 ರಲ್ಲಿ ಬಿಜೆಪಿಯಿಂದ ಶಾಸಕನಾಗಿ ಆಯ್ಕೆಯಾಗಿದ್ದರು. ಸುಳ್ಯದಲ್ಲಿ ಬಿಜೆಪಿಯ ಕಮ್ಯುನಲ್ ವಿಕೃತಿ ಆರಂಭಿಸಿದ್ದೇ ಈ ಹುಕ್ರಪ್ಪ. ಹೈಸ್ಕೂಲು ಮುಗಿಸಿ ಕೃಷಿ ಕೂಲಿಯಾಗಿ ದುಡಿಯುತ್ತಿದ್ದ ಹುಕ್ರಪ್ಪರಿಗೆ ಚೆಡ್ಡಿ ದೀಕ್ಷೆ ನೀಡಿ ಸಂಘಪರಿವಾರ ಚುನಾವಣೆಗೆ ಇಳಿಸಿತ್ತು. ಈ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸಲು ಮೇಲ್ವರ್ಗದ ಪ್ರಾಬಲ್ಯದ ಸುಳ್ಯದಲ್ಲಿ ಬಿಜೆಪಿಗೆ ಅಂದು ಕ್ಯಾಂಡಿಡೇಟುಗಳೇ ಸಿಗದಂತ ಸ್ಥಿತಿ ಇತ್ತು.

ರಾಮಕೃಷ್ಣ ಹೆಗಡೆ ಪರ್ವದಲ್ಲಿ 18 ತಿಂಗಳು ಶಾಸಕನಾಗಿದ್ದ ಹುಕ್ರಪ್ಪರಿಗೆ ಬಿಜೆಪಿ ಅದೇಕೋ ಒಗ್ಗಲಿಲ್ಲ, ಆತ ಜನತಾದಳಕ್ಕೆ ಜಿಗಿದು ಸ್ಪರ್ಧಿಸಿದರು. ಕಾಂಗ್ರೆಸ್‌ನ ಕುಶಲರ ಎದುರು ಸೋತರು.

ಆನಂತರ ಮತ್ತೆ ಬಿಜೆಪಿಗೆ ಹೋದರು. ಆ ವೇಳೆಗೆ ಬಲಿತ ದಲಿತ ಅಂಗಾರ ಸಂಘಪರಿವಾರದ ಪರಿಚಾರಕನಾಗಿ ರೂಪುಗೊಂಡು ಪ್ರಬಲರಾಗಿದ್ದರು. ಹಾಗಾಗಿ ಹುಕ್ರಪ್ಪ 'ಬಂ'- ಕೆಸಿಪಿ ಸೇರಿ ಅಸೆಂಬ್ಲಿಗೆ ಸ್ಪರ್ಧಿಸಿದರು. ಆಗಲೂ ಸೋಲೇತರು. ಆನಂತರ ಆತ ಗುತ್ತಿಗಾರ ಗ್ರಾಪಂಗೆ ಮೂರು ಬಾರಿ ಸ್ಪರ್ಧಿಸಿ ಗೆದ್ದರು. ಒಮ್ಮೆ ಪಂಚಾಯ್ತಿ ಅಧ್ಯಕ್ಷರೂ ಆಗಿದ್ದರು. ರಾಜಕೀಯದಲ್ಲಷ್ಟೇ ಅಲ್ಲ ಬದುಕಲು ಈ ಎಕ್ಸ್ ಎಮ್ಮೆಲ್ಲೆ ನತದೃಷ್ಟ! ಇವತ್ತಿಗೂ ಈತನಿಗೊಂದು ಸ್ವಂತ ಮನೆಯಿಲ್ಲ, ವ್ಯವಸಾಯಕ್ಕೆ ಭೂಮಿಯಿಲ್ಲ. ಆತ ಕಂಡವರ ರಬ್ಬರ್ ಪ್ಲಾಂಟೇಷನ್‌ನಲ್ಲಿ ಕೂಲಿಯಾಗಿ ದುಡಿಯುತ್ತಿದ್ದಾರೆ. ಕೂಲಿಯೇ ಮಾಜಿ ಶಾಸಕ ಬಾಕಿಲ ಹುಕ್ರಪ್ಪರಿಗೆ ಜೀವನಾಧಾರ!!

ತಮ್ಮ ರಾಜಕೀಯಕ್ಕೆ ಸುಳ್ಯದ ಎಲ್ಲ ಪಕ್ಷದ ಮೇಲ್ವರ್ಗದವರೂ ಈ ದಲಿತನನ್ನು ಬಳಸಿಕೊಂಡು ಬೀಸಿ ಎಸೆದಿದ್ದಾರೆ. ಒಂದಂತೂ ಖರೆ. ಹಾಲಿ ಬಿಜೆಪಿಯ ಥರ್ಡ್‌ಟೈಮ್ ಎಮ್ಮೆಲ್ಲೆ ಅಂಗಾರ, ಕಾಂಗ್ರೆಸ್‌ನ ಎಕ್ಸ್ ಎಮ್ಮೆಲ್ಲೆ ಕುಶಲರಿಗಿಂತ ಈ ಹುಕ್ರಪ್ಪ ಸಾವಿರ ಪಾಲು ಬೆಟರ್. ಆದರೇನು ಮಾಡುವುದು? ಹಿಂದೂತ್ವದ ದಾದಾಗಿರಿ-ಮೇಲ್ವರ್ಗದ ಅಟ್ಟಹಾಸದ ಸುಳ್ಯದ ರಾಜಕಾರಣದಲ್ಲಿ ಸಜ್ಜನ ಹುಕ್ರಪ್ಪರಿಗೆ ಶಾಸಕನಾಗುವ ಅವಕಾಶವೇ ಇಲ್ಲದಾಗಿದೆ. ಹಾಗಾಗಿ ಆತ ಈಗ ಮತ್ತೆ ಗ್ರಾಪಂಗೆ ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಜನಪರ ಹುಕ್ರಪ್ಪ ಗೆಲ್ಲುವುದು ಖಾತ್ರಿ. ●

ಕಾರ್ಕಳದ ಜನಪ್ರಿಯ ಶಾಸಕ ಗೋಪಾಲ ಭಂಡಾರಿ ...ತ್ತು ಮಾಜಿ ಶಾಸಕ ರಾಜ್ಯ ಬಿಜೆಪಿ ಯುವ ಮೋರ್ಚಾ ...ಧ್ಯಕ್ಷ ಸುನಿಲ್‌ಕುಮಾರ್ ಎಂಬ ಖತರ್‌ನಾಕ್ ಭಜರಂಗಿಯ ...ಷ್ಠೆಯ ಕಣ. ಅಸೆಂಬ್ಲಿ ಇಲೆಕ್ಷನ್‌ನಲ್ಲಿ ಸೋತ ಸೇಡು ...ಬಿಲ್‌ಗಿದೆ. ಆತ ಹಠಕ್ಕೆ ಬಿದ್ದಿದ್ದಾನೆ. ಕಾಂಗ್ರೆಸ್‌ನ ಗೋಪಾಲ ...ಡಾರಿಗೆ ಆತನ ಒಳ್ಳೆತನ-ಕೆಲಸಗಾರಿಕೆಯೇ ಶ್ರೀರಕ್ಷೆ. ...ಟ್ ಟ್ರೈಟ್ ಇದೆ. ಕಾಂಗ್ರೆಸ್‌ನ ಮಾಜಿ ಮಂತ್ರಿ ವಸಂತ ...ಲಿಯಾನ್ ಕಾಪುನಲ್ಲಿ ಮತ್ತು ಬೈಂದೂರಲ್ಲಿ ಮಾಜಿ ...ಸಕ ಗೋಪಾಲ ಪೂಜಾರಿಗಳು ಮತ್ತೆ ಶಾಸಕರಾಗುವ ...ಯಿಂದ ಒದ್ದಾಡುತ್ತಿದ್ದಾರೆ. ಬೈಂದೂರಲ್ಲಿ ಹಾಲಿ ಬಿಜೆಪಿ ...ಸಕ 'ಸಿಡಿಮಿಡಿ ಮುದುಕ' ಲಕ್ಷ್ಮಿನಾರಾಯಣನ ಬಗ್ಗೆ ...ಜೆಪಿಗಳಿಗೇ ಬೇಸರ ಬಂದಿದೆ. ಪೂಜಾರಿ ಸೋತರೂ ...ರ ಲಿಂಕು ತಪ್ಪಿಸಿಕೊಂಡಿಲ್ಲ, ಕಾಪುನಲ್ಲಿ ಕಾಂಗ್ರೆಸ್ಸೇ ...ಜೆಪಿಗಿಂತ ಮುಂದಿದೆ. ಇದಕ್ಕೆ ಕಾರಣ ಬಿಜೆಪಿ ಶಾಸಕ ...ಲಾಜಿ ಮೆಂಡನ್‌ರ ನಿದ್ದೆಬಡುಕತನ. ಉಡುಪಿಯಲ್ಲಿ ...ತ್ರ ಕಾಂಗ್ರೆಸ್‌ನ ಪ್ರಮೋದ್ ಮಧ್ವರಾಜ್ ಮತ್ತು ...ಜೆಪಿ ಶಾಸಕ ರಘುಪತಿ ಭಟ್ ಎಂಬ 'ಮಡದಿ ಸಂಹಾರಿ' ...ನ ಅಸ್ತಿತ್ವದ ಹೋರಾಟವಿದೆ. ಭಟ್ಟನ ಸೋಗಲಾಡಿತನ-...ದೊತ್ವಕ್ಕೆ ಪ್ರಮೋದ್ ತಡೆಯೊಡ್ಡಿ ತನ್ನವರ ಗೆಲ್ಲಿಸುವ ...ಕ್ಕೆ ಬಿದ್ದಿದ್ದಾರೆ.

ಅತ್ತ ಉತ್ತರ ಕನ್ನಡದಲ್ಲಿ ಒಬ್ಬ ಕಾಂಗ್ರೆಸ್, ಇಬ್ಬರು ...ಎಸ್ ಮತ್ತು ಮೂವರು ಬಿಜೆಪಿ ಎಮ್ಮೆಲ್ಲೆಗಳಿದ್ದಾರೆ. ...ನ ಮುಖ ಕಂಡರೆ ಇನ್ನೊಬ್ಬ ಕ್ಯಾಕರಿಸಿ ಉಗಿವ ...ರು ಬಿಜೆಪಿ ಮಂತ್ರಿಗಳಿದ್ದಾರೆ. ಬಿಜೆಪಿಗಳಿಗೆ ಒಬ್ಬ ...ಸದನಿದ್ದಾನೆ. ಕಾರವಾರ-ಅಂಕೋಲೆಯಲ್ಲಿ ಮಂತ್ರಿ ...ನೋಟಿಕರನ ತೋಳ್ಬಲ-ಬಂದರು ಮಾಫಿಯಾ, ಮೈನ್ಸ್ ...ಪೋರ್ಟ್ ಮಾಫಿಯಾ ಕಾಸಿನ ಮುಂದೆ ಸತೀಶ್ ...ಲ್ ಎಂಬ ಸಜ್ಜನ ಅದಿರು ಧಣಿ ಸೆಟೆದು ನಿಂತಿದ್ದಾರೆ. ...ರೆ ಆನಂದ್ ಅಸ್ನೋಟಿಕರ್‌ಗಿರುವ ಗೋಲ್‌ಮಾಲ್ ...ವರ್ಕ್ ಸತೀಶ್‌ಗಿಲ್ಲ; ಆದರೂ ಕಾರವಾರದಲ್ಲಿ ಹೆಸರು ...ಕೊಂಡಿರುವ ಆನಂದ್ ಅಂಕೋಲದಲ್ಲಿ ಮುಂದಿದ್ದಾನೆ. ...ದ ಕುಮಟಾದಲ್ಲಿ ಜೆಡಿಎಸ್‌ನ ಶಾಸಕ ದಿನಕರ ಶೆಟ್ಟಿಯ ...ರುಪತ್ಯ, ಈತನದು ಏಕಾಂಗಿ ಹೋರಾಟ. ಇಲ್ಲಿಯ ...ಗ್ರೆಸ್‌ಗೆ ಮಾಜಿ ಶಾಸಕ ಮೋಹನ ಶೆಟ್ಟಿ ನಿಧನದ ...ರ ನಾಯಕರೇ ಇಲ್ಲ. ಮಾಜಿ ಸ್ಮಗ್ಲರ್ ಮೋಂಟಿ ...ರ್ನಾಂಡಿಸ್‌ನೆಂಬ ಮ್ಯಾಗ್ಗಿ ಚೇಲನ ಕಂಡರೆ ಕಾಂಗ್ರೆಸ್‌ಗೆ ...ಮ್ಮ ಓಟೂ ಬೀಳದು. ಬಿಜೆಪಿಯ ಶಶಿಭೂಷಣ ...ಡೆಯ ಕಾಲನ್ನು ಮಾಜಿ ಜಿಲ್ಲಾ ಬಿಜೆಪಿ ಅಧ್ಯಕ್ಷ ...ಜೋದ್ ಪ್ರಭು ಎಳೆಯುತ್ತಿದ್ದಾರೆ. ಇಲ್ಲಿ ತ್ರಿಕೋನ ಕಾಳಗ. ...ಭಟ್ಕಳದಲ್ಲಿ ಬಿಜೆಪಿ ಒಡೆದು ಚೂರಾಗಿದೆ. ಕಾಂಗ್ರೆಸ್‌ನ ...ಕ ಜೆ.ಡಿ. ನಾಯ್ಕನಿಗೆ ಮುಂಗೋಪವೇ ಮುಳುವಾಗಿದೆ. ...ಜಿ ಮಂತ್ರಿ-ಹಾಲಿ ಕೆಎಸ್‌ಡಿ ಕಾರ್ಖಾನೆ ಅಧ್ಯಕ್ಷ ...ನಂದ ನಾಯ್ಕಗೆ ಹಿಂದಿನ ಜನ ಸಂಪರ್ಕವಿಲ್ಲ. ...ತ್ರಿಯಾಗಿದ್ದಾಗಿನ ಉಡಾಫೆ-ಸ್ವಪಕ್ಷದ ವೈರಿ-ಸಂಸದ ...ತ್ಮಾಣಿ ಜತೆಗಿನ ವೈರತ್ವದಲ್ಲಿ ಶಿವಣ್ಣ ...ಣಾಗಿದ್ದಾನೆ. ಎಷ್ಟೆಂದರೂ ಭಟ್ಕಳ ...ಪಿಯ ಹಿಂದೂತ್ವದ ಪ್ರಯೋಗ ... ತಾನೆ? ಜೆಡಿ V/s ಶಿವಣ್ಣ ...ರಾಟದಲ್ಲಿ ಕಾಂಗ್ರೆಸ್‌ಗೆ ಪ್ಲಸ್ ಜಾಸ್ತಿ ...ಯಲ್ಲಿ 'ತಾಲ್ಲೂಕಾ ಮಂತ್ರಿ' ...ರಿಯ ಬಿಜೆಪಿ ಹೆಚ್ಚು ಸ್ಥಾನ ...ಲಿದೆ. ಕಾರಣ ಕಾಂಗ್ರೆಸ್‌ನ ಹೇತ್ಲಾಂಡಿ ...ಧ್ಯಕ್ಷ ಶಾಂತರಾಮ ಹೆಗಡೆ ಮತ್ತು ...ಗಿ ಬಣದ ರವೀಂದ್ರನಾಥ ...ಮ್ಮರಿಗೆ ಕ್ಷೇತ್ರ ದಲ್ಲಿ ಬೇಸೇ ...ದಿರುವುದು. ನಾಲಾ ಯಕ್ ಮಂತ್ರಿ ...ಕೊಂಡರೂ ಈತನ ಲಕ್ ಮಾತ್ರ ...ಗಿದೆ ಎಂದು ಜನರೇ ಮೂದಲಿಸಿ ...ಡುತ್ತಿದ್ದಾರೆ.

...ಹಳಿಯಾಳ ಕೆಪಿಸಿಸಿ ಅಧ್ಯಕ್ಷ ಆರ್.ವಿ. ದೇಶಪಾಂಡೆ ...ಊರು. ಇಲ್ಲಿ ಜೆಡಿಎಸ್ ಶಾಸಕನ ಆಳ್ವಿಕೆ. ಫಿಪ್ಟಿ-ಫಿಪ್ಟಿ ...ಶದಲ್ಲಿದ್ದಾರೆ ಶಾಸಕ ಸುನಿಲ್ ಹೆಗಡೆ ಮತ್ತು ...ಪಾಂಡೆ. ಮುಂಡಗೋಡದಲ್ಲಿ ಬಿಜೆಪಿ ಶಾಸಕ ವಿ.ಎಸ್. ...ಲ್ ಮತ್ತು ಕಾಂಗ್ರೆಸ್‌ನ ಮಹತ್ವಾಕಾಂಕ್ಷಿ ಅದಿರು ...ಣಿಕ ಧಣಿ ಶಿವರಾಮ ಹೆಬ್ಬಾರ್ ಜಿದ್ದಿಗೆ ಬಿದ್ದು ...ಟಕ್ಕಿಳಿದಿದ್ದಾರೆ. ಜೀವನದಲ್ಲೊಮ್ಮೆ ಶಾಸಕನಾಗಬೇಕೆಂಬ ... ಆಸೆಯಲ್ಲಿರುವ ಹೆಬ್ಬಾರ್‌ಗೆ ಕಳೆದ ಬಾರಿ ಅಚಾನಕ್ ...ತ ಸಿಟ್ಟಿದೆ. ಆದರೆ ಪಾಟೀಲ್‌ಗೆ ನಾಜೂಕಯ್ಯತನದ ...ಬಿದೆ. ಹೆಬ್ಬಾರ್ ಕ್ಷೇತ್ರದ ಮೇಲೆ ಹಿಡಿತ ಸಾಧಿಸಲು ...ದಿಂದ ಶಾಸಕನ ಮಣಿಸುವ ಸಾಧ್ಯತೆಯಿದೆ.

...ಒಟ್ಟಿನಲ್ಲಿ ಗ್ರಾಪಂ ಅಭ್ಯರ್ಥಿಗಳು ಹೆಸರಿಗಷ್ಟೇ. ಪ್ರತಿಷ್ಠೆಯ ...ಟ ಹಾಲಿ-ಮಾಜಿ ಶಾಸಕ-ಸಚಿವರ ಮಧ್ಯೆ! ಈ ...ಣ ಸಮರದಲ್ಲಿ ಜಯ ಯಾರದೇ ಆಗಲಿ; ಹಳ್ಳಿಗಳ ...ಪ್ರತಿಷ್ಠೆಯ ರಾಜಕಾರಣಕ್ಕೆ, ಭ್ರಷ್ಟಾಚಾರದ ಆಯಾಮ ...ಪ ಸೂಚನೆ ಗೋಚರಿಸುತ್ತಿದೆ.

• ನಹುಶ

ಮೂಡಿಗೆರೆ: ನುಂಗುಬಾಕ ತಹಶೀಲ್ದಾರನಿಂದ ನಕಲಿ ಜಾತಿ ಪ್ರಮಾಣಪತ್ರಗಳು


ಎಲ್ಲ ಕಡೆಯಂತೆ ಇಲ್ಲೂ ಗ್ರಾ.ಪಂ. ಚುನಾವಣೆ ಗಲೀಜಾಗಿದೆ. ಜೊತೆಗೆ ಇಲ್ಲಿನ ಬಹುತೇಕ ಮೀಸಲು ಕ್ಷೇತ್ರಗಳಲ್ಲಿ ಪ್ರಬಲ ಜಾತಿಯ ಅಭ್ಯರ್ಥಿಗಳು ನಿಲ್ಲುವ ಮೂಲಕ ಸಂವಿಧಾನಕ್ಕೆ ದ್ರೋಹ ಬಗೆದಿದ್ದಾರೆ. ಇದಕ್ಕೆಲ್ಲ ಕಾರಣ ಇಲ್ಲಿನ ನುಂಗುಬಾಕ ತಹಶೀಲ್ದಾರ್ ಶಿವೇಗೌಡ.

ನಿಮಗೆ ಯಾವ ವಿಧದಲ್ಲಿ ಜಾತಿ ಪ್ರಮಾಣಪತ್ರ ಬೇಕಾಗಿದೆ? ಹಿಂದುಳಿದ ವರ್ಗ (ಅ), ಪರಿಶಿಷ್ಟ ಜಾತಿ, ಪ.ಪಂಗಡ... ಯಾವುದಾದರೂ ಸರಿ, ಬೇಕಾದವರು ಮೂಡಿಗೆರೆಗೆ ಬನ್ನಿ. ಇಲ್ಲಿನ ತಹಶೀಲ್ದಾರ್ ಶಿವೇಗೌಡ ಎಂಬಾತನಿಗೆ ಪ್ರಸಾದ ನೀಡಿದರೆ ಸಾಕು, ನಿಮಗೆ ಬೇಕಾದ ಜಾತಿ ಪ್ರಮಾಣ ಪತ್ರ ರೆಡಿಯಾಗಿ ಒಂದೇ ದಿನದಲ್ಲಿ ಸಿಗುತ್ತದೆ. ಈತ ಹೀಗೆ ಮಾಡುತ್ತ ನಗುನಗುತ್ತಲೇ ಹಿಂದುಳಿದ ವರ್ಗದ ಜನರ ಬೆನ್ನಿಗೆ ಚೂರಿ ಹಾಕಿದ್ದಾನೆ, ಪಾಪಿ.

ಸದ್ಯಕ್ಕೆ ಗ್ರಾ.ಪಂ. ಚುನಾವಣೆ ಜನರ ಕಣ್ಣ ಮುಂದಿದೆ. ಇಲ್ಲಿ ಶಿವೇಗೌಡ ಮಾಡಿಟ್ಟಿರುವ ಅಧ್ವಾನ ಏನು ಗೊತ್ತಾ? ಉಮೇದುವಾರಿಕೆ ಸಲ್ಲಿಸಲಿರುವವರಿಗೆ ಈತ ನೀಡಿರುವ ಬಹುತೇಕ ಜಾತಿ ಪ್ರಮಾಣಪತ್ರಗಳಲ್ಲಿ ಸಂಪೂರ್ಣ ವಂಚನೆ ನಡೆದಿದೆ. ಪ್ರಮಾಣಪತ್ರ ನೀಡಲು ಬೇಕಾದ ಮಾನದಂಡವನ್ನು ಈತ ಅನುಸರಿಸಿಯೇ ಇಲ್ಲ, ಬದಲಾಗಿ ಜೇಬು ಭರ್ತಿಗೊಳಿಸಿದವರಿಗೆ ಹಿಂದುಮುಂದು ನೋಡದೆ ಬೇಕಾಬಿಟ್ಟಿ ಜಾತಿ ಪ್ರಮಾಣಪತ್ರ ನೀಡಿ ಬಿಟ್ಟಿದ್ದಾನೆ.



ಹೇಮಶೇಖರ್

ಹೇಮಶೇಖರನೆಂಬ ಕಾಂಗ್ರೆಸ್ ಮುಖಂಡನೋರ್ವನಿಗೆ ಹಿಂದುಳಿದ ವರ್ಗ (ಅ) ವಿಭಾಗದಲ್ಲಿ ಜಾತಿ ಪ್ರಮಾಣಪತ್ರ ನೀಡಿದ್ದಾನೆ. ನಿಜ ಹೇಳಬೇಕೆಂದರೆ ಈ ಹೇಮಶೇಖರನ ಶಾಲಾ ದಾಖಲಾತಿಯಲ್ಲಷ್ಟೇ ಅಲ್ಲದೇ ಈತನ ತಾತ, ಮುತ್ತಾತಂದಿರು, ತಂದೆ, ತಾಯಿ, ದೊಡ್ಡಪ್ಪ ಚಿಕ್ಕಪ್ಪ ಮಾವಂದಿರು, ಸಹೋದರರೆಲ್ಲರ ಶಾಲಾ ದಾಖಲಾತಿಗಳಲ್ಲಿ ಒಕ್ಕಲಿಗ ಎಂದು ಬರೆಯಲಾಗಿದೆ. ಇದು ಗೊತ್ತಿದ್ದೂ ತಹಶೀಲ್ದಾರ ಬಿಲ್ಲವ ಜಾತಿ ಎಂದು ನಮೂದಿಸುತ್ತಾ ಹಿಂದುಳಿದ ವರ್ಗ (ಅ) ವಿಭಾಗದಲ್ಲಿ ಜಾತಿ ಪ್ರಮಾಣಪತ್ರವನ್ನು ನೀಡಿದ್ದಾನೆ! ಇಷ್ಟು ಮಾತ್ರವಲ್ಲದೆ ಕೋಟ್ಯಂತರ ಆದಾಯ ಹೊಂದಿರುವ ಹೇಮಶೇಖರನಿಗೆ ಕೇವಲ 1 ಲಕ್ಷದ ಆದಾಯ ದೃಢೀಕರಣ ಪತ್ರವನ್ನು ನೀಡಿಬಿಟ್ಟಿದ್ದಾನೆ. ಖುದ್ದು ಹೇಮಶೇಖರ ತನ್ನ ಮತ್ರರ ಶಾಲಾ ದಾಖಲಾತಿಯಲ್ಲಿ ಈಡಿಗ ಜಾತಿ ಎಂದು ಬರೆಸಿದ್ದು, ಈತನ ನಿಜವಾದ ಜಾತಿಯ ಬಗ್ಗೆ ಸಾರ್ವಜನಿಕರಿಗೆ ಗೊಂದಲ ಇದ್ದೇ ಇದೆ. ಸದರಿ ಹೇಮಶೇಖರ ಮತ್ತು ಈತನ ಸಹೋದರ ರಾಜಶೇಖರನಿಗೆ ಜಾತಿ ಪ್ರಮಾಣಪತ್ರವನ್ನು ನೀಡುವಾಗ ಸರಿಯಾದ ಮಾನದಂಡವನ್ನು ಬಳಸಿ ಸರ್ಕಾರಿ ದಾಖಲಾತಿಗಳನ್ನು ಪರಿಶೀಲನೆಗೆ ಒಳಪಡಿಸಬೇಕು ಎಂದು ಖುದ್ದು ಶಾಸಕ ಎಂ.ಪಿ. ಕುಮಾರಸ್ವಾಮಿ ಸೂಚಿಸಿದರೂ ಧನಪಿಶಾಚಿ ಶಿವೇಗೌಡ ಮಾತ್ರ ಅದನ್ನು ಕಿವಿಗೆ ಹಾಕಿಕೊಳ್ಳಲೇ ಇಲ್ಲ.


ಶಿವೇಗೌಡ

ಸದರಿ ಹೇಮಶೇಖರ್ ಜಿಲ್ಲಾ ಕಾಂಗ್ರೆಸ್‌ನ ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷನಾಗಿದ್ದಾನೆ. ಈತನ ಪತ್ನಿ ಜ್ಯೋತಿ ಜಿ.ಪಂ. ಸದಸ್ಯರಾಗಿದ್ದಾರೆ. ಹೇಮಶೇಖರ್ ಕಳೆದ ಐದು ವರ್ಷ ಕಿರುಗುಂದ ಗ್ರಾ.ಪಂ. ಸದಸ್ಯನಾಗಿದ್ದ ಮನುಷ್ಯ. ಈತನ ತಮ್ಮ ರಾಜಶೇಖರ್ ಎಂಬಾತ ಈ ಬಾರಿ ಚುನಾವಣೆಯಲ್ಲಿ ತಹಶೀಲ್ದಾರ್ ಶಿವೇಗೌಡನ ಕೃಪಕಟಾಕ್ಷದ ಪರಿಣಾಮ ಅವಿರೋಧ ಆಯ್ಕೆಯಾಗಿ ಹಿಂದುಳಿದ ವರ್ಗಕ್ಕೆ ದ್ರೋಹ ಬಗೆದಿದ್ದಾನೆ. ಈತ ಒಕ್ಕಲಿಗನಾಗಿದ್ದು ತಹಶೀಲ್ದಾರ್ ಶಿವೇಗೌಡ ಸರಿಯಾಗಿ ಪರಿಶೀಲನೆ ನಡೆಸಿದ್ದರೆ, ಅಸಲಿ ಮಹಜರು ನಡೆಸಿ, ಶಾಲಾ ದಾಖಲಾತಿ ಸೇರಿದಂತೆ ಸರ್ಕಾರಿ ದಾಖಲಾತಿಗಳನ್ನು ಸಮರ್ಪಕವಾಗಿ ಪರಿಶೀಲನೆ ಮಾಡಿದ್ದರೆ ಹಿಂದುಳಿದ ವರ್ಗಕ್ಕೆ ಈ ಪಾಟಿ ವಂಚನೆಯಾಗುತ್ತಿರಲಿಲ್ಲ. ಆದರೆ ಶಿವೇಗೌಡನಿಗೆ ಕಾಸು ಮುಖ್ಯ ಅಷ್ಟೇ!

ಹೇಮಶೇಖರ್ ಕಿರುಗುಂದ ಹಟ್ಟಿದೇವರ ದೇವಸ್ಥಾನ, ಬಸವೇಶ್ವರ ದೇವರ ದೇವಸ್ಥಾನ, ರಾಮೇಶ್ವರ ದೇವರ ದೇವಸ್ಥಾನದ ಧರ್ಮದರ್ಶಿ ಸಮಿತಿಯಲ್ಲಿ ಸದಸ್ಯನಾಗಿದ್ದು, ಮುಜರಾಯಿ ಇಲಾಖೆಯು ಸಿದ್ಧಪಡಿಸಿರುವ ದಾಖಲಾತಿಯಲ್ಲಿ ತನ್ನದು ಒಕ್ಕಲಿಗ ಜನಾಂಗವೆಂಬುದನ್ನು ಖುದ್ದು ಆತನೇ ಒಪ್ಪಿಕೊಂಡಿದ್ದಾನೆ. ಅದುಅಲ್ಲದೆ ಕೊಲೆಯೊಂದರ ಹಿನ್ನೆಲೆಯಲ್ಲಿ ಮೂಡಿಗೆರೆ ವೃತ್ತ ನಿರೀಕ್ಷಕರ ಮುಂದೆ ಮಹಜರು ಸಾಕ್ಷಿಗೆ ಹೇಳಿಕೆ ನೀಡುವಾಗ ತಾನು ಒಕ್ಕಲಿಗ ಎಂಬುದನ್ನು ಬರೆಸಿದ್ದಾನೆ. ಇದೆಲ್ಲಾ ದಾಖಲಾತಿಗಳನ್ನು ತಹಸೀಲ್ದಾರರಿಗೆ ನೀಡಿ ಆಕ್ಷೇಪಣೆ ವ್ಯಕ್ತಪಡಿಸಲಾಗಿತ್ತಾದರೂ ಅದನ್ನು ನುಂಗುಬಾಕ ತಹಸೀಲ್ದಾರ್ ಗಣನೆಗೆ ತೆಗೆದುಕೊಂಡಿಲ್ಲ.


ಕುಮಾರಸ್ವಾಮಿ

ಈ ಹೇಮಶೇಖರ್ ಏನು ಕಡಿಮೆ ಮನುಷ್ಯನಲ್ಲ. ಮಾಜಿ ಮಂತ್ರಿ ಮೋಟಮ್ಮನ ಪರಮಾಪ್ತ ಹಿಂಬಾಲಕನಾಗಿದ್ದಾನೆ. ಕದ್ದು ಮುಚ್ಚಿ ಮರ ಕಡಿದು ಟಿಂಬರ್ ಮರ್ಚೆಂಟ್ ಎನಿಸಿಕೊಂಡಿದ್ದಾನೆ. ದಶಕದ ಹಿಂದೆ ಅರಣ್ಯಾಧಿಕಾರಿ ಸುರೇಂದ್ರ ಹೇಮಶೇಖರನ ಮೇಲೆ ಕೇಸು ದಾಖಲಿಸಿ ಜೈಲಿಗಟ್ಟಿದ್ದರು.

ಇದೀಗ ಹೇಮಶೇಖರ ಕೋಟ್ಯಾಂತರ ಆಸ್ತಿಗೆ ಒಡೆಯನಾಗಿದ್ದಾನೆ. ಮೂಡಿಗೆರೆಯ ವಿದ್ಯಾನಗರದಲ್ಲಿ ಎರಡಂತಸ್ತಿನ ಮನೆ ಕಟ್ಟಿಕೊಂಡು ವಾಸವಿದ್ದಾನೆ. ಅದರ ಪಕ್ಕ ಬೃಹತ್ ಗಾತ್ರದ ಮೂರಂತಸ್ತಿನ ಅಪಾರ್ಟ್‌ಮೆಂಟನ್ನು ಕಟ್ಟಿಸಿದ್ದಾನೆ. ಆಶ್ರಯ ಪದವಿ ಪೂರ್ವ, ಡಿ.ಎಡ್., ಕೈಗಾರಿಕಾ ತರಬೇತಿ ಕಾಲೇಜುಗಳ ಮಾಲೀಕನಾಗಿದ್ದಾನೆ. ಮೂಡಿಗೆರೆ ಸುತ್ತಮುತ್ತ ಅಲ್ಲಲ್ಲಿ ಅನೇಕ ನಿವೇಶನಗಳನ್ನು ಕೊಂಡುಕೊಂಡಿದ್ದಾನೆ. ಪಿತ್ರಾರ್ಜಿತ ಬಳುವಳಿಯಾಗಿ ಬಂದಿರುವ ಆಸ್ತಿ ನಾಲ್ಕು ಎಕರೆಯಷ್ಟಿದ್ದು ಇದೀಗ ಅನಾಮತ್ತು ಮೂವತ್ತಕ್ಕೂ ಅಧಿಕ ಎಕರೆ ಆಸ್ತಿ ಹೊಂದಿದ್ದಾನೆ. ಅಲ್ಲದೆ ಮರ ಎತ್ತುವ ಅಮೃತ ಹೆಸರಿನ ಕ್ರೇನ್, 3333 ಸಂಖ್ಯೆಯ ಎರಡು ಲಾರಿ, ಇಂಡಿಕಾ ಮತ್ತು ಐಶಾರಾಮಿ ಇಂಡಿಗೋ ಕಾರು, ಟ್ರಾಕ್ಟರ್, ಜೀಪು ಹೊಂದಿದ್ದಾನೆ. ಇಷ್ಟಾದರೂ ಈತನ ವಾರ್ಷಿಕ ಆದಾಯ ದೃಢೀಕರಣ ಪತ್ರದಲ್ಲಿ ಕೇವಲ 1 ಲಕ್ಷ ಎಂದು ತಹಶೀಲ್ದಾರ್ ಶಿವೇಗೌಡ ನಮೂದಿಸುತ್ತಾನೆಂದಾದರೆ ಅದಕ್ಕೆ ಏನೆನ್ನಬೇಕು?

ಇದೊಂದು ಸ್ಯಾಂಪಲ್ ಪ್ರಕರಣವಷ್ಟೇ. ಮೂಡಿಗೆರೆಯಾದ್ಯಂತ ಈವರೆಗೆ ಬಿಲ್ಲವ ಜಾತಿ ಪ್ರಮಾಣಪತ್ರ ಪಡೆದುಕೊಂಡವರಲ್ಲಿ ಬಹುತೇಕರು ಪ್ರಬಲ ಒಕ್ಕಲಿಗ ಸಮುದಾಯದವರಾಗಿದ್ದಾರೆ. ದಾರದಹಳ್ಳಿ ವ್ಯಾಪ್ತಿಯಲ್ಲಿ ನಿಜವಾದ ಬಿಲ್ಲವನೋರ್ವನಿಗೆ ಒಕ್ಕಲಿಗ ಜಾತಿ ಪ್ರಮಾಣಪತ್ರವನ್ನು ನೀಡಿದ್ದಾನೆ. ಒಟ್ಟಾರೆ ತಾಲ್ಲೂಕಿನಾದ್ಯಂತ ಈ ಬಾರಿ ಚುನಾವಣೆಯಲ್ಲಿ ಜಾತಿ ಪ್ರಮಾಣಪತ್ರ ನೀಡುವಾಗ ಸರಿಯಾದ ಮಾನದಂಡವನ್ನು ಬಳಸದೆ ಯದ್ವಾತದ್ವಾ ನೀಡಲಾಗಿದೆ. ಇದರಿಂದ ಹಿಂದುಳಿದ ವರ್ಗ (ಅ) ಮತ್ತು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳಿಗೆ ಸಂಪೂರ್ಣ ದ್ರೋಹ ಬಗೆದಂತಾಗಿದೆ.

ಸದ್ಯಕ್ಕಂತೂ ಮೀಸಲು ಕ್ಷೇತ್ರಗಳನ್ನು ಯಾರ್‍ಯಾರದೋ ಪಾಲು ಮಾಡಿದ ಕೀರ್ತಿ ಶಿವೇಗೌಡನಿಗೇ ಸಲ್ಲಬೇಕು.

• ಅಜೀಜ್ ಕಿರುಗುಂದ

ಗ್ರಾಮ ಪಂಚಾಯಿತಿ ಚುನಾವಣೆ 2010

ಬಿಜಾಪುರ: ಜಾತಿಯೊಂದಿಗೆ ತೋಳ್ಬಲವೂ ನಿರ್ಣಾಯಕ

ಎಲ್ಲ ಜಿಲ್ಲೆಗಳಂತೆ ಇಲ್ಲೂ ಬಿಜೆಪಿಯ ಭಂಡತನ, ಕಾಂಗ್ರೆಸ್‌ನ ಆಲಸ್ಯತನ ಸಾಗಿಯೇ ಇವೆ. ಜೊತೆಗಿಲ್ಲಿ ಪ್ರಜಾಪ್ರಭುತ್ವವನ್ನೇ ಅಣಕಿಸುವಂತಹ, ಗೇಲಿ ಮಾಡುವಂತಹ ಪ್ರಕರಣಗಳೂ ನಡೆಯುತ್ತಿವೆ.

ಮುದ್ದೇಬಿಹಾಳ ತಾಲ್ಲೂಕಿನ ಅಡವಿ ಸೋಮನಾಳ ಗ್ರಾಮ ಪಂಚಾಯತಿಯ ಮೀಸಲು ಕ್ಷೇತ್ರ (ಹಿಂದುಳಿದ 'ಬ' ವರ್ಗ) ಒಂದರಲ್ಲಿ ಗಂಡ-ಹೆಂಡತಿಯೇ ಪ್ರತಿಸ್ಪರ್ಧಿಗಳು. ಬಲಭೀಮ ಹಡಪದ ಮತ್ತಾತನ ಪತ್ನಿ ಹನುಮವ್ವ ಹಡಪದ 'ನಾ ಇಲ್ಲಾ ನೀ' ಎಂದು ಪ್ರಚಾರ ಮಾಡುತ್ತಿದ್ದಾರೆ. ಬಿಡಿ, ಇದೇನು ತಪ್ಪಲ್ಲ; ಆ ಸ್ವಾತಂತ್ರ್ಯ ಅವರಿಗಿದ್ದೇ ಇದೆ. ಆದರೆ ಈ ಸ್ವಾತಂತ್ರ್ಯದ ಸಂಪೂರ್ಣ ಲಾಭ ಪಡೆದಾತ ಸಿಂದಗಿ ತಾಲ್ಲೂಕಿನ ಮುಳಸಾವಳಗಿ ಗ್ರಾಮ ಪಂಚಾಯ್ತಿ ವ್ಯಾಪ್ತಿಯ ರಾವುತಪ್ಪ ಮೂಲಿಮನಿ ಎಂಬ ಭೂಪ. ಈತ ತಾನು ಒಂದು ವಾರ್ಡಿನಲ್ಲಿ ಸ್ಪರ್ಧಿಸಿರುವುದಲ್ಲದೇ, ಹೆಂಡತಿ, ಮಗಳು ಮತ್ತು ಮಗನನ್ನು ಒಂದೊಂದು ವಾರ್ಡಿನಿಂದ ಸ್ಪರ್ಧೆಗೆ ಇಳಿಸಿದ್ದಾನೆ. ಎಲ್ಲರೂ ಗೆದ್ದರೆ, ಅಧ್ಯಕ್ಷ-ಉಪಾಧ್ಯಕ್ಷರ ಆಯ್ಕೆ ತನ್ನ ಕೈಯಲ್ಲೇ ಇರುತ್ತೆ ಎಂಬುದು ರಾವುತಪ್ಪನ ರಾಜಕೀಯ 'ಚಾಣಕ್ಷ'! ಆದರೆ ಪಾಪ, ಮಗನಿಗೆ 21 ವರ್ಷವಾಗಲು ಇನ್ನು ಎರಡು ತಿಂಗಳು ಬಾಕಿಯಿದೆ ಎಂದು ಜನ ಸರ್ಟಿಫಿಕೆಟ್ ಹಿಡಿದು ತಕರಾರು ಎತ್ತಿದ್ದರಿಂದ ಮಗನ ನಾಮಪತ್ರ ಕಸಿದಬುಟ್ಟಿ ಸೇರಿಬಿಟ್ಟಿದೆ. "ನನ್ನ ಇನ್ನೊಂದು ನಾಕು ಮಕ್ಕಳಿದ್ರ ಎಲ್ಲಾ ಕಡೆ ನಾವ್ ಗೆದ್ದು ಉದ್ಯೋಗ ಖಾತ್ರಿ ಹಣಾವನ್ನೆಲ್ಲ ಗುಳುಂ ಮಾಡ್ತಿದ್ವಿ" ಎಂದು ಹಲುಬುತ್ತಿದ್ದಾನೆ ರಾವುತಪ್ಪ.


ಬೆಳ್ಳುಬ್ಬಿ

ಮುದ್ದೇಬಿಹಾಳ ತಾಲ್ಲೂಕಿನಲ್ಲಿ ಒಂದು ಗ್ರಾಮ ಪಂಚಾಯ್ತಿ ಅವಿರೋಧವಾಗಿ ಕಾಂಗ್ರೆಸ್ ಪಾಲಾಗಿದ್ದು, ಮತ್ತೊಂದು ಜೆಡಿಎಸ್ ತೆಕ್ಕೆಗೆ ಬಂದಿದೆ. ಇಲ್ಲೂ ಊರ ಉದ್ಧಾರಕ್ಕೆ ಒಂದು ಲಕ್ಷ ಕೊಟ್ಟವರೇ ಸದಸ್ಯರು. ಇಲ್ಲಿ ಶಾಸಕ ಅಪ್ಪಾ ಸಾಹೇಬ ನಾಡಗೌಡ ಎಚ್ಚೆತ್ತಿರುವುದರಿಂದ ಚಿಡ್ಡಿಗಳಿಗೆ ಹಿನ್ನಡೆಯಾಗುವುದು ಖಚಿತವಾಗಿದೆ.

ಬಿಜಾಪುರದಲ್ಲಿ 'ಹರಾಜು' ಪ್ರಕ್ರಿಯೆ ಮಂದಗತಿಯಲ್ಲಿರುವುದಕ್ಕೆ ಒಂದು ಕಾರಣವೂ ಇದೆ. ಸಿಂದಗಿ ತಾಲ್ಲೂಕು, ಇಂಡಿ ತಾಲ್ಲೂಕು, ನಾಗಠಾಣ ವ್ಯಾಪ್ತಿಯಲ್ಲಿ ಕಂಟ್ರಿ ಪಿಸ್ತೂಲ್‌ಗಳದ್ದೇ ಕಾರುಬಾರು. ಇಲ್ಲಿ ಗುಡಿಗೆ ದುಡ್ಡು ಸಮಾಜದ ಉದ್ಧಾರಕ್ಕೆ ಲಕ್ಷ ರೊಕ್ಕ ಎಂಬ ನಾಟಕಗಳಿಗೆ ಅವಕಾಶವಿಲ್ಲ, ಇಲ್ಲೇನಿದ್ದರೂ ರಕ್ತಸಿಕ್ತ ರಾಜಕಾರಣದ್ದೇ ಪ್ರಾಬಲ್ಯ ಹಣಕ್ಕಿಂತ ತೋಳ್ಬಲವೇ ನಿರ್ಣಾಯಕ!


ಅಪ್ಪುಪಟ್ಟಣಶೆಟ್ಟಿ

ಬಸವನಬಾಗೇವಾಡಿಯ ಬಿಜೆಪಿ ಶಾಸಕ ಸಂಗಪ್ಪ ಬೆಳ್ಳುಬ್ಬಿ ಹಾಗೂಹೀಗೂ ಮಾಡಿ 16 ಜನರನ್ನು ಅವಿರೋಧವಾಗಿ ಆಯ್ಕೆ ಮಾಡಿಸಿದ್ದಾನೆ. ಇಲ್ಲೂ ತನ್ನ ಕುಲಬಾಂಧವರಾದ ಗಾಣಿಗರಿಗೆ ಮಣೆ ಹಾಕುವ ಮೂಲಕ ತನ್ನ ಜಾತಿಬುದ್ಧಿ ತೋರಿಸಿದ್ದಾನೆ. ಆಸ್ತಿ ಮಾಡುವುದರಲ್ಲೇ ಬ್ಯುಸಿ ಆಗಿರುವ ಬಿಜಾಪುರ ಶಾಸಕ ಅಪ್ಪು ಪಟ್ಟಣ ಶೆಟ್ಟಿ ತಿಣುಕಾಡಿ ಹತ್ತು ಸದಸ್ಯರನ್ನು ಅವಿರೋಧವಾಗಿ ಆಯ್ಕೆ ಮಾಡಿಸಿದ್ದಾನೆ. ಕಾಂಗ್ರೆಸ್ ಎಚ್ಚರಗೊಂಡರೆ ಬಿಜೆಪಿ ಕ್ಯಾಂಡಿಡೇಟುಗಳು ಮಕಾಡೆ ಮಲಗುವುದು ಗ್ಯಾರಂಟಿ. ಭಾರೀ ಪ್ರಚಾರದೊಂದಿಗೆ ಜೆಡಿಎಸ್‌ಗೆ ಬಂದ ಬಸನಗೌಡ ಯತ್ನಾಳ್ ಪಾಟೀಲ್ ನಿಷ್ಕ್ರಿಯರಾಗುವುದರಿಂದ ಇಲ್ಲಿ ಜೆಡಿಎಸ್ ಲೆಕ್ಕಕ್ಕಿಲ್ಲ ಎಂಬಂತಾಗಿದೆ.

• ಮೇಘರಾಜ್



ರೇಪಾ? ಟ್ರ್ಯಾಪಾ?

'ಅತ್ಯಾಚಾರ' ಆರೋಪದ ಕತೆಯಲ್ಲಿ ವೆಂಕಟೇಶ್ ಮೂರ್ತಿಯ ಇತಿಹಾಸವಾಗಲಿ, ಚಂದ್ರಾವತಿಯ ಪಾತಿವ್ರತ್ಯೆಯಾಗಲಿ ಮುಖ್ಯವಲ್ಲ. ಆದರೆ ಭಾರತದ ಸಂಸ್ಕೃತಿಯನ್ನು ಗುತ್ತಿಗೆ ಹಿಡಿದವರಂತೆ ವರ್ತಿಸುವ ಬಿಜೆಪಿ ಪಕ್ಷದ ಈ 'ಸಾತ್ವಿಕ'ನಿಗೆ ಅಲ್ಲಿ ಅರೆನಗ್ನನಾಗಿ ಸಿಕ್ಕಿಬಿದ್ದು, ಅತ್ಯಾಚಾರದಂತಹ ಆರೋಪ ಎದುರಿಸುವ ಜರೂರತ್ತಾದರೂ ಏನಿತ್ತು ಎಂಬುದೇ ಪ್ರಶ್ನೆ!

ಚಂದ್ರಾವತಿಯ ಹೇಳಿಕೆ, ಆಕೆಯ ಪತಿ ವೆಂಕಟೇಶ್‌ಮೂರ್ತಿಯ ನಡವಳಿಕೆ ಮತ್ತು ಮಂತ್ರಿ ಹಾಲಪ್ಪನ ರೇಪ್ ವೃತ್ತಾಂತದ ವಿವರಗಳನ್ನು ಸೂಕ್ಷ್ಮವಾಗಿ ಗಮನಿಸಿದವರಿಗೆ ಒಂದಂತೂ ಸ್ಪಷ್ಟವಾಗಲೇಬೇಕು-

ಅದು ಇಡೀ ಪ್ರಕರಣದ ವಿರೋಧಾಭಾಸ ಮತ್ತು ಪ್ರತಿಯೊಬ್ಬರ ಹೇಳಿಕೆಯ ವೈರುಧ್ಯ!

ಗಂಡ ವೆಂಕಟೇಶ್ ಮೂರ್ತಿ ಮತ್ತು ಪತ್ನಿ ಚಂದ್ರಾವತಿಯ ಪ್ರಕಾರ ಕೃತ್ಯ ನಡೆದದ್ದು 2009ರ ನವೆಂಬರ್ 26 ರ ರಾತ್ರಿ. ಆವತ್ತು ಶಿವಮೊಗ್ಗಕ್ಕೆ ಬಂದಿದ್ದ ಮಂತ್ರಿ ಹಾಲಪ್ಪ ರಾತ್ರಿ 8 ರ ಸುಮಾರಿಗೆ ಊಟಕ್ಕೆ ಬರುತ್ತೇನೆಂದು ವೆಂಕಟೇಶ್ ಮೂರ್ತಿಗೆ ಫೋನ್ ಮಾಡುತ್ತಾನೆ. ಹತ್ತು ಕಾಲದ ಹೊತ್ತಿಗೆಲ್ಲಾ ಹಾಲಪ್ಪಊಟ ಮಾಡಿ ಹರಟೆ ಹೊಡೆದಿದ್ದಾನೆ. ರಾತ್ರಿ ತಡವಾಗಿದೆಯಾದ್ದರಿಂದ ಈ ರಾತ್ರಿ ಇಲ್ಲೇ ತಂಗುತ್ತೇನೆಂದು ಏಕಾಏಕಿ ನಿರ್ಧಾರ ಬದಲಿಸಿದ ಹಾಲಪ್ಪಗೆ ಮಲಗಲು ಚಂದ್ರಾವತಿಯೇ ಗೆಸ್ಟ್‌ರೂಮ್ ಅಣಿಗೊಳಿಸುತ್ತಾಳೆ. ಉಟ್ಟುಕೊಳ್ಳಲು ಬಿಳಿ ಧೋತಿಯೊಂದನ್ನು ಹಾಲಪ್ಪಗೆ ವೆಂಕಟೇಶ್ ಮೂರ್ತಿಯೇ ತಂದು ಕೊಡುತ್ತಾನೆ. ಮಲಗಿದ ಕೆಲ ಕ್ಷಣಕ್ಕೇ ಹಾಲಪ್ಪ ವಿನಾಕಾರಣ ಮಹಡಿಯಿಂದಿಳಿದು ಬಂದು ಏನನ್ನೋ ಹುಡುಕಿದಂತೆ ಮಾಡಿ ಮತ್ತೆ ಮಹಡಿ ಹತ್ತಿ ಹೋಗಿದ್ದನ್ನು ಚಂದ್ರಾವತಿ ಗಮನಿಸುತ್ತಾಳೆ.

ಬೆಳಗಿನ ಜಾವ ಮೂರೂವರೆ ಹೊತ್ತಿಗೆ ಇದ್ದಕ್ಕಿದ್ದಂತೆ ಹಾಲಪ್ಪ ಅನಾರೋಗ್ಯ ನಟಿಸಿ ಚೀರಾಡುತ್ತಾನೆ. ಮಹಡಿಯಿಂದಲೇ ವೆಂಕಟೇಶನನ್ನು ಕರೆದು ತನಗೆ ಆರೋಗ್ಯ ಸರಿ ಇಲ್ಲವೆಂದೂ, ಔಷಧಿ ಮಾತ್ರೆಯನ್ನು ಐಬಿಯಲ್ಲೇ ಬಿಟ್ಟು ಬಂದಿದ್ದೇನೆಂದೂ ಹೋಗಿ ಅದನ್ನು ತಂದುಕೊಡು ಎಂದೂ ವೆಂಕಟೇಶ್‌ನಿಗೆ ಹೇಳುತ್ತಾನೆ. ನಂಬಿದ ವೆಂಕಟೇಶ ಪ್ರವಾಸಿಮಂದಿರಕ್ಕೆ ಹೋದರೆ ಅಲ್ಲಿ ಡ್ರೈವರೂ ಇಲ್ಲ ಮಾತ್ರೆಗಳೂ ಇರಲಿಲ್ಲ. ಏನೋ ಎಡವಟ್ಟಾಗಿದೆಯೆಂದು ಅನುಮಾನಕ್ಕೆ ಬಿದ್ದ ವೆಂಕಟೇಶ್ ವಾಪಸ್ಸು ಬರುವಷ್ಟರಲ್ಲಿ ಮಂತ್ರಿ ಹಾಲಪ್ಪ ಮಲಗಿದ್ದ ಚಂದ್ರಾವತಿಯ ಮೇಲೆ ಅತ್ಯಾಚಾರ ಎಸಗಿದ್ದ.

'ನಾನು ಪೆಟಿಕೋಟ್ ಹಾಕಿಕೊಂಡು ಮಲಗಿದ್ದೆ. ಹಾಲಪ್ಪ ನನ್ನ ಮೇಲೆ ಎರಗಿ ಲೈಂಗಿಕ ತೃಷೆ ತೀರಿಸಿಕೊಳ್ಳಲು ಯತ್ನಿಸಿದರು. ಆಗ ನಾನು ನಿದ್ದೆಯಲ್ಲಿದ್ದು ತಕ್ಷಣ ಎಚ್ಚರವಾಯಿತು. ಕೂಡಲೇ ಅವರಿಂದ ಬಿಡಿಸಿಕೊಳ್ಳಲು ಯತ್ನಿಸಿದೆ. ಅಷ್ಟೊತ್ತಿಗೆ ಬಲವಂತವಾಗಿ ಬಾಯಿಮುಚ್ಚಿ ನನ್ನನ್ನು ಹಿಡಿದುಕೊಂಡು ರೇಪ್ ಮಾಡೇಬಿಟ್ರು. ಅತ್ಯಾಚಾರದ ನಂತರ ಹಾಲಪ್ಪ ನನ್ನನ್ನು ಬಿಡುಗಡೆಗೊಳಿಸಿದ. ಆಗ ಅವರನ್ನು ಸಿಕ್ಕಾಪಟ್ಟೆ ಬೈದು ಹಾಸಿಗೆಯಿಂದ ಕೆಳಕ್ಕೆ ತಳ್ಳಿದೆ. ಅಷ್ಟೊತ್ತಿಗೆ ಮನೆ ಹೊರಗೆ ಯಾರೋ ನಡೆದಾಡುವ ಸದ್ದು ಕೇಳಿಸಿತು. ಮನೆಗೆ ಆಗಮಿಸುತ್ತಿದ್ದಂತೆ ನನ್ನ ಕಿರುಚಾಟ ಕೇಳಿದ ಪತಿ ಸೀದಾ ಬೆಡ್‌ರೂಮಿಗೆ ಬಂದಿದ್ದೇ ದೀಪ ಹಾಕಿ ಹಾಲಪ್ಪನನ್ನು ಥಳಿಸಿದರು. ನಾನು ಅವರ ಜೊತೆ ಸೇರಿ ಹೊಡೆದೆ. ಸ್ವಲ್ಪ ಹೊತ್ತು ಪ್ರಜ್ಞೆ ತಪ್ಪಿ ಬಿದ್ದಂತೆ ನಟಿಸಿದ ಹಾಲಪ್ಪ ನಂತರ ಎಚ್ಚೆತ್ತುಕೊಂಡು ಯಾರಿಗೋ ಫೋನ್ ಮಾಡಿ ಕಾರು ತರಿಸಿಕೊಂಡು ಅದರಲ್ಲೇ ಪರಾರಿಯಾದರು....!'

ಇದು ವೆಂಕಟೇಶ್ ಮೂರ್ತಿಯ ಪತ್ನಿ ಚಂದ್ರಾವತಿ ಪೊಲೀಸ್ ಮಹಾ ನಿರ್ದೇಶಕರಿಗೆ ಕೊಟ್ಟ ದೂರಿನ ಸಾರಾಂಶ. ಚಂದ್ರಾವತಿ-ವೆಂಕಟೇಶ್ ದಂಪತಿಗಳದು ಆದರ್ಶ ಸಂಸಾರ ಎಂದೇ ಇಟ್ಟುಕೊಳ್ಳೋಣ. ಅವರ ಇಬ್ಬರು ಮಕ್ಕಳ ಪೈಕಿ ಹಿರಿಯ ಮಗನಿಗೆ ಹದಿನಾರರ ಪ್ರಾಯ. ಏಳು ವರ್ಷದ ಮಗಳೂ ಇದ್ದಾಳೆ. ಹದಿನಾರರ ಮಗ ವೆಂಕಟೇಶನ ಮೊದಲ ಪತ್ನಿ ಸುಮಿತ್ರಾರ ಮಗನಾದ್ದರಿಂದ ಆತನನ್ನೂ ಜೊತೆಗೇ ಇಟ್ಟುಕೊಂಡಿದ್ದಾರೆ. ನವೆಂಬರ್ 26 ರ ರಾತ್ರಿ ಮಂತ್ರಿ ಹಾಲಪ್ಪ ಚಂದ್ರಾವತಿಯ ಮೇಲೆ ದಾಳಿ ನಡೆಸಿದಾಗ ಆಕೆ ಕಿರುಚಿಕೊಂಡಿದ್ದೇ ನಿಜವಾಗಿದ್ದರೆ ಮಲಗಿದ್ದ ಮಕ್ಕಳಿಗದು ಕೇಳಿಸಬೇಕಿತ್ತು. ತಾಯಿಯ ನೆರವಿಗೆ ಕನಿಷ್ಠ ಮಗನಾದರೂ ಬರಬೇಕಿತ್ತು. ಅಥವಾ ನಂತರ ನಡೆದ ಹೊಡೆದಾಟ, ಚೀರಾಟವಾದರೂ ಮಕ್ಕಳ ಗಮನಕ್ಕೆ ಬರಬೇಕಿತ್ತು.

ಹಾಗಾದರೆ ಆವತ್ತು ಮಂತ್ರಿ ಮನೆಗೆ ಬರುತ್ತಾನೆ ಎಂದು ವೆಂಕಟೇಶ್ ತನ್ನ ಮಕ್ಕಳನ್ನು ಬೇರೆಲ್ಲಿಗೋ ಕಳಿಸಿದ್ದನಾ? ಏಕೆ ಕಳಿಸಿದ್ದ? ಅಥವಾ ಮಲಗಿದ್ದ ಮಕ್ಕಳ ಗಮನಕ್ಕೆ ಬಾರದ ಹಾಗೇ ಇದೆಲ್ಲ ನಡೆಯಿತೆಂದರೆ ಚಂದ್ರಾವತಿ ಕಿರುಚಿಕೊಂಡಿದ್ದೇ ಸುಳ್ಳಾ?

ಇದು ಒಂದು ಪ್ರಶ್ನೆಯಾದರೆ ಇಡೀ ಪ್ರಕರಣದ ಸುತ್ತ ಇಂಥ ಅನೇಕ ಪ್ರಶ್ನೆಗಳಿವೆ. ಪತ್ನಿಯ ಮೇಲೆ ಪರನೊಬ್ಬ ದಾಳಿಯಿಡುತ್ತಿದ್ದರೆ ಅದನ್ನು ತನ್ನ ಮೊಬೈಲಿನಲ್ಲಿ ವಿಡಿಯೋಗ್ರಹಿಸುವ ವೆಂಕಟೇಶನ ಮನಸ್ಥಿತಿ ಎಷ್ಟು ಸೋಗಲಾಡಿಯೋ ಅಷ್ಟೇ ಅಸಂಬದ್ಧವಾದದ್ದು ಹಾಲಪ್ಪ ಮತ್ತು ಚಂದ್ರಾವತಿಯ ದೈಹಿಕ ಸಾಮರ್ಥ್ಯ.

ಹಾಲಪ್ಪ ಕಟ್ಟುಮಸ್ತಾದ ಆಳಲ್ಲ. ಚಂದ್ರಾವತಿ ದೇಹದಾರ್ಢ್ಯದ ಮುಂದೆ ಹಾಲಪ್ಪನಂಥ ನರಪೇತಲ ಏನೇನೂ ಅಲ್ಲ. ಹಾಲಪ್ಪನಂಥ ಇಬ್ಬರು ವೀರರೂ ಒಬ್ಬ ಚಂದ್ರಾವತಿಯಂಥ ಸದೃಢಳನ್ನು ಅಲ್ಲಾಡಿಸಲು ಸಾಧ್ಯವಿಲ್ಲದಾಗ ಹೇಗೆ ರೇಪ್ ಮಾಡಲು ಸಾಧ್ಯ?

ಇದು ವೈದ್ಯರೊಬ್ಬರ ಪ್ರಶ್ನೆ. ಅತ್ಯಾಚಾರ ನಡೆಯುವಾಗ ತಾನು ಪೆಟಿಕೋಟ್ ಹಾಕಿಕೊಂಡಿದ್ದೆ ಎನ್ನುತ್ತಾಳೆ. ಆದರೆ ವಿಡಿಯೋದಲ್ಲಿ ಆಕೆಯಿರುವುದು ನೈಟಿಯಲ್ಲಿ. ಗಂಡ ವೆಂಕಟೇಶ್ ಮನೆಗೆ ಬರುವಾಗಲೇ ಪತ್ನಿಯ ಚೀರಾಟ ಕೇಳಿಸಿಕೊಂಡು ತನ್ನ ಮೊಬೈಲ್‌ನ ಕ್ಯಾಮೆರಾ ಆನ್ ಮಾಡಿಕೊಂಡು ಚಿತ್ರೀಕರಿಸಿದ್ದು ಯಾವಾಗ? ಪೆಟಿಕೋಟ್ ಧರಿಸಿದ್ದ ಚಂದ್ರಾವತಿ ನೈಟಿ ಧರಿಸಿದ್ದು ಯಾವಾಗ?

ಹೀಗೆ ಪೆಟಿಕೋಟ್‌ನಿಂದ ಏಕಾಏಕಿ ಹಳದಿಬಣ್ಣದ ನೈಟಿಗೆ ಬದಲಾದ ಚಂದ್ರಾವತಿಯ ವೇಷ ಆಕೆ ಅಳುವ ಹೊತ್ತಿಗೆ ಬಿಳಿಬಣ್ಣದ ನೈಟಿಯಾಗಿ ಬದಲಾಗಿದ್ದು ಯಾವಾಗ?

ಒಂದಕ್ಕೊಂದು ತಾಳೆಯಾಗದ ಇಂಥ ಸಾಕ್ಷ್ಯಾಧಾರಗಳೇ ವೆಂಕಟೇಶ್-ಚಂದ್ರಾವತಿಯ ಬಗ್ಗೆ ಇನ್ನಷ್ಟು ಗುಮಾನಿ ಹುಟ್ಟಿಸುತ್ತದೆ. ಅತ್ಯಾಚಾರ ನಡೆಸಿದಾಕ್ಷಣವೇ ಹಾಲಪ್ಪನನ್ನು ಬೆಡ್‌ರೂಮ್‌ನಿಂದ ಎಳೆದು ತಂದು ಹೊಡೆದೆವು


ಹಾಲಪ್ಪನ ಗೆಲುವೂ ಸೊರಬದ ಮಾನವೂ...



ಮಧುಬಂಗಾರಪ್ಪ

ಬಂಗಾರಪ್ಪನವರ ಪುತ್ರ ದ್ವೇಷದಿಂದಾಗಿಯೇ ಹರತಾಳು ಹಾಲಪ್ಪ ತನ್ನ ರಾಜಕೀಯ ಅಸ್ತಿತ್ವವನ್ನು ಉಳಿಸಿಕೊಳ್ಳಲು ಸಾಧ್ಯವಾಯಿತು.

ಬಂಗಾರಪ್ಪನವರಿಗೆ ತಮ್ಮ ಹಿರಿಯ ಮಗ ಕುಮಾರ್ ಬಂಗಾರಪ್ಪನನ್ನು ಕಂಡರೆ ಅದ್ಯಾಕೆ ಅಷ್ಟು ದ್ವೇಷವೋ ಯಾರಿಗೂ ಗೊತ್ತಿಲ್ಲ. ಆದರೆ "ನಾನು ಸೋತರೂ ಸೈ ನಿನ್ನನ್ನು ಸೋಲಿಸುವೆ" ಎಂಬಷ್ಟು ದ್ವೇಷ 'ಬಂ'ಗೆ 'ಕುಬಂ' ಬಗ್ಗೆ. ಆದ್ದರಿಂದಲೇ ಕಳೆದ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಕುಮಾರ್ ಬಂಗಾರಪ್ಪ ಸ್ಪರ್ಧಿಸಿದಾಗ ಆತನ ವಿರುದ್ಧ ಬಂಗಾರಪ್ಪ ತಮ್ಮ ಎರಡನೇ ಪುತ್ರ ಮಧು ಬಂಗಾರಪ್ಪನನ್ನು ಸಮಾಜವಾದಿ ಪಕ್ಷದಿಂದ ಕಣಕ್ಕಿಳಿಸಿದ್ದರು.




ಬಂಗಾರಪ್ಪ

ಈ 'ಬಂ' ಮಕ್ಕಳ ಕಿತ್ತಾಟದ ನಡುವೆ ಹರತಾಳು ಹಾಲಪ್ಪ ಬಿಜೆಪಿಯ ಕಮಲ ಹಿಡಿದು ಸ್ಪರ್ಧಿಸಿದ್ದ. ಅದೃಷ್ಟ ಹಾಲಪ್ಪನ ಪರವಾಗಿತ್ತು. ಆತ ಗೆದ್ದು ಯಡ್ಡಿಯೂರಪ್ಪನ ಸಚಿವ ಸಂಪುಟದಲ್ಲಿ ಮಂತ್ರಿಯೂ ಆದ.

ಆದರೆ ದುರಂತ ನೋಡಿ, ಕುಮಾರ್ ಬಂಗಾರಪ್ಪ ಮತ್ತು ಮಧು ಬಂಗಾರಪ್ಪ ಅಂದು ಪಡೆದಿದ್ದ ಮತಗಳನ್ನು ಕೂಡಿಸಿದರೆ ಅವು ಹಾಲಪ್ಪ ಪಡೆದಿದ್ದ ಒಟ್ಟು ಓಟುಗಳಿಗಿಂತ ಬರೋಬ್ಬರಿ ಹತ್ತು ಸಾವಿರಕ್ಕೂ ಹೆಚ್ಚಾಗಿತ್ತು.

'ಬಂ'ಗೆ ಕುಮಾರ್ ಕಂಡರೆ ದ್ವೇಷ ಇಲ್ಲದಿದ್ದರೆ ಈ ಕಚ್ಚೆ ಹರುಕ ಹಾಲಪ್ಪನ ಬದಲಾಗಿ ಅವರ ಪುತ್ರರಲ್ಲಿ ಒಬ್ಬರಾದರೂ ಆಯ್ಕೆಯಾಗಿರುತ್ತಿದ್ದರು.

ಇದು 'ಬಂ' ಸಂಸಾರದ ದುರಂತವೂ ಹೌದು, ಸೊರಬದ ಮತದಾರರ ಅವಮಾನವೂ ಹೌದು.



ಕುಮಾರ್‌ಬಂಗಾರಪ್ಪ

ತಲೆಹಿಡುಕರ ಸಂತೆ

ಸೊರಬದ ಚೆಡ್ಡಿ ಶಾಸಕ ಹಾಲಪ್ಪ ಶಿವಮೊಗ್ಗೆಯಲ್ಲಿಲ್ಲದೆ ಸಾಗರ, ಬೆಂಗಳೂರು, ತೀರ್ಥಹಳ್ಳಿ ಇತ್ಯಾದಿ ಕಡೆಗಳಲ್ಲೂ ತನ್ನ ಚೆಡ್ಡಿ ಬಿಚ್ಚಿ ಮಲಗುವುದನ್ನು ಅಭ್ಯಾಸ ಮಾಡಿಕೊಂಡಿದ್ದಾನೆ. ಇದನ್ನು ಆತ ಕಲಿತದ್ದು ತನ್ನ 'ಗುರು'ಗಳಿಂದ ಎಂದು ಸೊರಬದ ಜನ ಮುಸಿಮುಸಿ ನಗುತ್ತಿದ್ದಾರೆ. ಅಷ್ಟೇ ಅಲ್ಲ, "ಅಪ್ಪನಿಗೆ ಬೀಡಿ ತರಲು ಹೋಗುವ ಮಗ ತಾನೇ ಬೀಡಿ ಚಟ ಅಂಟಿಸಿಕೊಂಡಂತೆ ಹಾಲಪ್ಪ ಕೂಡ ಹಾಳಾದ" ಎಂದು ಅಲ್ಲಿನ ಜನ ಮಾತನಾಡಿಕೊಳ್ಳುತ್ತಿದ್ದಾರೆ.

ಹಾಲಪ್ಪನ ಈ ವೀಕ್‌ನೆಸ್ ಗೊತ್ತಿದ್ದ ಹಲವರು ಆತನೊಂದಿಗೆ ಸ್ನೇಹ ಬೆಳೆಸಿಕೊಂಡರು. ಆತ ತನ್ನ ಚಟವನ್ನು ತೀರಿಸಿಕೊಳ್ಳಲು ನೆರವಾದ ಈ ತಲೆಹಿಡುಕರು ಹಲವಾರು ರೀತಿಯಲ್ಲಿ ಇಂದು 'ಉದ್ಧಾರ'ವಾಗಿದ್ದಾರೆ.


ಒಂದು ಮೂಲದ ಪ್ರಕಾರ ಹಾಲಪ್ಪ ಮತ್ತಾತನ ಇಂತಹ ತಲೆಹಿಡುಕ ಸ್ನೇಹಿತರು ತಮ್ಮ ಈ ಮೋಜುವಾನಿಗೆಂದೇ ಸಾಗರದಲ್ಲಿ ಒಂದು ಬಂಗಲೆಯನ್ನೇ ಹಿಡಿದಿದ್ದರಂತೆ. ಆ ಬಂಗಲೆಗೆ ಬಿಜೆಪಿ, ಆರೆಸ್ಸೆಸ್, ವಿಶ್ವಹಿಂದೂ ಪರಿಷತ್, ಭಜರಂಗ ದಳ ಇತ್ಯಾದಿ ಕೇಸರಿ ಸಂಘಟನೆಗಳ ನಾಯಕರೂ, ಪುಡಿ ಪುಂಡರೂ ಬರುತ್ತಿದ್ದರಂತೆ. ಮಾತ್ರವಲ್ಲ ಅವರಿಗೆ ಬೇಕಾಗಿರುವ ಹೆಣ್ಣು, ಹೆಂಡ ಮತ್ತು ಗಂಡುಗಳನ್ನೂ ಮುಂಚೈ ಮೂಲದ ತಲೆಹಿಡುಕನೊಬ್ಬ ಸರಬರಾಜು ಮಾಡುತ್ತಿದ್ದನಂತೆ. ಆತ ಸರಬರಾಜು ಮಾಡುತ್ತಿದ್ದ ಪಟ್ಟಿಯಲ್ಲಿ ಪ್ರಾಣಿಗಳೂ ಇದ್ದವೇ ಎಂಬುದು ಯಾರಿಗೂ ಗೊತ್ತಿರುವಂತಿಲ್ಲ.

ಹಾಲಪ್ಪನ ಮತ್ತೊಂದು ಕಾಮಕಾಂಡ?

...ಮ ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದ ಕಾಲ. ಹಾಲಪ್ಪ ಆಗಿನ್ನೂ ಹೊಸನಗರ ಶಾಸಕ. ಬಂಗಾರಪ್ಪ ಪಾಳಯದಲ್ಲೇ ಇದ್ದರು. ಆಗ ಶಿವಮೊಗ್ಗದ ಒಂದೆರಡು ಪುದಿ...ನಲ್ಲಿ ಸುದ್ದಿಯೊಂದು ಪ್ರಕಟವಾಗಿತ್ತು, ಅದು ಹಾಲಪ್ಪನ ಮತ್ತೊಂದು ಕಾಮಕಾಂಡ ಕುರಿತಾಗಿತ್ತು.

...ಮೊಗ್ಗ ಮತ್ತು ಸಾಗರದ ನಡುವೆ ಕುಂಸಿ ಎಂಬ ಊರಿದೆ. ಅಲ್ಲಿನ ಈಡಿಗ ಜನಾಂಗದ ಯುವತಿಯೊಬ್ಬಳಿಗೆ ಕೆಲಸ ಕೊಡಿಸುವ ಆಮಿಷವೊಡ್ಡಿದ ಶಾಸಕ ಹಾಲಪ್ಪ ...ನ್ನು ಗರ್ಭಿಣಿ ಮಾಡಿ ಕೈಕೊಟ್ಟರೆಂದೂ, ಆಕೆಗಾದ ಅನ್ಯಾಯದ ವಿರುದ್ಧ ರೊಚ್ಚಿಗೆದ್ದ ಕುಂಸಿಯ ಗ್ರಾಮಸ್ಥರು ಹಾಲಪ್ಪನನ್ನು ಪಂಚಾಯ್ತಿಗೆ ಕರೆದಿದ್ದೇ ಕಂಬಕ್ಕೆ ಕಟ್ಟಿ...ದರೆಂದೂ, ಕೊನೆಗೆ ತಪ್ಪೊಪ್ಪಿಕೊಂಡ ಹಾಲಪ್ಪ ತನ್ನ ಮಾನ ಉಳಿಸುವಂತೆ ಗ್ರಾಮಸ್ಥರ ಕಾಲಿಗೆ ಬಿದ್ದರೆಂದೂ, ಅದಕ್ಕೆ ಪ್ರತಿಯಾಗಿ ಪಂಚಾಯ್ತಿ ಮುಖಂಡರು ಎಷ್ಟೋ ಲಕ್ಷ ...ಯಿಗಳ ದಂಡ ವಿಧಿಸಿದರೆಂದೂ ತನ್ನಿಂದ ಆ ಯುವತಿಗಾದ ಅನ್ಯಾಯಕ್ಕೆ ಪ್ರತಿಯಾಗಿ ಹಾಲಪ್ಪ ಆ ಎಷ್ಟೋ ಲಕ್ಷ ರೂಪಾಯಿಗಳ ದಂಡತೆತ್ತು ಬಚಾವಾದರೆಂದೂ ಸುದ್ದಿ...ಯಾಗಿತ್ತು.

...ದು ಎಷ್ಟು ನಿಜವೊ ಗೊತ್ತಿಲ್ಲ, ಹಾಗೆ ಹೊಗೆಯಾಡಿದ ಸುದ್ದಿ ಕ್ರಮೇಣ ತಣ್ಣಗಾಯಿತಾ ಅಥವಾ ಹಾಲಪ್ಪನೇ ನಿಂತು ಅದನ್ನು ಮುಚ್ಚಿಹಾಕಿದರಾ ಗೊತ್ತಿಲ್ಲ, ಆದರೆ ...ವಾಗಿದ್ದಂತೂ ಸತ್ಯ, ಬಹುಶಃ ಅನ್ಯಾಯಕ್ಕೊಳಗಾಗಿದ್ದ ಆ ಯುವತಿಯ ಮನೆಯವರು ಮಾನಕ್ಕಂಜಿರಬೇಕು ಅಥವಾ ಅಂಥದೊಂದು ಸುದ್ದಿಗೆ ರೆಕ್ಕೆಪುಕ್ಕ ಬಲಿತಿರಲಿಕ್ಕೂ ಸಾಕು. ...ಗಿಕ ಹಗರಣದಲ್ಲಿ, ಅಸಹ್ಯದ ವ್ಯಭಿಚಾರದಲ್ಲಿ ಹಾಲಪ್ಪನ ಹೆಸರು ಕೇಳಿಬರುತ್ತಿರುವುದು ಇದೇ ಮೊದಲೇನಲ್ಲ.




...ಟೇರಿಸಿಕೊಳ್ಳುತ್ತಿರುವ ಮತ್ತು ಅರೆನಗ್ನನಾಗಿರುವ ಹಾಲಪ್ಪ....

...ಗಂಡಹೆಂಡತಿ ಹೇಳುತ್ತಾರೆ. ಬೆಡ್‌ರೂಮಿನಿಂದ ...ಹಾಲಿಗೆ ಎಳೆದು ತಂದು ಹೊಡೆದದ್ದೇ ಆಗಿದ್ದರೆ ...ಸಿಗೆ ಪಕ್ಕ ಬಿದ್ದಿದ್ದೇ ಆದರೆ ಹೊಡೆತ ತಿಂದ ...ತನ್ನ ಮೂಗಿನಿಂದ ಸೋರುತ್ತಿದ್ದ ರಕ್ತವನ್ನು ಬೇಕಂತಲೇ ...ಡ್‌ರೂಮಿಗೆ ಬಂದು ಸುರಿಸಿ ಬಂದನಾ?

...ಕ್ಕೂ ಅತ್ಯಾಚಾರವೇ ನಡೆದಿದ್ದರೆ ಆ ಬಗ್ಗೆ ...ಳಿಗೆ ಆಕ್ರೋಶವಿದ್ದಿದ್ದರೆ ವೆಂಕಟೇಶ್ ಮತ್ತು ...ತಿ ಮರುದಿನ ಬೆಳಿಗ್ಗೆಯ ಹೊತ್ತಿಗಾದರೂ ಹೋಗಿ ...ದಾಖಲಿಸಬೇಕಿತ್ತು. ಆಗಿನ್ನೂ ರೌಡಿಗಳ ಬೆದರಿಕೆ ...ಗಿರಲಿಲ್ಲ ಅಥವಾ ಪ್ರಭಾವಿ ಮಂತ್ರಿಯಾದ್ದರಿಂದ ...ರು ದೂರು ದಾಖಲಿಸುವುದಿಲ್ಲ ಎಂಬ ಅಳುಕಿತ್ತು ...ಇಟ್ಟುಕೊಳ್ಳೋಣ-ಅಂಥ ಮಂತ್ರಿಯನ್ನೇ ಹಿಡಿದು ...ದ್ದರಲ್ಲವೆ? ಹೊಡೆಯುವಾಗ ಭಯವಿರಲಿಲ್ಲವೆ? ...ಹೊಡೆದು ಹಾಕಿದ್ದ ಮಂತ್ರಿಯ ವಿರುದ್ಧ ಪೊಲೀಸ್ ...ಕೊಡುವಾಗ ಮಾತ್ರ ಭಯ ಶುರುವಾಯಿತೆ?

...ಕತ್ತೇನೆಂದರೆ ರೌಡಿಗಳ ಬೆದರಿಕೆಯಿಂದಾಗಿ ...ಗೆ ದೂರು ಕೊಡುವುದು ವಿಳಂಬವಾಯಿತು ...ವೆಂಕಟೇಶ್ ನಾಲ್ಕು ತಿಂಗಳಿನಿಂದ ತಾನು ಈ ...ನವಾಗಿದ್ದೆ ಎನ್ನುತ್ತಾನೆ. ಆದರೆ ಆತ ಬೇರೆಯದೇ ...ಚರಣೆಗಿಳಿದಿದ್ದ. ಮೊದಲು ಆಯನೂರು ...ಥ್‌ರನ್ನು ಕಂಡು ತನ್ನ ಕ್ಯಾಮೆರಾ ಸೆರೆ ಹಿಡಿದಿದ್ದ ...ಣುಕು ತೋರಿಸಿ ಡೀಲು ಕುದುರಿಸಲು ಯತ್ನಿಸಿದ. ...ಯನೂರು 'ಅಲ್ಲಪ್ಪಾ ರೇಪ್ ನಡೆದದ್ದೇ ನಿಜವಾಗಿದ್ದರೆ ...ಗೆ ದೂರು ಕೊಡಬಹುದಿತ್ತಲ್ಲ? ಯಾಕೆ ನಿನ್ನ ...ಬದ ಮರ್ಯಾದೆಯನ್ನು ನೀನೇ ಹಾಳು ...ತಿಯಾ?' ಎಂದು ರೇಗಿ ಕಳಿಸಿದ್ದಾರೆ.

...ತರ ಈಶ್ವರಪ್ಪನವರನ್ನು ಕಂಡು 'ನೋಡಿ ಈ ...ಮಾಡಿದ್ದಾರೆ. ಸೆಟ್ಲ್ ಮಾಡಿಸಿ' ಎಂಬರ್ಥದಲ್ಲಿ ವೆಂಕಟೇಶ್ ಮಾತಾಡಿದ್ದ. ರೇಗಿದ ಈಶ್ವರಪ್ಪ "ನೀನು ಹೇಳೋದೇ ನಿಜ ಆಗಿದ್ದರೆ ಹೋಗಿ ಪೊಲೀಸರಿಗೆ ದೂರು ಕೊಡೋಬೇಕಿತ್ತು" ಎಂದಾಗ "ನಿಮ್ಮ ಪಕ್ಷದ ಮರ್ಯಾದೆ ಹೋಗುತ್ತದೆ ಅಂತ ಹಾಗೆ ಮಾಡಿಲ್ಲ " ಎಂದಿದ್ದ. ಅದಕ್ಕೆ ಈಶ್ವರಪ್ಪ "ನಮ್ಮ ಪಕ್ಷದ ಮರ್ಯಾದೆ ಹಾಳಾದ್ರೆ ಅದನ್ನು ಕಾರ್ಯಕರ್ತರು ನೋಡ್ಕೋತಾರೆ. ನೀನ್ಯಾಕೆ ತಲೆ ಕೆಡಿಸಿಕೊಳ್ತೀಯಾ? ಮೊದಲು ನಿನ್ನ ಕುಟುಂಬದ ಮರ್ಯಾದೆ ಉಳಿಸಿಕೊ. ಇನ್ನೂ ಸಮಾಧಾನ ಆಗದೇ ಹೋದ್ರೆ ಹೋಗಿ ಪೊಲೀಸರಿಗೆ ದೂರು ಕೊಡು....' ಎಂದು ಝಾಡಿಸಿದ್ದಾರೆ.

ಅದಕ್ಕೆ "ಪೊಲೀಸರು ದೂರು ತಗೋತಿಲ್ಲ... ನೀವೇ ಒಂದು ಮಾತು ಹೇಳಿ" ಎಂದಿದ್ದಾನೆ ವೆಂಕಟೇಶ. ತಕ್ಷಣವೇ ಈಶ್ವರಪ್ಪ ಎಸ್.ಪಿ.ಮುರುಗನ್‌ಗೆ ಫೋನ್ ಮಾಡಿ ವಿಚಾರಿಸಿದರೆ; 'ಇಲ್ಲಿಗೆ ತಿಂಗಳ ಹಿಂದೆಯೇ ಆತ ಅಂಥದ್ದೊಂದು ದೂರು ಹೇಳಿಕೊಂಡು ಬಂದಿದ್ದನೆಂದೂ ಅದು ನಿಜವೇ ಆಗಿದ್ದರೆ ಲಿಖಿತವಾಗಿ ದೂರು ಸಲ್ಲಿಸುವಂತೆ ತಾನು ಸೂಚಿಸಿದ್ದಕ್ಕೆ ಮರುದಿನ ಬಂದು ರೈಟಿಂಗ್‌ನಲ್ಲಿ ಕಂಪ್ಲೇಂಟ್ ಕೊಡ್ತೀನಿ ಎಂದು ಎದ್ದು ಹೋದವನು ಮತ್ತೆ ಬರಲೇ ಇಲ್ಲ' ಎಂದು ಮುರುಗನ್ ಹೇಳಿದ್ದಾರೆ.

ಇದಾದನಂತರ ಯಡ್ಡಿ ಮಗ ರಾಘವೇಂದ್ರನನ್ನು ಕಂಡು ಮುಖ್ಯಮಂತ್ರಿಯ ಭೇಟಿಗೆ ವೆಂಕಟೇಶ್ ಪ್ರಯತ್ನಿಸಿದ್ದಾನೆ. ಯಡ್ಡಿ ಈ ಬಗ್ಗೆ ಆಸಕ್ತಿ ವಹಿಸುತ್ತಿಲ್ಲ ಎಂದು ಗೊತ್ತಾಗಿ ಹಾಲಪ್ಪನ ಎದುರಾಳಿ ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣರನ್ನು ಕಂಡು ವಿಷಯ ಮುಟ್ಟಿಸಿದ್ದಾನೆ. ಹಾಗೇ ಮಧು ಬಂಗಾರಪ್ಪನವರನ್ನೂ ಕಂಡು ತನ್ನ ಬಳಿಯಿದ್ದ ವಿಡಿಯೋ ಕ್ಲಿಪ್ಪಿಂಗ್ ತೋರಿಸಿದ್ದಾನೆ. ವಿಷಯ ಈಗ ಬಹಿರಂಗವಾಗಿದೆಯಾದರೂ ಶಿವಮೊಗ್ಗದ ಬಿಜೆಪಿ ನಾಯಕರಿಗಾಗಲಿ, ಅಲ್ಲಿನ ಪೊಲೀಸರಿಗಾಗಲಿ ಇದು ಹೊಸ ವಿಷಯವೇನಲ್ಲ. ತನಗೆ ರೌಡಿಗಳ ಬೆದರಿಕೆಯಿದ್ದುದರಿಂದ ಹೆದರಿ ದೂರು ಕೊಡಲಿಲ್ಲ ಎನ್ನುವ ವೆಂಕಟೇಶ್ ಏಕೆ ಇಂಥ ನಾಯಕರ ಬಳಿ ಹೋಗಿ ತನ್ನ ಮೊಬೈಲಿನಲ್ಲಿದ್ದ ಕ್ಲಿಪ್ಪಿಂಗ್ ತೋರಿಸುತ್ತಿದ್ದ?

ಈ ಎಲ್ಲಾ ಪ್ರಸಂಗಗಳೂ ಸ್ಪಷ್ಟಪಡಿಸುವ ಒಂದು ಸಂಗತಿಯೆಂದರೆ ಶುರುವಿನಿಂದಲೂ ವೆಂಕಟೇಶ್‌ಗೆ ತನ್ನ ಕುಟುಂಬದ ಮಾನ ಕಾಯುವ ಆಸಕ್ತಿ ಇರಲೇ ಇಲ್ಲ!

ಸದ್ಯ ಬೆಂಗಳೂರಿನ ಶಿವಾನಂದ ಸ್ಟೋರ್ ಬಳಿಯ ರೇಸ್‌ವ್ಯೂ ಹೋಟೆಲಿನ 107ನೇ ನಂಬರಿನ ಕೋಣೆಯನ್ನು ಕಳೆದ ಹದಿನೈದು ದಿನಗಳಿಂದ ಹಿಡಿದು ಕೂತು ಕಾರ್ಯಾಚರಣೆಗಿಳಿದ ವೆಂಕಟೇಶ್‌ನ ರೂಮ್ ಬಾಡಿಗೆ ಕಟ್ಟುತ್ತಿರುವುದು ಬೇಳೂರು ಗೋಪಾಲಕೃಷ್ಣ ಎಂಬುದು ಎಷ್ಟು ಸತ್ಯ? ಆತ ಓಡಾಡುತ್ತಿರುವುದು ಬಂಗಾರಪ್ಪನ ಬಂಟ ಶಿವಮೊಗ್ಗದ ಹಾವು ಹೊನ್ನಪ್ಪನ ಇನ್ನೋವಾ ಕಾರಿನಲ್ಲಿ ಎಂಬುದು ನಿಜವಾ? ಮಂತ್ರಿ ಹಾಲಪ್ಪನಿಂದ ಈಗಾಗಲೇ ವೆಂಕಟೇಶ್ 40 ಲಕ್ಷ ಪಡೆದದ್ದು ಹೌದಾ? ಇದು ಸಾಲದೆಂಬಂತೆ ಮತ್ತೆ ಒಂದು ಕೋಟಿಯ ರೊಕ್ಕ ಮತ್ತು ಬೆಂಗಳೂರಿನಲ್ಲೊಂದು ಮನೆ ಕೊಡಿಸುವಂತೆ ವೆಂಕಟೇಶ್ ಬ್ಲಾಕ್‌ಮೇಲ್ ಮಾಡುತ್ತಿದ್ದನಾ? ಅದನ್ನು ಭರಿಸಲಾಗದೇ ಹೋಗಿದ್ದಕ್ಕೆ ವೆಂಕಟೇಶ್ ಹಠಕ್ಕೆ ಬಿದ್ದನಾ?

ಇಂಥ ವದಂತಿಗಳ್ಯಾವುದೂ ಬೆಂಕಿಯಿಲ್ಲದೇ ಹೊಗೆಯಾಡುವಂಥದ್ದಲ್ಲ. ಮಂತ್ರಿಯೊಬ್ಬ ತನ್ನ ಘನತೆಯನ್ನೂ ಲೆಕ್ಕಿಸದ ಮೇಲೆ ತನಗೆ ಪತ್ನಿ ಮಕ್ಕಳಿದ್ದೂ ಈ ಮಟ್ಟಕ್ಕಿಳಿಯುತ್ತಾನೆಂದರೆ; ಅದನ್ನು ತಮ್ಮ ಲಾಭಕ್ಕೆ ಬಳಸಿಕೊಳ್ಳುವವರು ಇದ್ದೇ ಇರುತ್ತಾರೆ.

ಕಾಮದ ದಾಹ ಮಂತ್ರಿ ಹಾಲಪ್ಪನನ್ನೇ ನುಂಗಿಹಾಕಿದೆ.

• ರಾ. ಸೋಮನಾಥ್
ra.somanath2010@gmail.com



ಚೆಡ್ಡಿಗಳ ಕೈಚಳಕ




ಹರತಾಳು ಹಾಲಪ್ಪನ ಮಾನ ಹರಾಜಿನಲ್ಲಿ ನೇರ ಪಾತ್ರ ವಹಿಸಿರುವವರು ವೆಂಕಟೇಶಮೂರ್ತಿ ಮತ್ತಾತನ ಪತ್ನಿ ಚಂದ್ರಾವತಿಯಾದರೂ ಹಿನ್ನೆಲೆಯಲ್ಲಿ 'ದೇಶಭಕ್ತ' ಬಿಜೆಪಿ ಪಕ್ಷದ ಹಲವಾರು ಜನರ ಕೈವಾಡ ಕಾಣಿಸುತ್ತಿದೆ.

ಅದರಲ್ಲಿ ಮುಖ್ಯವಾದದ್ದು ಬಿಜೆಪಿ ರಾಜ್ಯಾಧ್ಯಕ್ಷ ಈಶ್ವರಪ್ಪನ ಪಾತ್ರ. ಕಳೆದ ಎರಡು ತಿಂಗಳುಗಳಿಂದ ಈ ರೇಪ್ ಪ್ರಕರಣದ ಬಗ್ಗೆ ಬಾಯಿಹರುಕ ಈಶ್ವರಿ ಹಲವಾರು ಪತ್ರಕರ್ತರಿಗೆ ಹೇಳುತ್ತಲೇ ಇದ್ದರು. ಆದರೆ ವೆಂಕಟೇಶ ಮೂರ್ತಿ "ಹಾಗೇನೂ ಆಗಿಲ್ಲ, ನೀವು ಹಾಗೆಲ್ಲ ವರದಿ ಮಾಡಿದರೆ ನಾನು ಒಂದು ಕೋಟಿಗೆ ಮಾನನಷ್ಟ ಮೊಕದ್ದಮೆ ಹಾಕುತ್ತೇನೆ ನಿಮ್ಮ ಪತ್ರಿಕೆ ವಿರುದ್ಧ" ಎಂದು ಗುಡುಗುತ್ತಿದ್ದರಿಂದ ಈ ಉಸಾಬರಿ ಯಾಕೆ ಬೇಕೆಂದು ಪತ್ರಕರ್ತರು ಸುಮ್ಮನಾಗಿದ್ದರು. ಅಷ್ಟಕ್ಕೂ ಅವರ ಬಳಿ ಯಾವ ಸಾಕ್ಷ್ಯಗಳೂ ಇಲ್ಲದಿದ್ದರಿಂದ ವಿಧಿ ಇಲ್ಲದೆ ಅವರೆಲ್ಲ ತೆಪ್ಪಗಾಗಿದ್ದರು.

ಇದರಿಂದ ಈಶ್ವರಿಗೆ ಭಾರಿ ಬೇಸರವಾಗಿತ್ತು. ತನ್ನ ಪರಮವೈರಿ ಯಡ್ಡಿಯ ಹಿಂಬಾಲಕನಾದ ಹಾಲಪ್ಪನಿಗೆ ಚುರುಕು ಮುಟ್ಟಿಸಿದರೆ ಯಡ್ಡಿಗೆ ಮುಜುಗರವಾಗುತ್ತದೆ ಎಂದು ಈಶ್ವರಿಗೆ ಚೆನ್ನಾಗಿಯೇ ಗೊತ್ತಿತ್ತು.

ಈ ಮಧ್ಯೆ ವೆಂಕಟೇಶ್‌ಮೂರ್ತಿ ಕೂಡ ಈ ಪ್ರಕರಣ ಬಯಲಿಗೆ ಬರಬಾರದಿದ್ದರೆ ಹಣ ಕೊಡು ಎಂದು ಹಾಲಪ್ಪನನ್ನು ಪೀಡಿಸಿದ್ದ ಎಂದೂ ಕೇಳಿಬರುತ್ತಿದೆ.




ಆದರೆ ಹಾಲಪ್ಪನೊಂದಿಗೆ ಡೀಲ್ ಕುದುರದಿದ್ದಾಗ ವೆಂಕಟೇಶ ಮೂರ್ತಿ ಸಾಕ್ಷ್ಯಗಳನ್ನು ಬಹಿರಂಗಪಡಿಸುವುದಾಗಿ ಸ್ಪಷ್ಟಪಡಿಸಿದರು. ಅದಕ್ಕೆ ಈಶ್ವರಪ್ಪ ಕೂಡ ಕುಮ್ಮಕ್ಕು ಕೊಟ್ಟಿದ್ದಾರೆ.

ಈಶ್ವರಪ್ಪನಲ್ಲದೆ ವೆಂಕಟೇಶ್‌ಮೂರ್ತಿಗೆ ಹಿಂದಿನಿಂದಲೇ ಪ್ರೋತ್ಸಾಹ ನೀಡಿರುವುದು ಬಿಜೆಪಿಯ ಸಾಗರದ ಶಾಸಕ ಬೇಳೂರು ಗೋಪಾಲಕೃಷ್ಣ. ಈ ಹಿಂದೆ ಹಾಲಪ್ಪನಂತೆಯೇ ಬೇಳೂರು ಕೂಡ 'ಬಂ' ಶಿಷ್ಯನಾಗಿದ್ದು ಇವರಿಬ್ಬರೂ ಎಲ್ಲ ಡೀಲ್‌ಗಳಲ್ಲಿ ಜೊತೆಯಾಗಿರುತ್ತಿದ್ದರು. ಆದರೆ ಅದ್ಯಾವುದೋ ಹಣ ಹಂಚಿಕೆ ವಿಷಯದಲ್ಲಿ ಇವರಿಬ್ಬರ ನಡುವೆ ಜಗಳ ಪ್ರಾರಂಭವಾಗಿ ಈಗ ಅದು ಜಿದ್ದಾಜಿದ್ದಿ ವೈರತ್ವವಾಗಿ ಪರಿವರ್ತಿತಗೊಂಡಿದೆ. ಒಂದು ಹಂತದಲ್ಲಿ ಜೆಡಿಪಿ ಸಭೆಯಲ್ಲಿ ಇವರಿಬ್ಬರ ಜಗಳ ಕೈ ಕೈ ಮಿಲಾಯಿಸುವ ಹಂತಕ್ಕೂ ಹೋಗಿತ್ತು.

ರಾಜಕೀಯವಾಗಿ ಹಾಲಪ್ಪನನ್ನು ಮಟ್ಟ ಹಾಕಿದರೆ ತಾನೇ ಈಡಿಗರ ಮುಂದಿನ ನಾಯಕನಾಗಿ ಹೊರಹೊಮ್ಮಬಹುದು ಎಂಬ ಲೆಕ್ಕಾಚಾರ ಕೂಡ ಬೇಳೂರದ್ದು.

ಈಗ ಈ ಅತ್ಯಾಚಾರ ಪ್ರಕರಣ ಬಹಿರಂಗಗೊಂಡು ಯಡ್ಡಿಗೆ ಅಪಾರ ಮುಜುಗರವಾಗಿದ್ದರೆ ಅದನ್ನು ಕಂಡು ಒಳಗೊಳಗೆ ಈಶ್ವರಿ ಮುಸಿಮುಸಿ ನಗುತ್ತಿದ್ದಾರೆ ಎಂದು ಶಿವಮೊಗ್ಗದ ಚೆಡ್ಡಿಗಳೇ ಹೇಳುತ್ತಿದ್ದಾರೆ.

ಇದೆಲ್ಲದರ ಹಿನ್ನೆಲೆಯಲ್ಲಿ 'ಹಾಲಪ್ಪನ ಮಾನ ಹರಾಜು' ಪ್ರಕ್ರಿಯೆಯಲ್ಲಿ ವಿರೋಧ ಪಕ್ಷದ ಕೈವಾಡಕ್ಕಿಂತ ಶಿವಮೊಗ್ಗೆಯ ಚೆಡ್ಡಿಗಳ ಕೈಚಳಕವೇ ಇರುವುದು ಸ್ಪಷ್ಟವಾಗುತ್ತದೆ.



ಬಾಗಲಕೋಟೆ: ಚೆಡ್ಡಿಗಳ ಅವಿರೋಧ ಆಯ್ಕೆ= ಮೇಲ್ಜಾತಿ + 'ಆಮಿಷ'+ಧಮಕಿ

ಬರೀ ಬಾಗಲಕೋಟೆ ಏನು, ಈ ಸಲ ಇಡೀ ಗ್ರಾಮಪಂಚಾಯತ್ ಚುನಾವಣೆಯೇ ದನದ ಸಂತೆಯಾಗಿ ಹೋಗಿದೆಯಾ ಎಂಬ ಪ್ರಶ್ನೆ ಎದ್ದಿದೆ. ಕಾರಣವಿಷ್ಟೇ 'ಆಪರೇಷನ್ ಕಮಲ'ದಂತೆ ಈಗ 'ಆಪರೇಷನ್ ಅವಿರೋಧ' ಎಂಬ ಅನೈತಿಕ ದಂಧೆ ಶುರುವಾಗಿದೆ.

ಬಾಗಲಕೋಟೆ ಜಿಲ್ಲೆಯಲ್ಲಿ ಸಂಸದನ ಜೊತೆಗ ಆರು ಚೆಡ್ಡಿ ಶಾಸಕರಿದ್ದು, ಇವರೆಲ್ಲ ಈ ಚುನಾವಣೆಯಲ್ಲಿ ಗ್ರಾ.ಪಂ.ಗಳನ್ನು ವಶಮಾಡಿಕೊಳ್ಳಲು ಅಡ್ಡಹಾದಿ ಹಿಡಿದು ಬಿಟ್ಟಿದ್ದಾರೆ. ಬೀಳಗಿ ತಾಲ್ಲೂಕಿನ ಇನಾಂಹಂಚಿನ್ನಾಳ ಗ್ರಾ.ಪಂನ ಹನ್ನೊಂದು ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇದು ಪಕ್ಷಾತೀತ ಚುನಾವಣೆಯಾದರೂ, ಪಕ್ಷಗಳ ಕ್ಯಾಂಡಿಡೇಟುಗಳೇ ತುಂಬಿದ್ದು ಈ ಹನ್ನೊಂದು ಜನ ಬೀಳಗಿ ಶಾಸಕ, ಕೈಗಾರಿಕಾ ಸಚಿವ ಮುರುಗೇಶ ನಿರಾಣಿಯ ಹಿಂಬಾಲಕರು. ಇವರಲ್ಲಿ ಮೀಸಲು ಕ್ಷೇತ್ರ ಬಿಟ್ಟು ಉಳಿದೆಡೆ ಗೆದ್ದವರೆಲ್ಲ ನಿರಾಣಿಯ ಪಂಚಮಸಾಲಿ ಜಾತಿಯವರು! ಹೇಗಿದೆ ನೋಡಿ ಯಡ್ಡಿಯ ಗಬ್ಬು ಗ್ರಾಮಯೋಜನೆ....



ಹೀಗೆ ಅವಿರೋಧವಾಗಿ ಆಯ್ಕೆಯಾದ ಈ ಹನ್ನೊಂದು 'ಸಮಾಜ ಸೇವಕರು' ಸಮಾಜೋದ್ಧಾರಕ್ಕೆ ತಲಾ ಲಕ್ಷ ರೂ. ಕೊಡ್ತಾರಂತೆ. ಅಂದಂತೆ ಇಲ್ಲಿ ಗ್ರಾಮಗಳಲ್ಲಿರುವ ಕಾಂಗ್ರೆಸ್, ಜೆಡಿಎಸ್‌ನ ಪುಢಾರಿಗಳು ಮಲಗಿದ್ದರಾ? ಇಲ್ಲ ಇಲ್ಲ, ಅವರೂ ಈ ಪಹಿಂವಾಟನಲ್ಲಿ ಪಾಲುದಾರರೇ. ನಿರಾಣಿಗೆ ಅವರೂ ಸಾಥ್ ನೀಡಿದ್ದರಿಂದಲೇ ಈ ಅವಿರೋಧ ಆಯ್ಕೆ ಎಂಬ ಅನಿಷ್ಟ ದಂಧೆ ಸಕ್ಸಸ್ ಆಗಿದೆ. ಅಷ್ಟಕ್ಕೂ ನಿರಾಣಿಯ ವಿರೋಧ ಕಟ್ಟಿಕೊಂಡು ಸ್ಪರ್ಧಿಸಲು ಮುಂದಾದವರಿಗೆ ನಿರಾಣಿ ಗೂಂಡಾಗಿರಿಯಿಂದ ಹಿಂದೆ ಸರಿಸಿದ್ದಾನೆ. ಹೇಗೆ ಗೊತ್ತಾ? ಎಲೆಕ್ಷನ್‌ಗೆ ನಿಲ್ಲುವುದಾದರೆ, ತನ್ನ ಬ್ಯಾಂಕ್‌ನಿಂದ ಪಡೆದ ಸಾಲವನ್ನು ತತ್‌ಕ್ಷಣ ಮರುಪಾವತಿ ಮಾಡಬೇಕು ಎಂದು ಬ್ಲಾಕ್‌ಮೇಲ್ ಮಾಡಿದ ಈ ಕರೆಂಟುಕಳ್ಳ ಸಚಿವ, ಸ್ಪರ್ಧೆಗೆ ನಿಂತರೆ ಅಂತವರ ಮತ್ತು ಅವರ ಬಂಧುಗಳ ಕಬ್ಬನ್ನು ನಿರಾಣಿ ಶುಗರ್ಸ್ ಖರೀದಿಸುವುದಿಲ್ಲ ಎಂಬ ಧಮಕಿ ಬೇರೆ ಹಾಕಿದ್ದ. ನಿರಾಣಿಯ ಋಣ ಇಲ್ಲದವರು ಇದೆಲ್ಲದಕ್ಕೆ ಕೇರ್ ಮಾಡದೇ ಸ್ಪರ್ಧಿಸಿಯೇ ಬಿಟ್ಟರೆ, ಅವರು ಅಕ್ಕಪಕ್ಕದವರ ಹೊಲದಲ್ಲಿ ಕಾಲಿಡುವಂತಿಲ್ಲ ಪಕ್ಕದ ಹೊಲದ ಮೂಲಕ ಅವರ ಪೈಪ್‌ಲೈನ್ ಹಾದುಹೋಗಿದ್ದರೆ ಅದನ್ನು ಕಟ್ ಮಾಡಲಾಗುವುದು... ಇಂತಹ ಭಯೋತ್ಪಾದಕ ಕಂಡೀಶನ್ನುಗಳನ್ನು ವಿಧಿಸಿಬಿಟ್ಟಿದ್ದ ನಾನ್‌ಸೆನ್ಸ್ ನಿರಾಣಿ.

ಹೀಗೆ ಚುನಾವಣೆಯನ್ನೇ ಮಲಿನಗೊಳಿಸಿ ಪ್ರಜಾಪ್ರಭುತ್ವಕ್ಕೆ ಅವಮಾನಿಸಿದ್ದು ಬರೀ ಬೀಳಗಿ ತಾಲ್ಲೂಕಿನ ದುರಂತವಷ್ಟೇ ಅಲ್ಲ, ಜಿಲ್ಲೆಯಲ್ಲಿ 'ಅವಿರೋಧ'ವಾಗಿ ಆಯ್ಕೆಗೊಂಡ 389 ಸದಸ್ಯರಿಗೆ ನೆರವಾಗಿದ್ದು ಕೂಡಾ ಈ ಅಸಹ್ಯಕರ 'ಆಪರೇಷನ್ ಅವಿರೋಧ'ವೇ.

ಜಮಖಂಡಿ ತಾಲ್ಲೂಕಿನಲ್ಲಿ ತಹಶೀಲ್ದಾರ್ ಸಿದ್ದು ಹುಲ್ಲೊಳ್ಳಿ ಪಕ್ಕಾ ಬಿಜೆಪಿ ಏಜೆಂಟ್‌ನಂತೆ 'ಸೇವೆ' ಸಲ್ಲಿಸುತ್ತಿದ್ದಾನೆ. ಗ್ರಾಮಗಳ ಲೀಡರ್‌ಗಳನ್ನು ಕರೆದು ಇಂತಿಂತಹವರೇ ನಿಲ್ಲಬೇಕು ಎಂದು ನಿರ್ದೇಶಿಸಿದ ಮಹಾನುಭಾವನೀತ. ಬಿಜೆಪಿಗೆ ಹೆಲ್ಪು ಮಾಡುವ ಧಾವಂತದಲ್ಲಿ, ಸಾವಳಗಿ ಗ್ರಾ.ಪಂ. ಚುನಾವಣೆಗೆ ನಾಮಪತ್ರಗಳನ್ನು ಸ್ವೀಕರಿಸುವ ವೇಳೆಯೇ, ನಾಮಪತ್ರ ಹಿಂತೆಗೆಯುವ ಪತ್ರಕ್ಕೂ ಸಹಿ ಪಡೆದು ಗೊಂದಲ ಸೃಷ್ಟಿಸಿಬಿಟ್ಟ ಈ ತಪರಾಕಿ ತಹಶೀಲ್ದಾರ್. ನಾಮಪತ್ರ ಹಿಂತೆಗೆತದ ನಂತರ, ಮೇ 3ರ ಸಂಜೆ ಕಣದಲ್ಲಿ ಉಳಿದವರ ಅಂತಿಮ ಪಟ್ಟಿ ಪ್ರಕಟಿಸಬೇಕಿತ್ತು, ಆದರೆ ಈ ಬಿಜೆಪಿಯ ತಹಶೀಲ್ದಾರ್ ಹುಲ್ಲೋಳಿ ಮೇ 4ರ ಸಂಜೆಯಾದರೂ ಪಟ್ಟಿ ಪ್ರಕಟಿಸಲಿಲ್ಲ! ಕೊನೆಗೆ ಜನ ಗ್ರಾ.ಪಂ. ಕಚೇರಿಗೆ ಬೀಗ ಜಡಿದು ಪ್ರತಿಭಟಿಸಿದ ನಂತರ ಓಡೋಡಿಬಂದ ಹುಲ್ಲೋಳಿ ರಾಜಿ ಪಂಚಾಯತಿ ಮಾಡಿ ಓಡಿಹೋಗಿದ್ದಾನೆ.

ಹುಲ್ಲೋಳಿಗಿಂತ ನಾನೇನು ಕಡಿಮೆ ಎಂದು ಸವಾಲು ಹಾಕುವಂತೆ ಬಾದಾಮಿ ತಾಲ್ಲೂಕಿನ ಚೆಡ್ಡಿನಿಷ್ಠ ತಹಶೀಲ್ದಾರ್ ಮಹೇಶ್ ಕರ್ಜಗಿಯೂ ಬಿಜೆಪಿಯ ಸೇವೆಗೈದಿದ್ದಾನೆ. ಶಾಸಕ ಪಟ್ಟಣಶೆಟ್ಟಿಯ ಆದೇಶದಂತೆ ಕೆಲಸ ಮಾಡಿದ ಕರ್ಜಗಿ ಊರೂರು ಅಲೆದು ವಿರೋಧಪಕ್ಷಗಳಿಂದ ಚುನಾವಣೆಗೆ ಸ್ಪರ್ಧಿಸಲಿದ್ದವರನ್ನು ಆಮಿಷದ ಮೂಲಕ ಇಲ್ಲವೇ ಸರ್ಕಾರಿ ಗೂಂಡಾಗಿರಿ ಮೂಲಕ ಹಿಂದೆ ಸರಿಸಿದ್ದಾನೆ. ಕರ್ಜಗಿ ಜೊತೆ ಪೊಲೀಸಪ್ಪ ಧೂಳಖೇಡ್ ಎಂಬ ರೌಡಿಯೂ ಕಾರ್ಯಾಚರಣೆಗಿಳಿದು, ಗ್ರಾ.ಪಂ. ಚುನಾವಣೆಯನ್ನು ಗಬ್ಬೆಬ್ಬಿಸಿದ್ದಾನೆ. ಕಾಂಗ್ರೆಸ್ ಅಧ್ಯಕ್ಷ ಚಿಮ್ಮನಕಟ್ಟಿ ಇದನ್ನೆಲ್ಲ ನೋಡಿಯೂ ನೋಡದವರಂತೆ ಇದ್ದಿದ್ದರಿಂದ 78 ಸದಸ್ಯರು 'ಅವಿರೋಧ'ವಾಗಿ ಆಯ್ಕೆಯಾಗಿ ಕಿವಿಗಳಿಗೆ ಕಮಲ ಮುಡಿಸಿಕೊಂಡಿದ್ದಾರೆ.

ಬಾಗಲಕೋಟೆಯ ಚೆಡ್ಡಿ ಶಾಸಕ ವೀರಣ್ಣ ಚರಂತಿಮಠ ವಿರೋಧಿ ಸ್ಪರ್ಧಾಳುಗಳ ನಾಮಪತ್ರ ವಾಪಸಾತಿ ಫಾರ್ಮ್ ಮೇಲೆ ಬಲವಂತವಾಗಿ ಸಹಿ ಪಡೆದು, ಅವಿರೋಧವಾಗಿ ಆಯ್ಕೆಯಾದವರನ್ನು ಎಳೆದು ತಂದು ತನ್ನ ಪಕ್ಕ ನಿಲ್ಲಿಸಿಕೊಂಡು ಪೇಪರಿನವರಿಗೆ ಪೋಜು ಕೊಟ್ಟಿದ್ದಾನೆ. ಎಲ್ಲಿ ಪಕ್ಷಗಳ ಬ್ಯಾನರ್ ಇರಬಾರದಿತ್ತೋ ಅಲ್ಲಿ ಈ ಚರಂತಿಮಠ ರಾಜಾರೋಷವಾಗಿ ಪಕ್ಷ ರಾಜಕಾರಣ ಮಾಡುತ್ತಿದ್ದಾನೆ.


ಗ್ರಾಮ ಪಂಚಾಯ್ತಿ ಚುನಾವಣೆ 2010

ಚುನಾವಣಾ ಆಯೋಗವೇ ಇದಕ್ಕೆಲ್ಲ ಮೌನಸಮ್ಮತಿ . ನೀಡಿರುವುದರಿಂದ ಜಿಲ್ಲೆಯ ಚುನಾವಣಾ ಅಧಿಕಾರಿಗಳೂ ಈ ಕೀಳು ರಾಜಕೀಯದ ಬೆಂಬಲಿಗರಾಗಿದ್ದಾರೆ. ಈ ಚುನಾವಣಾ ಅಧಿಕಾರಿಗಳೇನಾದರೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸಿದ್ದರೆ ಅವಿರೋಧವಾಗಿ ಆಯ್ಕೆಯಾದ ಸದಸ್ಯರ ಸದಸ್ಯತ್ವವನ್ನು ರದ್ದು ಮಾಡಬೇಕಿತ್ತು, ಏಕೆಂದರೆ ಚುನಾವಣಾಧಿಕಾರಿಯು ಅಧಿಕೃತ ಆಯ್ಕೆ ಪತ್ರ ಕೊಡುವ ತನಕ ಆಯ್ಕೆಯಾದ ಗ್ರಾ.ಪಂ. ಸದಸ್ಯರು ತಾವು ಇಂತಹ ಪಕ್ಷದವರೆಂದು ಘೋಷಿಸಿಕೊಳ್ಳುವ ಹಾಗಿಲ್ಲ, ಆದರೆ ಇಲ್ಲಿ ಚರಂಡಿ ಶಾಸಕ ಅದನ್ನು ಬಹಿರಂಗವಾಗಿಯೇ ಮಾಡುತ್ತಿದ್ದಾನೆ. ಹೀಗಾಗಿ ತಾಲ್ಲೂಕಿನಲ್ಲಿ 81 ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಇವರಲ್ಲಿ ಕೆಲವರು ಕಾಂಗ್ರೆಸ್‌ನವರಿದ್ದರೂ ಅವರೆಲ್ಲ ಆಡಳಿತ ಪಕ್ಷದ 'ಫೇವರ್'ಗಳಿಗಾಗಿ ಬಿಜೆಪಿ ಫ್ಲ್ಯಾಗ್ ಹಿಡಿಯಲಿದ್ದಾರೆ.

ಮುಧೋಳ ತಾಲ್ಲೂಕಿನ ಚಿಟಗಿಂಡಿ-ಜಂಬಗಿ-ದಾದನಟ್ಟಿ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಸಚಿವ ಗೋವಿಂದ ಕಾರಜೋಳನ ಬಂಟರು ಬಲಾತ್ಕಾರದಿಂದ ನಾಮಪತ್ರಗಳನ್ನು ವಾಪಸ್ ತೆಗೆದುಕೊಳ್ಳುವಂತೆ ಮಾಡಿದ್ದಾರೆ. ಇದರ ವಿರುದ್ಧ ದೂರು ಕೊಡಲು ಹೋದರೆ ಪೊಲೀಸರು ಸಹಕರಿಸುತ್ತಿಲ್ಲ. ಏಕೆಂದರೆ ಚೌಧರಿ ಎಂಬ ಪೊಲೀಸ್ ಅಧಿಕಾರಿ ಕಾರಜೋಳನ ಕಾರಕೂನನಂತೆ ಕೆಲಸ ನಿರ್ವಹಿಸುತ್ತಿದ್ದಾನೆ.

ಚೆಡ್ಡಿ ಶಾಸಕರು ಈ ರೀತಿಯಲ್ಲಿ ಮೊದಲಬಾರಿಗೆ ಗ್ರಾ.ಪಂ.ಗಳನ್ನು ವಶ ಮಾಡಿಕೊಳ್ಳುತ್ತಿದ್ದಾರೆ. ಇವರ ಕಾರಣದಿಂದಾಗಿ ಮೇಲ್ಜಾತಿಯ ಪಾಳೇಗಾರರು ಮತ್ತು ಮೀಸಲು ಕ್ಷೇತ್ರಗಳಿಂದ ಅವರ ಹಿಂಬಾಲಕ ಪುಢಾರಿಗಳು ಗ್ರಾ.ಪಂ.ನ ಆಡಳಿತವನ್ನು ಹಿಡಿಯಲಿದ್ದಾರೆ. ಹಾಗಾಗಿ ಇದೊಂದು ಅಕ್ರಮ ಚುನಾವಣೆಯೇ ಸರಿ. ಪ್ರತಿಭಟಿಸಬೇಕಿದ್ದ ವಿರೋಧ ಪಕ್ಷಗಳು ಹಾಲಪ್ಪನ ಹಲ್ಕಟ್‌ಗಿರಿಯೊಂದನ್ನೇ ಜಪಿಸುತ್ತಾ ಕುಳಿತಿವೆ.

• ಏ.ಪಿ.ಮೇಘರಾಜ



ಚಾಮರಾಜನಗರ: ಕಾಂಗ್ರೆಸ್ ಕೋಟೆಗೆ ಕೇಸರಿ ಕನ್ನ



ಧ್ರುವನಾರಾಯಣ್

ಕಳೆದಸಲ ಜಿಲ್ಲೆಯ 120 ಗ್ರಾ.ಪಂ.ಗಳಲ್ಲಿ ಬಹುತೇಕ ಗ್ರಾ.ಪಂಗಳು ಕಾಂಗ್ರೆಸ್ಸಿನ ಹಿಡಿತದಲ್ಲಿದ್ದವು. ಈಗ ಆಡಳಿತಯಂತ್ರ, ಅಧಿಕಾರ ಬಲ, ಹಣಬಲಗಳನ್ನು ಬಳಸುತ್ತಿರುವ ಬಿಜೆಪಿ ಗ್ರಾಮಮಟ್ಟದಲ್ಲಿ ತನ್ನ ನೆಲೆಕಂಡುಕೊಳ್ಳಲು ಅಸಹ್ಯಕರ ರಾಜಕೀಯವನ್ನು ಶುರುವಿಟ್ಟುಕೊಂಡಾಗಿದೆ.

ಗ್ರಾ.ಪಂ.ಸದಸ್ಯರ ಬಲದಿಂದಲೇ ಜಿಲ್ಲೆಯಲ್ಲಿ ವಿಧಾನಸಭಾ ಚುನಾವಣೆಯಲ್ಲಿ ನಾಲ್ವರು ಕಾಂಗ್ರೆಸ್ ಶಾಸಕರು (ಆರ್.ಧ್ರುವನಾರಾಯಣ್, ಆರ್.ನಾಗೇಂದ್ರ, ಎಚ್.ಎಸ್. ಮಹದೇವಪ್ರಸಾದ್, ಸಿ.ಪುಟ್ಟರಾಜು) ಆಯ್ಕೆಯಾಗಿದ್ದರು. ಮುಂದೆ ಕಾಂಗ್ರೆಸ್‌ನ ಧ್ರುವನಾರಾಯಣರೇ ಸಂಸದರಾದರು. ಆ ಹೊತ್ತಿಗೆ ಹಣದ ಥೈಲಿಯೊಂದಿಗೆ ರಾಜಕಾರಣ ಆರಂಭಿಸಿದ ಬಿಜೆಪಿ ಕೊಳ್ಳೇಗಾಲ ಉಪಚುನಾವಣೆಯಲ್ಲಿ ಬಿಜೆಪಿಯ ನಂಜುಂಡಸ್ವಾಮಿಯನ್ನು ಗೆಲ್ಲಿಸಿಕೊಂಡಿತು. ಈ ಗೆಲುವನ್ನು ಗ್ರಾ.ಪಂ.ಗಳಿಗೂ ವಿಸ್ತರಿಸಲು ಹವಣಿಸುತ್ತಿರುವ ಬಿಜೆಪಿ ಅದಕ್ಕಾಗಿ ಹಣವನ್ನು ನೀರಿನಂತೆ ಖರ್ಚು ಮಾಡುತ್ತಿದೆ. ಅದರ ಪರಿಣಾಮ ಎಂಬಂತೆ ಅವಿರೋಧವಾಗಿ ಆಯ್ಕೆಯಾದ 129 ಸದಸ್ಯರಲ್ಲಿ ಬಿಜೆಪಿಯವರ ಪಾಲು ಸಾಕಷ್ಟಿದೆ. ಸದ್ಯದ ಇಲೆಕ್ಷನ್ ಹಣಾಹಣಿ ನೋಡಿದರೆ ಕಾಂಗ್ರೆಸ್, ಬಿಜೆಪಿ ಸಮಸಮಕ್ಕೆ ಬರಬಹುದು. ಕಾಂಗ್ರೆಸ್ಸಿನ ಶಾಸಕರು, ಸಂಸದ ಅವಿರತವಾಗಿ ಶ್ರಮಿಸಿದರೆ ಮಾತ್ರ ಕಾಂಗ್ರೆಸ್ಸಿನ ಕೋಟೆ ಎಂದಿನಂತೆ ಭದ್ರವಾಗಿ ಉಳಿಯಲಿದೆ.

ಜೆಡಿಎಸ್ ಇಲ್ಲಿ ನಾಲ್ಕು ಪಂಚಾಯ್ತಿಗಳಲ್ಲಿ ಅಧಿಕಾರ ಹಿಡಿಯುವುದು ಗ್ಯಾರಂಟಿ ಇದ್ದು, ಉಳಿದ ಕಡೆ ಅದು ದುರ್ಬಲವಾಗಿದೆ. ಗ್ರಾಮೀಣ ಭಾಗದಲ್ಲಿ ಅಚ್ಚುಕಟ್ಟಾದ ಸಂಘಟನೆ ಹೊಂದಿರುವ ಬಿಎಸ್‌ಪಿ ಹತ್ತಕ್ಕೂ ಹೆಚ್ಚು ಗ್ರಾ.ಪಂಗಳ ಮೇಲೆ ಹಿಡಿತ ಸಾಧಿಸಬಹುದು. ಗ್ರಾಮಮಟ್ಟದಲ್ಲಿರುವ ಬಿಎಸ್‌ಪಿಯ ಮಹಿಳಾ ಕಾರ್ಯಕರ್ತರು ಹುರುಪಿನಿಂದ ಮುನ್ನುಗುತ್ತಿರುವುದೇ ಬಿಎಸ್‌ಪಿಗೆ ಜೀವ ತಂದಿದೆ.

ಬಹಿಷ್ಕಾರ: ಅಸಹ್ಯ ರಾಜಕಾರಣಕ್ಕೆ ಧಿಕ್ಕಾರ

ರಾಜ್ಯಾದ್ಯಂತ ಅಸಹ್ಯಕರ ರೀತಿಯಲ್ಲಿ ನಡೆಯುತ್ತಿರುವ ಈ ಗ್ರಾ.ಪಂ. ಚುನಾವಣೆಗೆ ಧಿಕ್ಕಾರ ಎಂಬಂತೆ, ಕುರಟ್ಟಿ ಹೊಸೂರು ಗ್ರಾ.ಪಂ.ನ 21 ಸ್ಥಾನಗಳ ಜನತೆ ಮತ್ತು ಕುದೇರು ಗ್ರಾ.ಪಂ.ನ 18 ಸ್ಥಾನಗಳ ಜನತೆ ಈ ಚುನಾವಣೆಯನ್ನೇ ಬಹಿಷ್ಕರಿಸುವ ಮೂಲಕ ನೀತಿಗೆಟ್ಟ ರಾಜಕೀಯಕ್ಕೆ ಥೂ ಎಂದು ಉಗಿದಿದ್ದಾರೆ. ಬಹುಶಃ ಇದೇ ಸರಿಯಾದ ಮಾದರಿಯೇನೋ?

• ಚಿಕ್ಕಮಾಳಿಗೆ

ಗುಲ್ಬರ್ಗ: ಭೂಮಿ ಕೊಡಲೊಲ್ಲದ ರೈತರ ಕೈಗೆ ಕೈಕೊಳ ಹಾಕಿದ ಜಿಲ್ಲಾಧಿಕಾರಿ

ವಿತ್ತೆ ಶುರುವಾಗಿದೆ ಸಂಘರ್ಷ. ಇನ್ನೊಮ್ಮೆ ರೈತರು ನಿಂತಿದ್ದಾರೆ. ಕರಾವಳಿಯಲ್ಲಿ ಬಲಾತ್ಕಾರದಿಂದ ಜೆಡ್‌ಗೆ ಭೂಮಿ ಕಿತ್ತುಕೊಂಡಂತೆ ಇಲ್ಲೂ ಕಿತ್ತು ವಿ ಕ್ರೂರ ಸರ್ಕಾರ ಕುತಂತ್ರ ಆರಂಭಿಸಿದೆ. ಆದರೆ ಗೆರೆಯ ರೈತರ ಯಶಸ್ವಿ ಹೋರಾಟದಿಂದ ಸ್ಫೂರ್ತಿ ಯುವ ಗುಲ್ಬರ್ಗದ ರೈತರು ಫಲವತ್ತಾದ ಭೂಮಿ ಕೊಡುವುದಿಲ್ಲ ಎಂದು ಗಟ್ಟಿಯಾಗಿ ಕುಳಿತಿದ್ದಾರೆ. ರ ಸರ್ಕಾರದ ಮೂರ್ಖ ಡಿ.ಸಿ.ಯೊಬ್ಬ ರೈತರ ೀಡಿ ಹಾಕುವ ಮೂಲಕ ಇದು ರೈತ ವಿರೋಧಿ ಎಂದು ಮತ್ತೆ ಸಾಬೀತುಮಾಡಿದ್ದಾನೆ.

ನ್ನಿಯ ಹೊನ್ನಕಿರಣಗಿ, ನದಿಸಿನ್ನೂರ ಗ್ರಾಮದ ಫಲವತ್ತಾದ (ವರ್ಷಕ್ಕೆ ಸುಮಾರು 90 ಕೋಟಿ ಮಿಯ ದವಸ-ಧಾನ್ಯಗಳನ್ನು ಬೆಳೆಯುವ) ರೈತರ ಎಕರೆ ಭೂಮಿಯನ್ನು ರೈತರ ಅನುಮತಿ ಇಲ್ಲದೆ ಬ್ಜಾಗೆ ತೆಗೆದುಕೊಳ್ಳಲು ಚೆಡ್ಡಿ ಸರ್ಕಾರ ಇನ್ನಿಲ್ಲದ ಕಸ ನಡೆಸಿದೆ. ರಾಜ್ಯ ಸರಕಾರಿ ಸ್ವಾಮ್ಯದ ಥರ್ಮಲ್ ಪವರ್ ರೇಶನ್ನಿನ ಘಟಕ (1350 ಮೆಗಾವ್ಯಾಟ್ ವಿದ್ಯುತ್ ಸಲು) ನಿರ್ಮಿಸಬೇಕೆಂದು ಹೊರಟಿರುವ ಸರಕಾರ ಕನಿಷ್ಠ ರಗಳನ್ನೂ ಪಾಲಿಸದೆ ಪೊಲೀಸರ ಮೂಲಕ ದಬ್ಬಾಳಿಕೆ ಸ್ತದೆ.

ಜತೆಯ ದೂರು ದುಮ್ಮಾನಗಳನ್ನು ಸರಕಾರಕ್ಕೆ ತಿಳಿಸಿ ಹೇಳಬೇಕಾದ ಜಿಲ್ಲಾಧಿಕಾರಿ ಆರ್.ವಿಶಾಲ್ ಮಾತ್ರ ಹಠಕ್ಕೆ ಬಿದ್ದು ಭೂಸ್ವಾಧೀನ ಕಲಂ 17(1) ಮತ್ತು 17(4) ತುರ್ತು ಕಾಯ್ದೆ ಅಡಿಯಲ್ಲಿ ು ಸ್ವಾಧೀನಕ್ಕೆ ಮುಂದಾಗಿದ್ದಾನೆ. ಸಂಬಂಧಿಸಿದ ಭೂಮಿಯ ಇಲ್ಲಿನ ರೈತರು ವಿರೋಧಿಸಿದ್ದರು. ರಸ್ತಾ ರೋಖೋ ನಡೆಸಿದ್ದರು. ಚಳವಳಿಗಾರರ ಮೂಲ ಉದ್ದೇಶಗಳನ್ನು ಅರಿತುಕೊಳ್ಳದೆ ಕಾರಿ ಜಿಲ್ಲಾ ಪೊಲೀಸ್ ವರಿಷ್ಠರಿಗೆ ಸೂಚಿಸಿ ರೈತರ ವಿರುದ್ಧ ್ ಮೊಕದ್ದಮೆ ದಾಖಲಿಸುವಂತೆ ಮಾಡಿದ್ದಾನೆ.

ವರೆ ಜಿಲ್ಲಾಧಿಕಾರಿಗಳ ಹಠಮಾರಿ ಧೋರಣೆಗೆ ಜಗ್ಗದ ರೈತರು ಕಾಂತಾ ಎಂಬ ಮಾಜಿ ಮಂತ್ರಿಯ ಮುಖಂಡತ್ವದಲ್ಲಿ ಸರಕಾರದ ಸೆಡ್ಡು ಹೊಡೆದು ನಿಂತಿದ್ದಾರೆ. ಹಠಕ್ಕೆ ಬಿದ್ದವರಂತೆ ಜಿಲ್ಲಾಧಿಕಾರಿ ಶಾಲ್ ಕೂಡ ತಾನೇನು ಕಮ್ಮಿ ಎನ್ನುವಂತೆ ಚಳವಳಿ ನಿರತ ರೈತರನ್ನು ಜಅಟ್ಟಿದ್ದಾನೆ. ಜೈಲಿನಲ್ಲಿಯೂ ಫಿರೋಜಾಬಾದ ಹಾಗೂ ನದಿ ಸಿನ್ನೂರು ಅಬ್ದುಲ್ ಲತೀಫ್ ಜಹಗೀರದಾರ, ಬಸವರಾಜ ಸೋನಾರ



ನೇತೃತ್ವದಲ್ಲಿ ರೈತರು ಉಪವಾಸ ಸತ್ಯಾಗ್ರಹ ಆರಂಭಿಸಿದ್ದರು. ಇದೆಲ್ಲವನ್ನೂ ನೋಡಿ ಸಹಿಸಲು ಆಗದ ಜಿಲ್ಲಾಧಿಕಾರಿ ಮಾತ್ರ ಸರ್ವಾಧಿಕಾರಿಯಂತೆ ವರ್ತಿಸಿ ಬಸವರಾಜ ಸೋನಾರ ಹಾಗೂ ಅಬ್ದುಲ್ ಲತೀಫ್ ಜಹಗೀರದಾರ ಇಬ್ಬರನ್ನೂ ಬಲವಂತವಾಗಿ ಜೈಲಿನಿಂದ ಕೈಕೊಳ ಹಾಕಿತರುವ ಮೂಲಕ ರೈತರನ್ನು ಮಾನಸಿಕವಾಗಿ ಕುಗ್ಗಿಸುವ ಪ್ರಯತ್ನದಲ್ಲಿ ತೊಡಗಿದ್ದಾನೆ.




ಹಿಂದೆ ಗುಲಬರ್ಗಾದ ಜಿಲ್ಲಾಧಿಕಾರಿಯಾಗಿದ್ದ ಕೆ.ಎಸ್. ಸತ್ಯಮೂರ್ತಿ ಸದರಿ ಭೂಮಿ ಅತ್ಯಂತ ಫಲವತ್ತಾದ ಭೂಮಿಯಾಗಿರುವುದರಿಂದ ಬೇರೆ ಕಡೆ ಜಮೀನು ಹುಡುಕೋಣ ಎಂದು ಸರ್ಕಾರದ ಕಂದಾಯ ಇಲಾಖೆಯ ಕಾರ್ಯದರ್ಶಿಗೆ ಪತ್ರ ಬರೆದಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಲಕ್ಷ್ಮಣ ಸವದಿ ಕೂಡ ಬೇರೆ ಕಡೆ ಜಾಗ ನೋಡಿ ಎಂದು ಸೂಚಿಸಿದ್ದರು. ಆದರೆ ಇಂದಿನ ಜಿಲ್ಲಾಧಿಕಾರಿ ಆರ್. ವಿಶಾಲ್ ಮಾತ್ರ ರೈತರ ತೀವ್ರ ಪ್ರತಿಭಟನೆಯ ನಂತರವೂ ಭೂಸ್ವಾಧೀನ ತುರ್ತು ನಿಯಮದಡಿ ತನ್ನ ಕಬ್ಜಾಗೆ ತೆಗೆದುಕೊಳ್ಳುವ ಹುನ್ನಾರದಲ್ಲಿ ತೊಡಗಿದ್ದಾನೆ.

ಬಿಜೆಪಿಗಳ ಚೆಡ್ಡಿ ಸರಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಲಾಗಾಯ್ತಿನಿಂದ ಅದು ರೈತರನ್ನು ಹಿಗ್ಗಾ-ಮುಗ್ಗಾ ಕಾಡುತ್ತಿದೆ. ಅವರ ಫಲವತ್ತಾದ ಭೂಮಿಯನ್ನು ಕಬಳಿಸಿಕೊಂಡು ಅಕ್ಷರಶಃ ಅವರನ್ನು ಬೀದಿಪಾಲು ಮಾಡುತ್ತಿದೆ. ರೈತರ ಮೇಲೆ ಹಾವೇರಿಯಲ್ಲಿ ಗೋಲಿಬಾರ್ ಮಾಡಿದ, ಕರಾವಳಿಯಲ್ಲಿ ಬಲವಂತದಿಂದ ಭೂ ಸ್ವಾಧೀನ ನಡೆಸಿರುವ, ದಾವಣಗೆರೆ ರೈತರಿಗೆ ಕೈಕೊಳ ತೊಡಿಸಿ ಮೆರೆಸಿರುವ ಧೂರ್ತ ಸರಕಾರ ಗುಲಬರ್ಗಾದಲ್ಲಿಯೂ ತನ್ನ ಕರಾಮತ್ತನ್ನು ಪ್ರಕಟಿಸಿದೆ.

ರೈತರ ತೀವ್ರ ಪ್ರತಿಭಟನೆಯನ್ನೂ ಕಡೆಗಣಿಸಿ ಆರ್. ವಿಶಾಲ್ ಸರ್ವಾಧಿಕಾರಿಯಂತೆ ವರ್ತಿಸಿದ್ದೇ ಆದರೆ ಸರಕಾರದ ಮಾನ ಮೂರಾಬಟ್ಟೆಯಾಗುವುದರಲ್ಲಿ ಯಾವುದೆ ಅನುಮಾನವಿಲ್ಲ.

• ವಿಶ್ವಾರಾಧ್ಯ ಸತ್ಯಂಪೇಟೆ



ಪ್ರಭುತ್ವಕ್ಕೆ ಪತ್ರಾವ್ರೊ ಸವಾಲುಗಳು

ಕಳೆದ ವಾರ 'ಮಂಗಳೂರು ಎಸ್‌ಇಜೆಡ್ ಗೂಂಡಾಗಿರಿ: ಬೀದಿಗೆ ಬಿದ್ದ ರೈತ' ಎಂಬ ವರದಿಯನ್ನು ಪ್ರಕಟಿಸಿದ್ದೆವು. ಗೂಂಡಾಗಳನ್ನು ತರೆತಂದ ಸರ್ಕಾರಿ ಅಧಿಕಾರಿಗಳು ರೈತ ಗ್ರೆಗರಿ ಪತ್ರಾವ್ರೊ ಅವರ ಮನೆಯನ್ನು ಧ್ವಂಸ ಮಾಡಿದ್ದನ್ನು ಪ್ರಶ್ನಿಸಿದ್ದೆವು.

ಈಗ ಬೀದಿಗೆ ಬಿದ್ದಿರುವ ಪತ್ರಾವ್ರೊ ಕುಟುಂಬ ಎತ್ತಿರುವ ಪ್ರಶ್ನೆಗಳಿಗೆ ಸರ್ಕಾರ ಉತ್ತರಿಸಲೇಬೇಕಿದೆ. ಏಕೆಂದರೆ ಈ ಪ್ರಶ್ನೆಗಳು ಭೂಸ್ವಾಧೀನದ ಹೆಸರಲ್ಲಿ ಸರ್ಕಾರಗಳು ನಡೆಸುತ್ತಿರುವ ಭೂದರೋಡೆಯಿಂದ ಬೀದಿಗೆ ಬಿದ್ದಿರುವ ಲಕ್ಷಾಂತರ ರೈತರ, ಆದಿವಾಸಿಗಳ ಪ್ರಶ್ನೆಗಳೇ ಆಗಿವೆ. ಈ ಪ್ರಶ್ನೆಗಳ ಜೊತೆಗೆ ಪತ್ರಿಕೆ ಕೂಡ ಹಲವಾರು ತಕರಾರುಗಳನ್ನು ಇಲ್ಲಿ ದಾಖಲಿಸುತ್ತಿದೆ.

ಯಾವ ಕಾನೂನಿನ ಯಾವ ಸೆಕ್ಷನ್ ಆಧಾರದ ಮೇಲೆ ಪತ್ರಾವ್ರೊ ಮನೆಯನ್ನು ಕೆಡವಲಾಯಿತು? ಹಾಗೆ ನೋಡಿದರೆ ತಹಶೀಲ್ದಾರ್ ಮಂಜುನಾಥನ ಬಳಿ ಕೋರ್ಟ್ ಆದೇಶದ ಕಾಪಿಯೇ ಇರಲಿಲ್ಲ. ಅಂದರೆ ಕೋರ್ಟಿನ ಆದೇಶ ಬರುವ ಮೊದಲೇ ಈ ದುಷ್ಕೃತ್ಯ ಎಸಗಿರುವ ತಹಶೀಲ್ದಾರ್ ಮಂಜುನಾಥ ಮತ್ತು ಕೆಐಎಡಿಬಿ ಅಧಿಕಾರಿಗಳನ್ನು ಗೂಂಡಾಗಳು ಎಂದು ಪರಿಗಣಿಸಿ ಜೈಲಿಗೆ ಹಾಕಬೇಕಾಗುತ್ತದೆ. ಆದರೆ ಉದ್ಯಮಿಗಳ ಬಾಲಬಡುಕನಂತಿರುವ ಗೃಹ ಸಚಿವ ವಿ.ಎಸ್. ಆಚಾರ್ಯನ ಪೊಲೀಸ್ ಇಲಾಖೆಯಿಂದ ಇದನ್ನು ನಿರೀಕ್ಷಿಸುವುದು ಮೂರ್ಖತನವೇ ಸರಿ.

ಕೋರ್ಟು ಪತ್ರಾವ್ರೊ ಜಮೀನನ್ನು ಭೂಸ್ವಾಧೀನ ಮಾಡಿಕೊಳ್ಳಲು ತೀರ್ಪು ನೀಡಿದ್ದು ನಿಜ. ಆದರೆ ಪತ್ರಾವ್ರೊ ಕುಟುಂಬಕ್ಕೆ ಈ ತೀರ್ಪಿನ ಆದೇಶ ತಲುಪುವ ಮೊದಲೇ ತರಾತುರಿಯಲ್ಲಿ ಗೂಂಡಾಶೈಲಿಯಲ್ಲಿ ಅವರ ಮನೆಯನ್ನು ಧ್ವಂಸ ಮಾಡಿದ ತಹಶೀಲ್ದಾರ್, ಕೆಐಎಡಿಬಿ ಅಧಿಕಾರಿಗಳು ಯಾರ ಹಿತ ಕಾಯುತ್ತಿದ್ದಾರೆ? ಜಂಗಲ್ ಮಹಲ್‌ನಲ್ಲಿ ಸಿ.ಆರ್.ಪಿ.ಎಫ್.ನವರು, ಪೊಲೀಸರು, ಸರ್ಕಾರಗಳು ಟಾಟಾ, ಎಸ್ಸಾರ್ ಸ್ಟೀಲ್ಸ್, ವೇದಾಂತ ಸ್ಟೀಲ್ ಇತ್ಯಾದಿ ಲೂಟಿಕೋರರ ಹಿತ ಕಾಯುತ್ತಿರುವಂತೆ ಇಲ್ಲಿಯೂ ಯಡಿಯೂರಪ್ಪನ ಸರ್ಕಾರ, ವಿರೋಧ ಪಕ್ಷಗಳು, ಪೊಲೀಸರು, ಕೆಐಎಡಿಬಿ ಎಲ್ಲರೂ ಎಂ.ಆರ್.ಪಿ.ಎಲ್, ಒ.ಎನ್.ಜಿ.ಸಿ; ಇನ್ಫೋಸಿಸ್, ವಿಪ್ರೋಗಳ ಹಿತ ಕಾಯುತ್ತಿದ್ದಾರಷ್ಟೇ.

ಹೋಗಲಿ ಕೋರ್ಟಿನ ತೀರ್ಪಿನ ಆಧಾರದ ಮೇಲೆಯೇ ಪತ್ರಾವ್ರೊ ಕುಟುಂಬವನ್ನು ಒಕ್ಕಲೆಬ್ಬಿಸಿದ್ದಾರೆ ಅಂದುಕೊಳ್ಳೋಣ. ಆದರೆ ಯಾವುದೇ ಮುನ್ಸೂಚನೆ ನೀಡದೇ ಮನೆ ಧ್ವಂಸ ಮಾಡಲು ಕೋರ್ಟು ಹೇಳಿತ್ತೆ? ಗೂಂಡಾಗಳ ನೆರವು ಪಡೆದುಕೊಳ್ಳಲೂ ಘನ ಕೋರ್ಟು ಅನುಮತಿ ನೀಡಿತ್ತೆ? ಮನೆ ಸಾಮಾನುಗಳನ್ನು ಮಹಜರು ಮಾಡದೇ ಹೊತ್ತೊಯ್ದು ಅದ್ಯಾವನೋ ಗೂಂಡಾನ ಮನೆಯಲ್ಲಿ ಅವನ್ನು ಇಡಲೂ ಕೋರ್ಟು ತೀರ್ಪಿನಲ್ಲಿ ತಿಳಿಸಿತ್ತೆ? ತಹಶೀಲ್ದಾರ್ ಮಂಜುನಾಥನಿಂದ, ಕೇಡಿ ಕೆಐಎಡಿಬಿ ಅಧಿಕಾರಿಗಳಿಂದ ಉತ್ತರಗಳು ಬಾರವು. ಏಕೆಂದರೆ ಇವರೆಲ್ಲ ಬಂಡವಾಳಶಾಹಿಗಳ ನೆರಳಿನಲ್ಲಿ ಬದುಕುತ್ತಿರುವ ಸರ್ಕಾರ ಎಂಬ ಕ್ರೂರಸೈನ್ಯದ ಕಾಲಾಳುಗಳಷ್ಟೇ.

ಕೋರ್ಟು ಇಂತಹ ಗೂಂಡಾಗಿರಿಯನ್ನು ಸಮರ್ಥಿಸುವುದಿಲ್ಲ. ಆದರೆ ಈಗ ತನ್ನ ಆದೇಶ ತಲುಪುವ ಮೊದಲೇ ತಹಶೀಲ್ದಾರ್, ಕೆಐಎಡಿಬಿ ಅಧಿಕಾರಿಗಳು ಪತ್ರಾವ್ರೊರ ಮನೆಯನ್ನು ಧ್ವಂಸ ಮಾಡಿದ್ದನ್ನು ಮಾಧ್ಯಮಗಳಿಂದ ತಿಳಿದಿರಬಹುದಾದ ಕೋರ್ಟು ಇನ್ನೂ ಸುಮ್ಮನಿರುವುದೇಕೆ? ಪತ್ರಾವ್ರೊರವರಿಗೆ ಕೋರ್ಟ್ ಆದೇಶ ಇನ್ನೂ ತಲುಪಿಲ್ಲ. ತಲುಪಿದ ನಂತರ ಮೇಲ್ಮನವಿ ಸಲ್ಲಿಸಲು ಅವರಿಗೆ ತಿಂಗಳು ಕಾಲ ಅವಕಾಶವಿದೆ. ಹಾಗಿದ್ದೂ ಭೂಸ್ವಾಧೀನ ಮಾಡಿದ್ದು ಕೋರ್ಟನ್ನೇ ಅವಮಾನಿಸಿದಂತಾಗುತ್ತದೆ.

ಅಂದಂತೆ, ದುಷ್ಟ ತಹಶೀಲ್ದಾರ್ ಮಂಜುನಾಥ್ ತನಗೆ ಕೋರ್ಟ್ ಆದೇಶ ತಲುಪಿದ ನಂತರವೇ ತಾನು ಭೂಸ್ವಾಧೀನ ಮಾಡಿದ್ದು ಎಂದು ರೀಲು ಬಿಡುತ್ತಿದ್ದಾನೆ. ಆದರೆ ಸತ್ಯ ಬೇರೆಯೇ ಇದೆ. 28.4.2010 ರಂದು ಪತ್ರಾವ್ರೊರ ಮನೆ ಧ್ವಂಸ ಮಾಡಿದ ತಹಶೀಲ್ದಾರ್‌ಗೆ ಹಲವಾರು ಜನ ಕೋರ್ಟ್ ಆದೇಶ ತೋರಿಸಿ ಎಂದು ಕೇಳಿದ್ದಾರೆ. ಇಲ್ಲದ್ದನ್ನು ಎಲ್ಲಿಂದ ತರುತ್ತಾನೆ? ಮುಂದೆನೂ ಈ ಪ್ರಶ್ನೆ ಏಳಬಹುದು ಎಂಬ ಭಯದಲ್ಲಿ 29.4.2010 ರಂದು ಅಂದರೆ ಮನೆ ಧ್ವಂಸ ಮಾಡಿದ ಮರುದಿನದಂದು ನ್ಯಾಯಾಲಯದ ಆದೇಶದ ಪ್ರತಿ ಕೋರಿ ಉಚ್ಚ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದಾನೆ ತಹಶೀಲ್ದಾರ್ ಮಂಜುನಾಥ.

ಹೀಗಾಗಿ ಈ ಅಕ್ರಮ ಭೂಸ್ವಾಧೀನವನ್ನು ಕೋರ್ಟು ತಡೆಹಿಡಿಯಬೇಕು. ಪತ್ರಾವ್ರೊರಿಗೆ ಮೇಲ್ಮನವಿ ಸಲ್ಲಿಸಲು ಅವಕಾಶ ನೀಡಬೇಕು. ತುರ್ತಾಗಿ ಪತ್ರಾವ್ರೊ ಕುಟುಂಬಕ್ಕೆ ಪರಿಹಾರ ನೀಡಬೇಕು. ತಹಶೀಲ್ದಾರ್, ಕೆಐಎಡಿಬಿ ಅಧಿಕಾರಿಗಳು ಮತ್ತು ಗೂಂಡಾಗಳಿಗೆ ಶಿಕ್ಷೆ ವಿಧಿಸಬೇಕು.

ಸರ್ವತಂತ್ರ, ಸ್ವತಂತ್ರ, ಸಾರ್ವಭೌಮ ದೇಶದ ಕೋರ್ಟಿನಲ್ಲಿ ಇಂಥದ್ದು ಆಗುತ್ತದೆಯಾ? ಕಾಯಬೇಕು ಅನ್ನುತ್ತಾರೆ ಪಂಡಿತರು.

ಎಷ್ಟು ದಿನ ಕಾಯುವುದು? ಈ ಪ್ರಶ್ನೆ ಈಗ ಎಲ್ಲರದಾಗಬೇಕಿದೆ....

• ಪಿ.ಕೆ. ಮಲ್ಲನಗೌಡರ್

ಕುಂದಾಪುರ-ತೀರ್ಥಹಳ್ಳಿ: ಉದಯ ಶೆಟ್ಟಿ, ಪ್ರಕಾಶ್ ಎಂಬ ಚೋರ್ ಜೋಡಿ...

ಮ ಇಬ್ಬರು ಕಳ್ಳರ ಕತೆ. ನನಗೆ ನೀನು, ನಿನಗೆ ನಾನು ಎಂದು ಒಬ್ಬರು ಸಹಕರಿಸುತ್ತ ಗೋಲ್‌ಮಾಲ್ ಮಾಡುತ್ತಿದ್ದಾರೆ. ಕುಂದಾಪುರದ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ATS ಆಗಿರುವ ಶೆಟ್ಟಿ. ಇನ್ನೊಬ್ಬ ತೀರ್ಥಹಳ್ಳಿ ಜನರಿಗೆ ಕಲರ್ ಕಲರ್ ಹಾಕುತ್ತಲೇ ಇರುವ ಪ್ರಕಾಶ್ ಅಲಿಯಾಸ್ ಚತುರ ಪ್ರಕಾಶ....

ದಾಪುರದ ಕೆಎಸ್‌ಆರ್‌ಟಿಸಿ ಡಿಪೋದಲ್ಲಿ ಐದು ವರ್ಷಗಳಿಂದ ಕುಳಿತಿರುವ ಉದಯ ಶೆಟ್ಟಿಗೆ ಬರುವ ಸಂಬಳ 16 ಇದು ಆತನಿಗೆ ಜುಜುಬಿಯಂತೆ. ಯಾಕೆಂದರೆ ಈತ ಕಂಡಕ್ಟರುಗಳಿಂದ ವಸೂಲು ಮಾಡುವ ಮಂತ್ಲಿ ಮಾಮೂಲಿ ದರೆ ಲಕ್ಷ ಮಾತ್ರ! ಮಾಮೂಲಿ ಕೊಡದೇ ಹೋದರೆ ಯರ್‍ರಾಬಿರ್‍ರಿ ಂಜ್ ಮಾಡಿ ಕಂಡಕ್ಟರು, ಡ್ರೈವರುಗಳನ್ನು ಗೋಳು ಹೊಯ್ದುಕೊಳ್ಳುತ್ತಾನೆ. ಪುರ ಡಿಪೋದಲ್ಲಿರುವ 250 ಕಂಡಕ್ಟರುಗಳು ಮಾಸಿಕ ತಲಾ 450 ನ್ನು ಮತ್ತು 300 ಡ್ರೈವರುಗಳು ಮಾಸಿಕ ತಲಾ 500 ರೂ.ಗಳನ್ನು ಈ ಶೆಟ್ಟಿಯ ಮಡಿಲಿಗೆ ಹಾಕಲೇಬೇಕಾದಂತಹ ಅನಿವಾರ್ಯತೆಯಿದೆ. ಬಸ್‌ಗಳಿಗೆ ಕಂಡಕ್ಟರುಗಳಾಗಿ ಹೋಗಬೇಕೆಂದರೆ 5 ರಿಂದ 10 ನ್ನು ಮೊದಲೇ ಇವನಿಗೆ ಪಾವತಿಸಲೇಬೇಕು. ಹೊಸ ರಾಜಹಂಸ ಸುರು ಮಾಡಿದಾಗ, 5-10 ಸಾವಿರ ತೆತ್ತರೆ ಡ್ರೈವರ್, ಗಳಿಗೆ ಪರ್ಮನೆಂಟು ಲೈನ್ನು ಕೊಡುತ್ತಾನೆ. ಹೀಗೆ ಡ್ರೈವರ್, ಗಳಿಂದ ವಸೂಲಿ ಕೆಲಸ ಮಾಡಲು ತನ್ನ ಮಿತ್ರ ಕಂಡಕ್ಟರ್ ನನ್ನು ನೇಮಿಸಿಬಿಟ್ಟಿದ್ದಾನೆ.

ಹಿಂದೆ 'ಲೋಬೊ' ಮ್ಯಾನೇಜರ್ ಇರುವಾಗ ಕುಂದಾಪುರ ಪ್ರಥಮ ಸ್ಥಾನದಲ್ಲಿತ್ತು, ಈಗ ಉದಯ ಶೆಟ್ಟಿ ಅದನ್ನು ಸ್ಟಿಗೆ ತಂದು ಕೂಡ್ರಿಸಿದ್ದಾನೆ. ಬಸ್‌ಗಳಿಗೆ ತಿಗಣೆ ಎಣ್ಣೆ ಂದು ನಿಗದಿಯಾಗಿದ್ದ ಹಣವನ್ನೂ ಬಿಡದ ಉದಯ ಶೆಟ್ಟಿ ಪನಿವೇದನೆ ಮಾಡಿಕೊಳ್ಳಲು ಆಗಾಗ ಸತ್ಯನಾರಾಯಣ ಮಾಡುತ್ತಲೇ ಇರುತ್ತಾನೆ.




ಉದಯಶೆಟ್ಟಿ

ಈತನ ಕಿರುಕುಳಕ್ಕೆ ಡಿಪೋ ಮ್ಯಾನೇಜರುಗಳ್ಯಾರು ಇಲ್ಲಿ ಒಂದು ವರ್ಷವೂ ಉಳಿಯುತ್ತಿಲ್ಲ. ಈಗಿನ ಮ್ಯಾನೇಜರ್ ಕಾಮತ್ ಪ್ರಾಮಾಣಿಕರಾಗಿದ್ದು, ಅವರನ್ನು ದಾರಿ ತಪ್ಪಿಸಲು ಈ ಉದಯ ಶೆಟ್ಟಿ ನೋಡುತ್ತಿದ್ದಾನೆ.

ಯಾರೀತ ಚೋರಶೆಟ್ಟಿ?

ಸಾಹೇಬರಕಟ್ಟೆಯ ಮಂಜಯಶೆಟ್ಟಿಯವರ ಸುಪುತ್ರನಾದ ಉದಯ ಶೆಟ್ಟಿ ಡ್ರೈವರ್, ಕಂಡಕ್ಟರುಗಳಿಂದ ದೋಚಿದ ದುಡ್ಡಲ್ಲಿ ಸಾಲಿಗ್ರಾಮದಲ್ಲಿ 24 ಲಕ್ಷ ಮೌಲ್ಯದ ಮನೆ ಖರೀದಿಸಿದ್ದಾನೆ. ಹಿಂದೆ ಚಿಕ್ಕಮಗಳೂರು ಡಿಪೋದಲ್ಲಿದ್ದಾಗ ಅಪರಾತಪರಾ ಮಾಡಿ ಸಿಕ್ಕುಬಿದ್ದು ಆರು ತಿಂಗಳು ಅಮಾನತ್ತಾಗಿದ್ದ. ಕುಂದಾಪುರ ಡಿಪೋದಲ್ಲಿ ಈತನ ತಪ್ಪಿಗಾಗಿ ಟಿ.ಸಿ. ಕೃಷ್ಣಮೂರ್ತಿ, ಕಂಡಕ್ಟರ್ ರಾಮಕೃಷ್ಣ ಅಮಾನತ್ತಾಗಿದ್ದರು. ಅಮಾನತ್ತು ಮಾಡಿದ್ದ ಡಿಟಿಓ ಪ್ರಭಾಕರ ರೆಡ್ಡಿ ವರ್ಗಾವಣೆ ಆಗುತ್ತಿದ್ದಂತೆ ಮತ್ತೆ ಕೃಷ್ಣಮೂರ್ತಿ, ರಾಮಕೃಷ್ಣರನ್ನು ಡ್ಯೂಟಿಗೆ ಕರೆತಂದಿದ್ದು ಇದೇ ಚೋರಶೆಟ್ಟಿ. ಕುಂದಾಪುರ, ತೀರ್ಥಹಳ್ಳಿ, ಬೆಂಗಳೂರು ಮಾರ್ಗದಲ್ಲಿ ಹತ್ತಾರು ವರ್ಷಗಳಿಂದ ಕೆಲಸ ಮಾಡುತ್ತಿರುವ ಕಂಡಕ್ಟರ್ ರಾಮಕೃಷ್ಣ ಉದಯ ಶೆಟ್ಟಿಯ ಮಾಮೂಲಿಯನ್ನು ನಿಯತ್ತಾಗಿ ವಸೂಲಿ ಮಾಡಿಕೊಡುತ್ತಾನೆ. ಈ ಕಂಡಕ್ಟರ್ ರಾಮಕೃಷ್ಣನ ಮೂಲಕ ಕುಂದಾಪುರ, ತೀರ್ಥಹಳ್ಳಿಗಳಲ್ಲಿ ಬಡ್ಡಿ ವ್ಯವಹಾರ ನಡೆಸುತ್ತಿರುವ ಉದಯ ಶೆಟ್ಟಿಗೂ ತೀರ್ಥಹಳ್ಳಿಯ ದುರ್ಗಾಂಬ ಏಜೆಂಟ್ ಆಗಿ ಕೆಲಸ ಮಾಡುತ್ತಿರುವ ಚೋರ್ ಚತುರ ಪ್ರಕಾಶನಿಗೂ ಭಾರಿ ಸ್ನೇಹ.



ಪ್ರಕಾಶ್

ಕೆಎಸ್‌ಆರ್‌ಟಿಸಿಯ ಹಿರಿಯ ಅಧಿಕಾರಿಗಳು ತುರ್ತು ಕ್ರಮ ಕೈಗೊಳ್ಳದಿದ್ದರೆ ಉದಯ ಶೆಟ್ಟಿ ಬಸ್‌ಗಳನ್ನೇ ಮಾರಿಬಿಡಬಲ್ಲ.

• ವರದಿಗಾರ

ೀರ್ಥಹಳ್ಳಿಯ ಮುಗ್ಧ ಜನರಿಗೆ 10-15 ಲಕ್ಷ ಟೋಪಿ ಹಾಕಿದ ಕುಖ್ಯಾತಿ ಈ 'ಚತುರ' ಪ್ರಕಾಶನದು. ಹಿಂದೆ ಅಂಚೆ ಇಲಾಖೆಯಲ್ಲಿ ಅಪರಾತಪರಾ ಕ್ಕೆ ಡಿಸ್‌ಮಿಸ್‌ಗೊಂಡ ಪ್ರಕಾಶ ಈಗ್ಗೆ ನಾಲ್ಕು ವರ್ಷಗಳ ಹಿಂದೆ ಕೆಎಸ್‌ಆರ್‌ಟಿಸಿ ಏಜೆನ್ಸಿ ತೆಗೆದುಕೊಂಡಿದ್ದ. ತೆಗೆದುಕೊಂಡ ಮೂರೇ ತಿಂಗಳಲ್ಲಿ ಗೋಲ್‌ಮಾಲ್ ಮಾಡಿ ಹೊರದಬ್ಬಿಸಿಕೊಂಡಿದ್ದ. ತೀರ್ಥಹಳ್ಳಿಯಲ್ಲಿ ರಾತ್ರಿ halting ಮಾಡಿದ್ದ ಬಸ್‌ಗಳ ಡ್ರೈವರ್‌ಗಳಿಗೆ ಹೆಂಡ ಕುಡಿಸಿ ಸುತ್ತಿದ್ದ ಪ್ರಕಾಶ, ಬೇರೆ ಡ್ರೈವರನನ್ನು ಬುಕ್ ಮಾಡಿ halt ಆದ ಬಸ್ಸನ್ನು ಮದುವೆ ಟ್ರಿಪ್‌ಗಳಿಗೆ ಓಡಿಸುತ್ತಿದ್ದ. ಇದನ್ನು ಪತ್ತೆಹಚ್ಚಿದ ನಿರ್ದೇಶಕ ನಾರ್ ಈ ಪ್ರಕಾಶನನ್ನು ಏಜೆನ್ಸಿಯಿಂದ ಓಡಿಸಿದ್ದರು.

ಂದೆ ತೀರ್ಥಹಳ್ಳಿಯಲ್ಲಿ ಶ್ರೀರಾಮ್ ಚಿಟ್ಸ್ ಎನ್ನುವ ಏಜೆನ್ಸಿ ಮಾಡಿ ನೂರಾರು ಬಡಪಾಯಿ ಹೆಂಗಸರಿಗೆ ನಕಲಿ ಕಲರ್ ಜೆರಾಕ್ಸ್ ಬಾಂಡ್ ನೀಡಿ ಮಾಡಿದ್ದಾನೆ. ಜೊತೆಗೆ ಆರ್.ಡಿ. ಹಣ ಸಂಗ್ರಹ ಮಾಡಿ ಸಾವಿರಾರು ಜನರಿಗೆ ನಾಮ ಹಾಕಿದ್ದಾನೆ. ಈತನ ಮೇಲೆ ಸದ್ಯ ಸುಮಾರು 30 ಚೆಕ್ ಕೇಸುಗಳಿವೆ.

ಈ ಪ್ರಕಾಶ ಕುಂದಾಪುರದ ಎ.ಟಿ.ಎಸ್. ಉದಯ ಶೆಟ್ಟಿಯ ಜೊತೆ ಸೇರಿ, ಕುಂದಾಪುರದಿಂದ ತೀರ್ಥಹಳ್ಳಿಯ ಮಾರ್ಗವಾಗಿ ಬೆಂಗಳೂರಿಗೆ ಪ್ರತಿ ಬಸ್ಸಿನಲ್ಲಿ ಹತ್ತು ಸೀಟು ಬ್ಲಾಕ್ ಮಾಡುತ್ತ ಕಾಸು ಮಾಡುತ್ತಿದ್ದ. ಉದಯ ಶೆಟ್ಟಿಯ ಸಹಾಯದಿಂದ ಮತ್ತೀಗ ತೀರ್ಥಹಳ್ಳಿ ಸಮೀಪದ ನಲ್ಲಿ ಏಜೆನ್ಸಿ ಪಡೆದಿದ್ದಾನೆ. ಇದಿನ್ನೂ ನಿರ್ದೇಶಕ ರಾಜಕುಮಾರ್‌ರವರ ಗಮನಕ್ಕೆ ಬಂದಿಲ್ಲ.

ಗೆ, ಕೆಎಸ್‌ಆರ್‌ಟಿಸಿಗೆ ಟೋಪಿ ಹಾಕುತ್ತಿರುವ ಈ ಚೋರ್ ಜೋಡಿಗೆ ಪಾಠ ಕಲಿಸುವವರಾರು?

2 ನಕ್ಸಲ್ ಚಳವಳಿ ಮತ್ತು ಗೋವಿಂದ 'ವಿಲಾಸ'

ಜನರಿದ್ದಾರೆ? ಇಂಥಾ ಚಳವಳಿಯ ಕಾರ್ಯಶೈಲಿ, ಸಿದ್ಧಾಂತಗಳನು ಎಂಬ ಸಹಜ ಕುತೂಹಲವಿದ್ದವರ ತಿಳಿವಳಿಕೆಯನ್ನು ಹೆಚ್ಚಿಸಲು ಈ ಲೇಖನ ಸಹಾಯ ಮಾಡಿತೆಂಬುದರಲ್ಲಿ ಎರಡು ಮಾತಿಲ್ಲ. ನಕ್ಸಲರನ್ನು ಬೆಂಬಲಿಸಲಾಗಲೀ ಅಥವಾ ನಕ್ಸಲರನ್ನು ಸಕಾರಣವಾಗಿ ಮತ್ತು ಪರಿಣಾಮಕಾರಿಯಾಗಿ ವಿರೋಧಿಸಲಾಗಲೀ ಈ ತಿಳಿವಳಿಕೆ ಕನ್ನಡದ ಮಟ್ಟಿಗೆ ಅಗತ್ಯವಾಗಿತ್ತು!

ಆದರೆ ಅದಕ್ಕೆ ಕನ್ನಡದ ಒಂದು ಬಗೆಯ ಬುದ್ಧಿಜೀವಿಗಳು ತೋರಿರುವ ಪ್ರತಿಕ್ರಿಯೆ ಅತ್ಯಂತ ವಿಷಾದಕರವೂ ನಿರಾಶದಾಯಕವೂ ಆಗಿದೆ. ಅದರಲ್ಲೂ ಕನ್ನಡದ ಹಿರಿಯ ಬುದ್ಧಿಜೀವಿಗಳಾದ ಪ್ರೊ. ಜಿ.ಕೆ. ಗೋವಿಂದರಾಯರು 'ಪ್ರಜಾವಾಣಿ'ಯಲ್ಲಿ ನೀಡಿರುವ ಉದ್ದನೆಯ ಪ್ರತಿಕ್ರಿಯೆಯು ಅತ್ಯಂತ ವಿಷಾದದ ಜೊತೆಗೆ ಬೇಸರವನ್ನೂ ಮೂಡಿಸುತ್ತದೆ. ಇದಕ್ಕೆ ಕಾರಣ ಅವರು ನಕ್ಸಲ್ ಚಳವಳಿಯನ್ನು ವಿರೋಧಿಸುತ್ತಾರೆ ಎಂಬುದಲ್ಲ, ಹಾಗೆ ನೋಡಿದರೆ ಈಗ ಛತ್ತೀಸ್‌ಘಡ್‌ನಲ್ಲಿ ನಡೆಯುತ್ತಿರುವ ಮಾವೋವಾದಿ ಚಳವಳಿ ಹಲವಾರು ವಿಮರ್ಶೆಗೆ ಅರ್ಹವಾಗಿದೆ ಎಂಬುದೇ ಈ ಲೇಖಕನ ಅಭಿಪ್ರಾಯವೂ ಸಹ. ಇದರ ಬಗ್ಗೆ ವಿಶದವಾಗಿ ನಾನು ಇದೇ ಅಂಕಣದಲ್ಲಿ "ನಕ್ಸಲ್ ದಾಳಿ ಕ್ರೂರ, ಖಂಡನೀಯ... ಆದರೆ" ಎಂಬ ಶೀರ್ಷಿಕೆಯಲ್ಲಿ ಬರೆದಿದ್ದೇನೆ. ಹಾಗೆ ನೋಡಿದರೆ ಸ್ವತಃ ಆರುಂಧತಿ ರಾಯ್ ಅವರಿಗೂ ನಕ್ಸಲ್ ಚಳವಳಿಯ ಬಗ್ಗೆ ಆಳವಾದ ಮೆಚ್ಚುಗೆಯ ನಡುವೆ ಗಂಭೀರ ಅನುಮಾನಗಳು ಮತ್ತು ಪ್ರಶ್ನೆಗಳೂ ಇರಲಿಕ್ಕೆ ಸಾಕು.

ಆದರೆ ನಮ್ಮ ಗೋವಿಂದರಾಯರು ಎತ್ತುವ ಪ್ರಶ್ನೆಗಳ ಹಿಂದೆ ನಕ್ಸಲ್ ಚಳವಳಿಯ ಬಗ್ಗೆ ಮಾತ್ರವಲ್ಲ, ಈ ದೇಶದ ಆದಿವಾಸಿ, ದಮನಿತ ಜನತೆಯ ಬದುಕಿನ ಬಗೆಗೆ ಅವರು ಮಾಡುತ್ತಿರುವ ವಿಮರ್ಶೆಯ ತೀವ್ರತೆಗೆ ಬೇಕಾದಷ್ಟು ತಿಳಿವಳಿಕೆಯಾಗಲೀ, ಬದ್ಧತೆಯಾಗಲೀ ಕಾಣುವುದಿಲ್ಲ.



ಗೋವಿಂದರಾಯರಿಗೆ ಅವರು ನಂಬುವ ಸಿದ್ಧಾಂತದಂತೆ ಜನರ ಬದುಕು ಅಮೂರ್ತವಾದದ್ದೇ. ಆದ್ದರಿಂದಲೇ ತಮ್ಮ ಲೇಖನದಲ್ಲಿ ಅವರು "ಸರ್ವಾಧಿಕಾರ ಮೂರ್ತರೂಪವಾದದ್ದಾದರೂ ಪ್ರಜಾತಂತ್ರ ಅಮೂರ್ತ ಆದರ್ಶವೆಂದು" ಬದುಕನ್ನೇ ಕಳೆದುಕೊಳ್ಳುವ ಆತಂತ್ರದಲ್ಲಿರುವ ಜನರಿಗೆ ಬೋಧಿಸಬಲ್ಲರು. ಸಮ್ಮೋಹನಗೊಳಿಸುವ ಈ ವ್ಯಾಖ್ಯಾನ ಶೋಷಿತ ಮತ್ತು ದಮನಿತ ಜನರಿಗೆ ಯಾವ ವಿಮೋಚನೆಯನ್ನು ಒದಗಿಸುತ್ತದೆ? ಪ್ರಜಾತಂತ್ರವೋ-ಸಮಾಜವಾದವೋ-ಕಮ್ಯುನಿಸಮ್ಮೋ ಯಾವುದೇ ಸಿದ್ಧಾಂತದ ಆದರ್ಶ ಜನತೆಯ ನಿತ್ಯ ಬದುಕಿನ ವಿಮೋಚನೆಗೆ ಮಾರ್ಗವನ್ನು ತೋರಿಸಬೇಕಲ್ಲವೇ? ಸರ್ವಾಧಿಕಾರ ಜನರ ಪ್ರಶ್ನೆಗಳಿಗೆ ಬದಲಾಗಿ ಬಂದೂಕನ್ನೂ ಮತ್ತು ಚಿತ್ರಹಿಂಸೆಯನ್ನೂ ಮೂರ್ತ ರೂಪದಲ್ಲಿ ಉತ್ತರವನ್ನಾಗಿ ನೀಡುತ್ತದೆ ನಿಜ. ಆದರೆ ಪ್ರಜಾತಂತ್ರ ಜನರಿಗೆ ಪ್ರಿಯವಾಗಬೇಕೆಂದರೆ ಅದು ಭೂಮಿ, ಉದ್ಯೋಗ, ಸಮಾನ ಅವಕಾಶ, ಅನ್ಯಾಯ ಮಾಡುವವರಿಗೆ ಶಿಕ್ಷೆ ಇನ್ನಿತರ ರೂಪದಲ್ಲಿಯೂ ಮೂರ್ತ ರೂಪದಲ್ಲಿ ಸಿಗಬೇಕಲ್ಲವೇ? ಅದಿಲ್ಲದೆ ಪ್ರಜಾಪ್ರಭುತ್ವ ಕೇವಲ ಅಮೂರ್ತ ಆದರ್ಶವಾಗಿ ಗೋವಿಂದರಾಯರ ಭಾಷಣದಲ್ಲಿ ಮಾತ್ರ ಉಳಿದು ನಿತ್ಯಬದುಕಿನಲ್ಲಿ ಬಂದೂಕಿನ ಸರ್ವಾಧಿಕಾರವೇ ಪ್ರಜಾತಂತ್ರದ ಹೆಸರಲ್ಲಿ ಆಚರಣೆಯಲ್ಲಿದ್ದರೆ, ಜನತೆಗೆ ಬೇರೆ ಆಯ್ಕೆಯನ್ನು ಮಾಡಿಕೊಳ್ಳುವ ಹಕ್ಕನ್ನು ನಿಷೇಧಿಸಲು ಸಾಧ್ಯವೇ? ಅದು ಪ್ರಜಾತಂತ್ರವೇ?

ಪ್ರಶ್ನೆ ಇಷ್ಟೆ! ಈ ದೇಶದ ದಲಿತರು, ಆದಿವಾಸಿಗಳು ಈ ಅಸಮಾನ ವ್ಯವಸ್ಥೆಯೆಂಬ ಕೆಸರುಗುಂಡಿಯಲ್ಲಿ ಮುಳುಗಿಹೋಗುತ್ತಿದ್ದಾರೆ. ಪ್ರಭುತ್ವ ಅವರನ್ನು ಮುಳುಗಿಸುತ್ತಿದೆ. ಮುಳುಗುತ್ತಿರುವ ಅವರನ್ನು ಅಲ್ಲಿಂದ ಪಾರುಮಾಡಲು ಅಲ್ಲಿ ಚಾಚಲಾಗಿರುವ ಹಸ್ತ ನಕ್ಸಲರದ್ದು. ಅದರ ಜೊತೆಗೆ ಸಮಾಜವಾದಿಗಳ, ಗೋವಿಂದರಾಯರ, ಗಾಂಧೀವಾದಿಗಳ, ಇನ್ನಿತರರ ಹಸ್ತವೂ ಚಾಚಲ್ಪಟ್ಟಿದರೆ ಯಾವ ಕಾರಣಕ್ಕೂ ನಕ್ಸಲರ ಹಸ್ತದ ಸಹಾಯ ತೆಗೆದುಕೊಳ್ಳಬೇಡಿ ಎಂದು ಕರೆ ನೀಡುವ ನೈತಿಕ ಅರ್ಹತೆ ಇರುತ್ತಿತ್ತು. ಈಗಿರುವ ಸನ್ನಿವೇಶದಲ್ಲಿ ಮುಳುಗುತ್ತಿರುವರಿಗೆ ನಕ್ಸಲರ ಸಹಾಯ ತೆಗೆದುಕೊಳ್ಳಬೇಡಿ ಎನ್ನುವುದೂ ಒಂದೇ. ಮುಳುಗಿ ಸಾಯಿ ಎನ್ನುವುದೂ ಒಂದೇ. ಕಂಫರ್ಟ್ ಜೋನಿನಲ್ಲಿರುವವರಿಗೆ ಕಾನ್ಫ್ಲಿಕ್ಟ್ ಜೋನಿನಲ್ಲಿರುವವರಿಗೆ ಈ ಬಗೆಯ ಆದೇಶ ಕೊಡುವ ಯಾವ ನೈತಿಕ ಹಕ್ಕೂ ಇರುವುದಿಲ್ಲ.

ಛತ್ತೀಸ್‌ಘಡ್‌ನ ಕಗ್ಗಾಡಿನಿಂದ ಆದಿವಾಸಿಗಳನ್ನು ಎತ್ತಂಗಡಿ ಮಾಡಿ ಅಲ್ಲಿರುವ ಅಷ್ಟೂ ಖನಿಜ ಸಂಪನ್ಮೂಲವನ್ನು ಬಹುರಾಷ್ಟ್ರೀಯ ಕಂಪನಿಗಳಿಗೆ ಪರಭಾರೆ ಮಾಡಲು ನಕ್ಸಲ್ ಗುಮ್ಮವನ್ನು ಬಳಸಿಕೊಳ್ಳಲಾಗುತ್ತಿದೆ. (ಗೋವಿಂದರಾಯರಿಗೆ ಆದರ್ಶಗಳಿರಲಿ ಮಾಹಿತಿಯೂ ಅಮೂರ್ತವೇ ಆದ್ದರಿಂದ ಆ ಲೇಖನದಲ್ಲಿರುವ ಈ ಮಾಹಿತಿಯ ಪ್ರಾಮುಖ್ಯತೆ ಗ್ರಹಿಸುವುದಿಲ್ಲ!). ಇದನ್ನು ಸದ್ದಿಲ್ಲದೆ ಜಾರಿಗೊಳಿಸಲು ಆದಿವಾಸಿಗಳ ವಿರುದ್ಧ ಆಪರೇಷನ್ ಗ್ರೀನ್‌ಹಂಟ್ ನಡೆದಿದೆ. ನಾಗರಿಕ ಸಮಾಜ ಮತ್ತು ಮಾಧ್ಯಮಗಳನ್ನು ಸಂಪೂರ್ಣವಾಗಿ ಹೊರಗಿಟ್ಟು ಪ್ರಭುತ್ವ ನಡೆಸುವ ಈ ನರಮೇಧವನ್ನು ಆದಿವಾಸಿಗಳು ಎದುರಿಸುವುದು ಹೇಗೆ ಸಾಧ್ಯ? "ಪೊಲೀಸರು ನಮ್ಮನ್ನು ಈಗ ಸುತ್ತುವರೆದರೆ ಏನು ಮಾಡುತ್ತೀಯಾ" ಎಂದು ಆದಿವಾಸಿ ಕಮ್ಯಾಂಡರ್ ಕೇಳಿದಾಗ "ಆಮರಣಾಂತ ಉಪವಾಸ ಸತ್ಯಾಗ್ರಹ ಕೂತುಕೊಳ್ಳುತ್ತೀನಿ" ಎಂದು ಹಾಸ್ಯಭರಿತವಾಗಿ ಆರುಂಧತಿ ರಾಯ್ ನೀಡಿದ ಉತ್ತರದಲ್ಲಿ ಈ ಗಾಂಧೀವಾದಿಗಳಿಗೆ ಗಾಂಧೀಮಾರ್ಗದ ಕುಹಕ ಕಂಡಿದೆಯೇ ವಿನಃ ಆದಿವಾಸಿಗಳು ಎದುರಿಸುತ್ತಿರುವ ಆಯ್ಕೆಯಿಲ್ಲದ ಬದುಕಿನ ಕ್ರೂರ ವ್ಯಂಗ್ಯವಲ್ಲ. ಬದುಕಿಗಿಂತ ಸತ್ಯಕ್ಕಿಂತ ಸಿದ್ಧಾಂತವೇ ಮುಖ್ಯವಾಗುವ ಸೈದ್ಧಾಂತಿಕ ಮೂಲಭೂತವಾದಿತನ ಹುಟ್ಟಿಸುವ ಕ್ರೌರ್ಯವಿದು. ಇದನ್ನು ಕಮ್ಯುನಿಸ್ಟರೂ ಮಾಡುತ್ತಾರೆ. ಗೋವಿಂದರಾಯರಲ್ಲೂ ಈ ಕ್ರೌರ್ಯವಿದೆ. ಅವರಲ್ಲಿ ಗಾಂಧೀವಾದದ ಹೆಸರಿನಲ್ಲಿರುವ ಸೈದ್ಧಾಂತಿಕ ಮೂಲಭೂತವಾದದಿಂದಾಗಿಯೇ ಆರುಂಧತಿ ರಾಯ್ ವಿವರಣೆಯಲ್ಲಿರುವ ಆದಿವಾಸಿಗಳ ಆತಂಕ ಕಾಣುತ್ತಿಲ್ಲ.

"ನಕ್ಸಲ್ ದಾರಿಯೇ ಏಕೈಕ ಮಾರ್ಗವಲ್ಲ, ಹಲವು ಪರ್ಯಾಯ ಮಾರ್ಗಗಳಿವೆ. ತನಗಿನ್ನೂ ಪರ್ಯಾಯ ಮಾರ್ಗಗಳು ಮುಚ್ಚಿಹೋಗಿವೆ ಎಂದೆನಿಸುವುದಿಲ್ಲ" ಎನ್ನುತ್ತಾರೆ ಗೋವಿಂದರಾಯರು. ಇರಬಹುದು. ಅದು ಅಮೂರ್ತವಾಗಿದ್ದರೆ ಪ್ರಯೋಜನವಿಲ್ಲ. ಅದು ಅನಂತತೆಯಲ್ಲಿ ಮಾತ್ರ ನಿಜವಾದರೂ ಪ್ರಯೋಜನವಿಲ್ಲ. ಅದೂ ಈ ಕ್ಷಣದಲ್ಲಿ ಆದಿವಾಸಿಗಳ ಎತ್ತಂಗಡಿಯನ್ನು ನಿಲ್ಲಿಸಲು ಸಹಾಯಕ್ಕೆ ಬರಬೇಕು. ಈ ಕ್ಷಣದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಪರವಾಗಿ ಅವರನ್ನು ಕೊಲ್ಲಲು ಬರುತ್ತಿರುವ ಅರೆಸೇನಾ ಪಡೆಗಳಿಂದ ರಕ್ಷಿಸಬೇಕು. ಆದರೆ ಹಾಗಾಗುತ್ತಿಲ್ಲ. ಹಿಮಾಂಶು ಕುಮಾರ್‌ರಂಥ ಗಾಂಧೀವಾದಿ ಸಾಮಾಜಿಕ ಕಾರ್ಯಕರ್ತರನ್ನೂ, ಬಿನಾಯಕ್ ಸೇನ್‌ರಂಥ ಅಹಿಂಸಾವಾದಿ ಮಾನವ ಹಕ್ಕು ಕಾರ್ಯಕರ್ತರನ್ನೇ ಛತ್ತೀಸ್‌ಘಡದಲ್ಲಿ ಉಳಿಯಲು ಬಿಡದ ನಂತರ ಈಗ ಆದಿವಾಸಿಗಳಿಗೆ ಉಳಿದಿರುವ ದಾರಿಯೇನು? "ಆದಿವಾಸಿಗಳು ನಕ್ಸಲರ ಸಹಾಯದಿಂದ ಬದುಕಿದ್ದಾರೆಯೇ ಅಥವಾ ಅವರನ್ನು ಕಂಡು ಹೆದರುತ್ತಿದ್ದಾರೆಯೇ ಎಂಬ ಪ್ರಶ್ನೆಯನ್ನು ಆರುಂಧತಿರಾಯರು ಏಕೆ ಕೇಳಿಲ್ಲ" ಎಂದು ಕೇಳುವ ಗೋವಿಂದರಾಯರು ಅವರಂತೇ (?) ಗಾಂಧೀವಾದಿಯಾಗಿರುವ ಹಿಮಾಂಶುಕುಮಾರ್ ಅವರ, ಬಿನಾಯಕ್ ಸೇನ್‌ರವರ ಅನುಭವವನ್ನು ಕೇಳಿಸಿಕೊಳ್ಳಬೇಕು. ಏನಿಲ್ಲವೆಂದರೂ ಅವರು "ಪ್ರಜಾತಂತ್ರವನ್ನು ಅಮೂರ್ತ ಆದರ್ಶವೆಂದು" ಪರಿಗಣಿಸದೆ ಜನರಿಗೆ ಮೂರ್ತ ರೂಪದಲ್ಲೂ ದಕ್ಕುವಂತೆ ಮಾಡಲು ಪ್ರಯತ್ನಿಸಿದವರು! ಅದಕ್ಕಾಗಿ ತಮ್ಮ ಕಂಫರ್ಟ್ ಜೋನುಗಳನ್ನು ತೊರೆದು ಆದಿವಾಸಿಗಳ ನಡುವೆ ಬೆರೆತು ಬದುಕಿ ಕಾನ್ಫ್ಲಿಕ್ಟ್ ಜೋನಿನಲ್ಲಿ ಗಾಂಧೀವಾದದ ಪ್ರಯೋಗ ಮಾಡಿದವರು. ಪ್ರಭುತ್ವದ ಕೆಂಗಣ್ಣಿಗೆ ಗುರಿಯಾಗಿ ಜೈಲು ಪಾಲಾದವರು. ಹೀಗಾಗಿ ಅವರ ಅನುಭವದ ಮಾತೇನು ಎಂದು ತಿಳಿದುಕೊಳ್ಳಲು **EPW** ಮತ್ತು "ತೆಹೆಲ್ಕಾ" ಇತ್ಯಾದಿಗಳಲ್ಲಿ ಪ್ರಕಟವಾದ ಅವರುಗಳ ಲೇಖನ ಮತ್ತು ಸಂದರ್ಶನವನ್ನು ಓದಬಹುದು. **(Who Is The Enemy? - State Or Maoists!)** ಅದರಲ್ಲಿ ಅವರು ಹೇಳುವುದಿಷ್ಟೆ: "ಆದಿವಾಸಿಗಳಿಗೆ ನಕ್ಸಲರು ಆಪ್ತಮಿತ್ರರು. ಜನರ ಅಪಾರ ಬೆಂಬಲದೊಂದಿಗೇ ಅವರು ಈ ಜನಸಮರವನ್ನು ನಡೆಸುತ್ತಿದ್ದಾರೆ. ಅವರು ಬಂದ ಮೇಲೆ ಆದಿವಾಸಿಗಳ ಬದುಕಿನಲ್ಲಿ ಅಪಾರ ಬದಲಾವಣೆಯಾಗಿದೆ. ಆದರೆ ಪ್ರಭುತ್ವ ಬಹುರಾಷ್ಟ್ರೀಯ ಕಂಪನಿಗಳ ಏಜೆಂಟರಾಗಿ ಅವರನ್ನು ದಮನ ಮಾಡುತ್ತಿದೆ." ಇದೇ ಮಾತುಗಳನ್ನೇ ಬೇರೇ ರೀತಿಯಲ್ಲಿ ಯೋಜನಾ ಆಯೋಗದ ಪರಿಣಿತರ ಸಮಿತಿ ನೀಡಿರುವ 2009ರ ವರದಿಯೂ ಹೇಳುತ್ತಿದೆ.

ಈಗ ಇದನ್ನೂ ಎರಡು ಕಾರಣಗಳಿಗೆ ತಿರಸ್ಕರಿಸಬಹುದು. ಒಂದು, ಯೋಜನಾ ಆಯೋಗ ಹಾಗು ಆ ಇಬ್ಬರೂ ಗಾಂಧೀವಾದಿಗಳು ಸಹ ಮುಠ್ಠಾಳರು ಮತ್ತು ನಕ್ಸಲರಿಂದ ಬ್ರೈನ್‌ವಾಷ್‌ಗೆ ಗುರಿಯಾಗಿರುವವರು. ಅಥವಾ ಎರಡನೆ ಸಾಧ್ಯತೆ ನಕ್ಸಲರು ಇವೆಲ್ಲಾ ಮಾಡುತ್ತಿರುವುದು ನಿಜವಾದರೂ ಇದರ ಹಿಂದೆ ಅವರಿಗೆ ರಾಜ್ಯಾಧಿಕಾರ ಹಿಡಿಯುವ ಹಿಡೆನ್ ಅಜೆಂಡಾ ಇದೆ. ಹಾಗೊಮ್ಮೆ ಇವರೇ ರಾಜ್ಯಭಾರ ಮಾಡಿದರೆ ಈ ಹಿಂದೆ ರಷ್ಯಾ, ಚೀನಾ ಇನ್ನಿತ್ಯಾದಿ ದೇಶಗಳಲ್ಲಿ ಜಾರಿಗೆ ಬಂದ ಸರ್ವಾಧಿಕಾರವೇ ಜಾರಿಗೆ ಬರುತ್ತದೆ.

ಮೊದಲನೇ ಬಗೆಯ ಆಕ್ಷೇಪಣೆಯ ಧೋರಣೆಯೂ ಗೋವಿಂದರಾಯರ ಲೇಖನದಲ್ಲಿದೆ. ಆದರೆ ಅವರ ಪ್ರಧಾನ ಆಕ್ಷೇಪಣೆ ಎರಡನೆಯದ್ದು. ರಷ್ಯಾ ಮತ್ತು ಚೀನದ ಬಗ್ಗೆ ಅವರಿಗಿರುವ ಆಕ್ಷೇಪಣೆ ಕೇವಲ ವಾಸ್ತವ ಗ್ರಹಿಕೆಯದ್ದು ಮಾತ್ರವಲ್ಲ, ಅವರ ಸೈದ್ಧಾಂತಿಕ ಗ್ರಹಿಕೆಯೂ ರಷ್ಯಾ ಮತ್ತು ಚೀನವನ್ನು ಹಾಗೆ ಗ್ರಹಿಸುವಂತೆ ಮಾಡಿದೆ. ಅದೇನೇ ಇದ್ದರೂ ಇಂಥಾ ವಿಮರ್ಶೆಗಳನ್ನು ಈಗಲಾದರೂ ಕಮ್ಯುನಿಸ್ಟರು, ಅದರಲ್ಲೂ ತಮ್ಮನ್ನು ತಾವು ಕ್ರಾಂತಿಕಾರಿ ಕಮ್ಯುನಿಸ್ಟ್ ಎಂದು ಕರೆದುಕೊಳ್ಳುವ ಮಾವೋವಾದಿಗಳು ಗಂಭೀರವಾಗಿ ಪರಿಗಣಿಸಲೇ ಬೇಕು. ಇಂದು ರಷ್ಯಾವಾಗಲೀ, ಚೀನಾ ಆಗಲಿ ಸಂಪೂರ್ಣ ಬಂಡವಾಳಶಾಹಿ ದೇಶಗಳೇ ಆಗಿವೆ. ಹೀಗಾಗಿ ಅಲ್ಲಿ ಜನತೆಯ ಕ್ರಾಂತಿ ವಿಫಲವಾಗಿದೆ. ಅದಕ್ಕೆ ಕಾರಣ ಕೇವಲ ನಾಯಕರು ಬದಲಾಗಿದ್ದು ಮಾತ್ರವಲ್ಲ, ಬದಲಿಗೆ ಅವರು ಅನುಸರಿಸಿದ ಅಭಿವೃದ್ಧಿ ಮಾದರಿಯಲ್ಲಿ ಬಂಡವಾಳಶಾಹಿ ಅಂಶಗಳು ಇದ್ದದ್ದು ಕೂಡಾ ಪ್ರಧಾನ ಕಾರಣ. ಹೊಸ ಉತ್ಪಾದನಾ ಶಕ್ತಿಗಳ ಸೃಷ್ಟಿಗಿಂತ ಹೊಸ ಮನುಷ್ಯನ ಸೃಷ್ಟಿ ಮುಖ್ಯವೆಂದು **1871**ರಷ್ಟು ಹಿಂದೆ ಪ್ಯಾರಿಸ್ ಕಮ್ಯೂನಿನಲ್ಲಿ ಮಾರ್ಕ್ಸ್ ಹೇಳಿದ್ದನ್ನು ಲೆನಿನ್ ಒಂದಷ್ಟು ಮತ್ತು ಮಾವೋ ಮತ್ತಷ್ಟು ಒತ್ತುಕೊಟ್ಟು ಪ್ರಯೋಗಿಸಿದ್ದು ಈಗ ಇತಿಹಾಸ. ಹೀಗಾಗಿ ಶೋಷಣೆಯ ವಿರುದ್ಧ ಹೋರಾಟ ಮಾಡುತ್ತಾ ಅಧಿಕಾರಕ್ಕೆ ಬರುವ ರೆಜೀಮ್‌ಗಳು ಕ್ರಾಂತಿಯ ಕಾವನ್ನು ಕಳೆದುಕೊಳ್ಳದೇ ಮತ್ತಷ್ಟು ಸಮಾಜವಾದಿಯಾಗಿ ಹೇಗೆ ಉಳಿದು ಬೆಳೆಯಲು ಸಾಧ್ಯ ಎಂಬುದು ಬಹುದೊಡ್ಡ ಚಾರಿತ್ರಿಕ ಪ್ರಶ್ನೆಯೇ.

ಹೀಗಾಗಿಯೇ ಕ್ರಾಂತಿಯಲ್ಲಿ, ಸಮಾಜ ಬದಲಾವಣೆಯಲ್ಲಿ ಬದ್ಧತೆಯಿಂದ ತೊಡಗಿಕೊಂಡಿರುವ ಪ್ರತಿಯೊಂದು ಚಳವಳಿಗಳು ಈ ಪ್ರಶ್ನೆಯನ್ನು ಮುಖಾಮುಖಿಯಾಗಲೇ ಬೇಕು. ಆಗುತ್ತಿವೆ. ಕೇವಲ ಪ್ರಶ್ನೆ ಹಾಕಿ ಸುಮ್ಮನಿರದೆ ಹಲವು ಪ್ರಯೋಗಗಳನ್ನು ಮಾಡುತ್ತಿವೆ. ಹೀಗಾಗಿಯೇ ಮಾರ್ಕ್ಸ್‌ವಾದ ನಿಂತ ನೀರಾಗದೆ ಇನ್ನೂ ಹರಿಯುತ್ತಿದೆ. ಪ್ರಯೋಗಗಳಿಂದಾಗಿ ಇನ್ನಷ್ಟು ಜನಮುಖಿಯಾಗುವತ್ತ ಬೆಳೆದಿದೆ. ಈ ಎಚ್ಚರ ಇಲ್ಲದ ಚಳವಳಿಗಳು ನಂತರ ಆಳುವವರ್ಗಗಳಾಗಿ ಸರ್ವಾಧಿಕಾರಿಯಾಗುತ್ತವೆ, ಚೀನಾ ಹಾಗೂ ರಷ್ಯಾದಲ್ಲಿ ಆದಂತೆ.

ಆದರೆ ಈ ಪ್ರಶ್ನೆಯನ್ನು ಎತ್ತುತ್ತಿರುವ ಗೋವಿಂದರಾಯರಂಥ ಬುದ್ಧಿಜೀವಿಗಳ ಸಮಸ್ಯೆಯೆಂದರೆ ಯಾವ ಪುರಾವೆ ಅಥವಾ ಒರಿಜಿನಲ್ ಓದೂ ಇಲ್ಲದೆ ಕಮ್ಯುನಿಸ್ಟ್ ಚಳವಳಿಗಳು ತಮ್ಮ ಹಳೆಯ ಅನುಭವಗಳಿಂದ ಪಾಠವನ್ನೇ ಕಲಿತಿಲ್ಲವೆಂದು ಘೋಷಿಸಿಬಿಡುತ್ತಾರೆ. ಅಥವಾ ಇಡೀ ಕಮ್ಯುನಿಸ್ಟ್ ಚಳವಳಿಯನ್ನು ಏಕಧಾರೆಯಾಗಿ ಗ್ರಹಿಸುತ್ತಾರೆ ಹಾಗೂ ಪ್ರಪಂಚದೆಲ್ಲೆಡೆ ಈ ತಪ್ಪುಗಳನ್ನು ತಿದ್ದಿಕೊಳ್ಳಲು ನಡೆಯುತ್ತಿರುವ ಪ್ರಯೋಗಗಳಿಗೆ ಉದ್ದೇಶಪೂರ್ವಕವಾಗಿ ಕುರುಡಾಗುತ್ತಾರೆ. ಏಕೆಂದರೆ ಈ ವಿಷಯದ ಬಗ್ಗೆ ಛತ್ತೀಸ್‌ಘಡದಲ್ಲಿ ಮಾವೋವಾದಿಗಳು ತಮ್ಮ ನಿಲುವು, ಆತ್ಮವಿಮರ್ಶೆ ಮತ್ತು ಪ್ರಯೋಗಗಳನ್ನು ಹಲವು ಬಾರಿ ಸಮಾಜದ ಮುಂದಿಟ್ಟಿದ್ದಾರೆ. ಅದನ್ನು ಖುದ್ದಾಗಿ ಕಂಡುಬಂದ ಆರುಂಧತಿ ರಾಯ್‌ರವರೂ ವಿವರವಾಗಿ ಬರೆದಿದ್ದಾರೆ. ಆದರೂ ಗೋವಿಂದರಾಯರು ಬದಲಾಗುತ್ತಿರುವ ಅವರ ಸಿದ್ಧಾಂತವನ್ನಾಗಲೀ, ಆಚರಣೆಯನ್ನಾಗಲೀ ಪರಿಗಣಿಸುವುದಿಲ್ಲ, ಅದಕ್ಕೇ ಅವರದ್ದೇ ಆದ ಕಾರಣವಿರಬಹುದು! ಅದೇನೇ ಇರಲಿ, ಈ ನಿಟ್ಟನಲ್ಲಿ ಭಾರತದ ಮಾವೋವಾದಿಗಳ ತಿಳಿವಳಿಕೆ ಮತ್ತು ಆಚರಣೆಯಲ್ಲಿ ಬರಬೇಕಾದಷ್ಟು ಮಾರ್ಪಾಡು ಮತ್ತು ಮುಕ್ತತೆ ಬಂದಿಲ್ಲವೆಂದಂತೂ ಖಂಡಿತಾ ಹೇಳಬಹುದು!

ಅದೇನೇ ಇದ್ದರೂ ಮುಂದೆ ಸರ್ವಾಧಿಕಾರಿಯಾಗಬಹುದು ಎಂಬ ಕಾರಣಕ್ಕೆ, ಅಥವಾ ಮುಂದೆ ಛಿದ್ರವಾಗಬಹುದು ಎಂಬ ಕಾರಣಕ್ಕೆ ಇಂದು ನಡೆಯುತ್ತಿರುವ ಚಳವಳಿ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತದೆಯೇ? ಭಾರತಕ್ಕೆ ಸ್ವಾತಂತ್ರ್ಯ ಕೊಟ್ಟರೆ ಅದು ಛಿದ್ರವಾಗುತ್ತದೆ ಎಂದು ಹೇಳಿದ ಚರ್ಚಿಲ್‌ನ ವಸಾಹತುಶಾಹಿ ಮನೋಭಾವಕ್ಕೂ ಈ ಧೋರಣೆಗೂ ಏನು ವ್ಯತ್ಯಾಸವಿದೆ? ಹಾಗೆ ನೋಡಿದರೆ ನಮ್ಮನ್ನು ಆಳುತ್ತಿರುವ ಎಲ್ಲಾ ಪಕ್ಷಗಳೂ ಸಮಾಜವಾದ ಮತ್ತು ಜಾತ್ಯತೀತತೆಯ ಭರವಸೆಯನ್ನು ನೀಡಿಯೇ ಅಧಿಕಾರಕ್ಕೇರಿದವು. ಆದರೆ 60 ವರ್ಷಗಳ ನಂತರ ಈ ಪ್ರಜಾತಂತ್ರ ಮೇಲ್ಮಧ್ಯಮವರ್ಗಕ್ಕೆ, ಮೇಲ್ಜಾತಿಗಳಿಗೆ ಮತ್ತು ಶ್ರೀಮಂತರಿಗೆ ಮಾತ್ರ ಪ್ರಜಾತಂತ್ರವಾಗಿ ಉಳಿದಿದೆ. ಈ ದೇಶದ ದುಡಿಯುವ, ದಮನಿತ, ದಲಿತ, ಆದಿವಾಸಿಗಳ ಮಟ್ಟಿಗೆ ಶ್ರೀಮಂತ ವರ್ಗಗಳ ಸರ್ವಾಧಿಕಾರವೇ ಆಗಿದೆ! ಹಾಗಿದ್ದರೂ ಗೋವಿಂದರಾಯರು ಇದನ್ನು ಪ್ರಜಾತಂತ್ರವೆನ್ನುತ್ತಾರೆ. ಹಾಗಿದ್ದ ಮೇಲೆ ಪ್ರತಿ ಚುನಾವಣೆಯಲ್ಲೂ ಅವರು ಯಾವುದಾದರೂ ಒಂದು ಶ್ರೀಮಂತರ ಪಕ್ಷಕ್ಕೆ ಕೊಡುವ ಓಟು ಪರೋಕ್ಷವಾಗಿ ಬಡವರ ವಿರುದ್ಧದ ಪಿತೂರಿಗೆ ನೀಡಿದ ಬೆಂಬಲ ಎಂದಾಗುವುದಿಲ್ಲವೇ?

ಮೇಲಾಗಿ ಇಂದು ಈ ಪ್ರಜಾತಂತ್ರದ ಎಲ್ಲಾ ಫಲಾನುಭವಿಗಳು ಅರ್ಥಮಾಡಿಕೊಳ್ಳಬೇಕಾದ ಪ್ರಮುಖ ಸಂಗತಿಯೆಂದರೆ ಇದು ಹುಟ್ಟಿಕೊಂಡಿದ್ದೇ ಹಿಂಸಾತ್ಮಕ ಹೋರಾಟಗಳಿಂದ, ವಸಾಹತುಶಾಹಿ ಮತ್ತು ಊಳಿಗಮಾನ್ಯತೆಗಳ ವಿರುದ್ಧ ಹಲವಾರು ಪಿತೂರಿಗಳಿದ್ದ ಕ್ರಾಂತಿಯಿಂದ! ಏಕೆಂದರೆ ಇಂಥಾ ಕ್ರಾಂತಿ ಸಂಭವಿಸಬಾರದೆಂದೇ ಆಗಿನ ಪಟ್ಟಭದ್ರ ಹಿತಾಸಕ್ತಿಗಳು ಜನರ ಬಂಡಾಯವನ್ನು ಕ್ರೂರವಾಗಿ ದಮನ ಮಾಡಲು ಯತ್ನಿಸಿದ್ದವು. ಆ ದಮನಗಳನ್ನು ಮೀರಲು ಜನರು ಶಾಂತಿಯುತ, ಸಮರಶೀಲ, ಹಿಂಸಾತ್ಮಕ, ಅಹಿಂಸಾತ್ಮಕ, ಶಾಸನಬದ್ಧ, ಸಂವಿಧಾನಬಾಹಿರ ಎಲ್ಲಾ ಮಾರ್ಗಗಳನ್ನು ಬಳಸಿದ ನಂತರವೇ ಪ್ರಜಾತಂತ್ರದ ಕ್ರಾಂತಿ ಪ್ರಾರಂಭವಾಯಿತು.

ಈಗ ಈ ಕ್ರಾಂತಿ ಕೇವಲ ಮೇಲ್ಮಧ್ಯಮ ಮತ್ತು ಶ್ರೀಮಂತ ಹಾಗೂ ಮೇಲ್ಜಾತಿಗಳಿಗೆ ಮಾತ್ರ ಸೀಮಿತವಾಗುವಂತೆ ಪಟ್ಟಭದ್ರ ಹಿತಾಸಕ್ತಿಗಳು ಪಿತೂರಿ ನಡೆಸಿವೆ. ಪ್ರಭುತ್ವ ಶಕ್ತಿಯನ್ನು ಬಳಸಿ ಅಂಥ ಕ್ರಾಂತಿಯನ್ನು ದಮನ ಮಾಡಲು ಯತ್ನಿಸಿವೆ. ಈ ಪಿತೂರಿಯಲ್ಲಿ ಮೇಲ್‌ಸ್ತರದ ಪ್ರಜಾತಂತ್ರದ ಫಲಾನುಭವಿಗಳೆಲ್ಲರೂ ಪ್ರಭುತ್ವದ ಜೊತೆ ಸೇರಿಕೊಂಡಿದ್ದಾರೆ. ಆದ್ದರಿಂದಲೇ ಇದು ಅಂತರ್ಯುದ್ಧದ ಸ್ವರೂಪವನ್ನು ಪಡೆದುಕೊಳ್ಳುತ್ತಿದೆ.


ಹೀಗಾಗಿ ಇದು ಗೋವಿಂದರಾಯರು ಹೇಳುವಂತೆ ಕೇವಲ ಅನಂತಕಾಲಕ್ಕೂ ಕಾಯುವ ಪ್ರಶ್ನೆಯೂ ಅಲ್ಲ, ನಮ್ಮ ಜೀವಿತಾವಧಿಯಲ್ಲೇ ಎಲ್ಲವನ್ನು ಬದಲಾವಣೆಯಾಗಿಬಿಡಬೇಕೆಂಬ ರಾಜಕೀಯ ಸಂಕುಚಿತತೆಯೂ ಅಲ್ಲ. ಈ ಪ್ರಜಾತಂತ್ರದ ಅನಂತ ಚಲನೆಯನ್ನು ತಡೆಗಟ್ಟಲು ಈ ಪ್ರಜಾತಂತ್ರದ ರಥಚಕ್ರವನ್ನು "ಫಲಾನುಭವಿಗಳು" ಹಿಂದಕ್ಕೆ ಎಳೆಯುತ್ತಿದ್ದಾರೆ. ಅದನ್ನು ಮುಂದಕ್ಕೆ ಎಳೆಯಲು ಯತ್ನಿಸುತ್ತಿರುವವರನ್ನು ಪ್ರಭುತ್ವ ಕೊಂದುಹಾಕುತ್ತಿದೆ. ಹೀಗೆ ಪ್ರಜಾತಂತ್ರವೇ ಬಿಕ್ಕಟ್ಟಿನಲ್ಲಿದೆ. ಇದು ಬಗೆಹರಿಯಬೇಕೆಂದರೆ ರಥ ಚಲಿಸಬೇಕು. ಚಲನೆಯನ್ನು ತಡೆಯುತ್ತಿರುವವರನ್ನು ಹಿಮ್ಮೆಟ್ಟಿಸಬೇಕು. ಅದರ ಬದಲು ತನ್ನಂತೆ ತಾನೇ ಬದಲಾವಣೆ ಸಂಭವಿಸುತ್ತದೆ ಎಂದು ಕಾಯುತ್ತಾ ಕೂರುವವರು ಶತಮಾನದಿಂದ ಕಾಯುತ್ತಲೇ ಕೂತವರಿಗೆ ಘೋರ ವಂಚನೆ ಮಾಡುತ್ತಾರೆ.

ಆದ್ದರಿಂದಲೇ ಈ ಪಟ್ಟಭದ್ರ ಹಿತಾಸಕ್ತಿಗಳ ವಿರುದ್ಧ ಹೋರಾಟ ನಡೆಯದೇ ಕ್ರಾಂತಿ ಮುಂದುವರೆಯುವುದಿಲ್ಲ. ಅದು ಪಿತೂರಿಯಲ್ಲ, ಕ್ರಾಂತಿಯನ್ನು ಪಿತೂರಿಯೆಂದು ಭಾವಿಸುವವರು ಸೂರ್ಯೋದಯವನ್ನು ಪಿತೂರಿಯೆಂದು ಭಾವಿಸುತ್ತಾರೆ. ಮಾತನ್ನು ಮೌನದ ವಿರುದ್ಧ ಪಿತೂರಿಯೆಂದು ಭಾವಿಸುತ್ತಾರೆ. ಗೋವಿಂದರಾಯರ ಕ್ರಾಂತಿ ಮತ್ತು ಪಿತೂರಿಯ ನಿರ್ವಚನ ಹೀಗೇ ಇದೆ. ಪ್ರಭುತ್ವದ ಪಿತೂರಿಯನ್ನು, ಪ್ರಭುತ್ವದ ಹಿಂಸೆಯನ್ನು ಅರ್ಥಮಾಡಿಕೊಳ್ಳದ ಜನ ಮಾತ್ರ ಜನತೆಯ ಹೋರಾಟದಲ್ಲಿ ಪಿತೂರಿಯನ್ನು ಕಾಣಲು ಸಾಧ್ಯ.

ಅದೇನೇ ಇದ್ದರೂ ಇಂದು ಛತ್ತೀಸ್‌ಘಡ್‌ನಲ್ಲಿ ಆದಿವಾಸಿಗಳು ಎದುರಿಸುತ್ತಿರುವ ಪರಿಸ್ಥಿತಿಯಲ್ಲಿ ಮಾವೋವಾದಿಗಳ ಅವಿವೇಕದ ಪಾಲೂ ಇದೆ ಎಂಬುದರಲ್ಲಿ ಸಂಶಯವಿಲ್ಲ. ದೇಶಾದ್ಯಂತ ಕ್ರಾಂತಿಕಾರಿ ವಾತಾವರಣವಿಲ್ಲದಾಗ, ಕ್ರಾಂತಿಕಾರಿ ಪಕ್ಷದ ಬಗ್ಗೆ ವಿಶ್ವಾಸವನ್ನು ಮತ್ತು ಕ್ರಾಂತಿಯ ಕನಸನ್ನೂ ಹುಟ್ಟಿಸದೆ ಎಲ್ಲೋ ಒಂದು ಮೂಲೆಯಲ್ಲಿ ಪ್ರಭುತ್ವದ ಜೊತೆ ನಿರ್ಣಯಾತ್ಮಕ ಸಂಘರ್ಷಕ್ಕೆ ಇಳಿಯುವುದು ಒಂದು ದುಸ್ಸಾಹಸ. ಅದನ್ನು ಅವರು ಪದೇಪದೇ ಮಾಡುತ್ತಿದ್ದಾರೆ. ಆದರೆ ಈ ತಪ್ಪುಗಳು ಅವರು ಮಾಡುತ್ತಿರುವ ಹೋರಾಟವನ್ನಾಗಲೀ, ಅವರ ಸಾಧನೆಯನ್ನಾಗಲೀ ಸುಳ್ಳಾಗಿಸುವುದಿಲ್ಲ.

ಅದರಲ್ಲೂ ಮತ್ತೊಂದು ಸದೃಢ ಪರ್ಯಾಯವೇ ಇಲ್ಲದ ಸಂದರ್ಭದಲ್ಲಿ ಮಾವೋವಾದಿಗಳ ಕ್ರಾಂತಿ ಸಾಮಾನ್ಯ ಜನರನ್ನು, ದಮನಿತರನ್ನು ಆಕರ್ಷಿಸುತ್ತಲೇ ಇರುತ್ತದೆ. ಹೀಗಾಗಿ ಕಂಫರ್ಟ್ ಜೋನುಗಳಿಂದ ಹೊರಬಂದು ಅಷ್ಟೇ ಬದ್ಧತೆಯಿಂದ, ಹಿಮಾಂಶು ಕುಮಾರ್ ಮತ್ತು ಬಿನಾಯಕ್ ಸೇನರಂತೆ ಪರ್ಯಾಯವನ್ನು ಕಟ್ಟಲು ಯತ್ನಿಸದೆ ಹಿಂಸೆ-ಅಹಿಂಸೆ, ಅಮೂರ್ತ ಆದರ್ಶ ಇತ್ಯಾದಿಗಳ ಬಗ್ಗೆ ಪುಂಖಾನುಪುಂಖವಾಗಿ ನೀಡುವ ಉಪದೇಶಗಳು ಹಾಸ್ಯಾಸ್ಪದವಾಗಿಯೂ ಆಷಾಢಭೂತಿತನವಾಗಿಯೂ ಕಾಣಲು ತೊಡಗುವ ಅಪಾಯವಿದೆ.

ನಾನು ಮಾವೋವಾದಿಯೇ...?



ಪ್ರಭುತ್ವ, ಮಾಧ್ಯಮಗಳು ಮತ್ತು 'ಅಭಿವೃದ್ಧಿ'ಯ ಬೆಂಬಲಿಗರಾಗಿರುವ ನಗರವಾಸಿ ಎಲೈಟ್ ಜನರ ಕಣ್ಣಲ್ಲಿ 'ಮಾವೋವಾದಿ, ನಕ್ಸಲ್' ಎಂಬ ಹಣೆಪಟ್ಟಿ ಅಂಟಿಸಿಕೊಂಡ ಮಾನವ ಹಕ್ಕುಗಳ ಹೋರಾಟಗಾರ, ಲೇಖಕ ಜಾರ್ಖಂಡಿನ ಗ್ಲಾಡ್‌ಸನ್ ಡುಂಗ್‌ಡುಂಗ್ ಎಂಬ ಆದಿವಾಸಿಯೊಬ್ಬರ ಕತೆಯಿದು...

ಮಾನವ ಹಕ್ಕು ಹೋರಾಟ, ಬರವಣಿಗೆ ಮತ್ತು ಭಾಷಣಗಳ ಮೂಲಕ ನಾನು ಸಾರ್ವಜನಿಕ ಜೀವನದಲ್ಲಿ ಗುರುತಿಸಿಕೊಂಡಿದ್ದೇನೆ. ಆದರೆ ಕಳೆದ ವರ್ಷ ಸಿಎನ್‌ಎನ್-ಐಬಿಎನ್ ಮತ್ತು ಎನ್‌ಡಿಟಿವಿಗಳಲ್ಲಿ ನಕ್ಸಲಿಸಂ ಕುರಿತಾದ ಚರ್ಚೆಗಳಲ್ಲಿ ಭಾಗವಹಿಸುವ ಅವಕಾಶಗಳು ಸಿಕ್ಕಿದ್ದರಿಂದ ಹೆಚ್ಚಿನ ಪ್ರಮಾಣದ ವೀಕ್ಷಕರಿಗೆ ತಲುಪಿದೆ. ಈ ಟಿವಿ ಚರ್ಚೆಗಳ ನಂತರ ದೇಶದ ಎಲ್ಲ ಭಾಗಗಳಿಂದ ನನಗೆ ಸಾಕಷ್ಟು ಪಾಸಿಟಿವ್ ಮತ್ತು ನೆಗೆಟಿವ್ ಪ್ರತಿಕ್ರಿಯೆಗಳು ಬಂದವು.

ಬಹುತೇಕ ನೆಗೆಟಿವ್ ಪ್ರತಿಕ್ರಿಯೆಗಳು ಬಂದಿದ್ದು ತಮಗೆ ಗೊತ್ತಿಲ್ಲದಂತೆ ಮಾರುಕಟ್ಟೆ ಶಕ್ತಿಗಳ ವಶವಾಗಿರುವ ಯುವಜನತೆಯಿಂದ... ಪಿ.ಚಿದಂಬರಂರವರ ಥಿಯರಿಯನ್ನೇ ನಂಬಿರುವ ಇವರು ನಾನು ನೀಡಿದ ಕಾರಣ, ಮಾರುತ್ತರಗಳನ್ನು ಒಪ್ಪಿಕೊಳ್ಳಲು ತಯಾರಿರಲಿಲ್ಲ.

ಈ ಹೊತ್ತಿಗೆ ನಾನು ತುಳಿತಕ್ಕೊಳಗಾದ ಈ ದೇಶದ ಜನತೆಗೆ ಸಂಬಂಧಿಸಿದ ಸಕಾರಣಿಕವಾದ ವಿಷಯಗಳ ಪರ ಧ್ವನಿ ಎತ್ತುವುದನ್ನು ಮುಂದುವರೆಸುತ್ತಾ ಬಂದೆ. ಇದೇ ವೇಳೆ ಜಾರ್ಖಂಡಿನಲ್ಲಿ ಮಾವೋವಾದಿಗಳನ್ನು ನಿರ್ನಾಮ ಮಾಡುವ ಹೆಸರಲ್ಲಿ ಸರ್ಕಾರ 'ಆಪರೇಷನ್ ಗ್ರೀನ್ ಹಂಟ್' ಆರಂಭಿಸಿತು. ನಾನು ಈ ಗ್ರೀನ್ ಹಂಟ್‌ನ ಹಿಂದಿರುವ ಅಸಲಿ ಕುತಂತ್ರವನ್ನು ಬಯಲಿಗೆಳೆಯಲು, ಇದರಿಂದ ಹಳ್ಳಿಗರಿಗಾಗುತ್ತಿರುವ ಸಂಕಷ್ಟಗಳನ್ನು ವಿವರಿಸಲು ಯತ್ನಿಸಿದೆ. ಈ ಕಾರಣಕ್ಕೆ ಈ ಸೋಕಾಲ್ಡ್ ವಿದ್ಯಾವಂತ ಗುಂಪುಗಳು, ಕೆಲವು ಇ-ಗ್ರೂಪ್‌ಗಳು ನನ್ನನ್ನು ಮಾವೋ ಸಿಂಪಥೈಸರ್ ಎಂದೂ, ಕೊನೆಗೆ ಮಾವೋವಾದಿ ಸಿದ್ಧಾಂತಿ ಎಂಬಂತೆ ಚಿತ್ರಿಸುತ್ತಿವೆ. ಇದನ್ನು ನೋಡಿ ನಾನು ನಕ್ಕೆ. ಯಾಕೆಂದರೆ, ಮಾವೋವಾದವನ್ನು ಆಳವಾಗಿ ಅಭ್ಯಸಿಸದೇ ಒಬ್ಬ ವ್ಯಕ್ತಿ ದಿಢೀರ್ ಎಂದು ಮಾವೋವಾದಿ ಆಗುವುದು ಹೇಗೆ ಸಾಧ್ಯ? ನಾನೆಂದೂ ಮಾವೋವಾದದ ಬಗ್ಗೆ ಓದಿಯೇ ಇಲ್ಲ.

ನಾನು ಬೇಕೆಂದೇ ಯಾವ ಸಿದ್ಧಾಂತವನ್ನು ಓದಿಕೊಳ್ಳಲಿಲ್ಲ ಯಾಕೆಂದರೆ ಆದಿವಾಸಿಗಳಿಗೆ ಮಾವೋವಾದಿಗಳು ಮಾವೋವಾದದ ಬಗ್ಗೆ, ಗಾಂಧಿವಾದಿಗಳು ಗಾಂಧಿವಾದದ ಬಗ್ಗೆ ಮಾರ್ಕ್ಸ್‌ವಾದಿಗಳು ಮಾರ್ಕ್ಸ್‌ವಾದದ ಬಗ್ಗೆ ಕಲಿಸುತ್ತಾರೆ; ಆದರೆ, ಈ ಎಲ್ಲ 'ವಾದ'ಗಳಿಗಿಂತ ಅತಿ ಸರಿಯಾದ ಮತ್ತು ಸಮಾನ ಸಮಾಜದ ಸ್ಥಾಪನೆಗೆ ನೆರವಾಗುವ 'ಆದಿವಾಸಿವಾದ' (Adivasism)ದ ಬಗ್ಗೆ ಯಾರೂ ಯೋಚಿಸುವುದಿಲ್ಲ. ಭಾರತದ ಪ್ರಭುತ್ವವು ಹೇಗೆ ಈ 'ಆದಿವಾಸಿವಾದ'ವನ್ನು ಉದ್ದೇಶಪೂರ್ವಕವಾಗಿ ಧ್ವಂಸ ಮಾಡುತ್ತಿದೆ ಎಂಬುದರ ಬಗ್ಗೆ ನಾನು ಪ್ರಶ್ನೆಗಳನ್ನು ಎತ್ತುತ್ತ ಬಂದೆ.

ಭಾರತದ ಸಂವಿಧಾನವು ಆದಿವಾಸಿ ಧರ್ಮವನ್ನು ಗುರುತಿಸಿಲ್ಲ. ಇಲ್ಲಿನ ಪಾರಂಪರಿಕ ಸ್ವ-ಆಡಳಿತ ಮಾದರಿಯನ್ನು ನಿರ್ಲಕ್ಷ್ಯ ಮಾಡಲಾಗಿದೆ. ಇಲ್ಲಿನ ಸಂಸ್ಕೃತಿಯನ್ನು ನಿರ್ನಾಮ ಮಾಡಲಾಗಿದೆ. ನಮ್ಮ ಭೂಮಿಯನ್ನು ಆಕ್ರಮಿಸಿಕೊಂಡು, ನಮಗಿದ್ದ ಸಂಪನ್ಮೂಲಗಳನ್ನು ಕಿತ್ತುಕೊಳ್ಳಲಾಗಿದೆ. ಇದೆಲ್ಲವನ್ನೂ 'ಅಭಿವೃದ್ಧಿ'ಯ ಹೆಸರಲ್ಲಿ ಮಾಡಲಾಗಿದೆ. ಈ ಕೂಪದಿಂದ ನಾವು ಹೊರಬರುವುದು ಹೇಗೆ? ಈಗಲೂ ನಾವು ತೆಪ್ಪಗಿರಬೇಕೇ? ನಮ್ಮ ಸಂಕಷ್ಟಗಳಿಗೆ ಅವರು ಸ್ಪಂದಿಸುವರೆ?

ಈ ಸೋಕಾಲ್ಡ್ 'ದೇಶದ ಅಭಿವೃದ್ಧಿ'ಗಾಗಿ ಎಲ್ಲವನ್ನು ಕಳೆದುಕೊಂಡವರಲ್ಲಿ ನಾನೂ ಒಬ್ಬ; ಇವತ್ತಿಗೂ ನಾನು ಬದುಕುಳಿಯಲು ಪರದಾಡುತ್ತಿದ್ದೇನೆ. ನಾನು ಕೇವಲ ಒಂದು ವರ್ಷದವನಾಗಿದ್ದಾಗ ನನ್ನ ಕುಟುಂಬವನ್ನು ಎತ್ತಂಗಡಿ ಮಾಡಲಾಯ್ತು, ಅಭಿವೃದ್ಧಿಯ ಹೆಸರಲ್ಲಿ ನಮ್ಮ ಫಲವತ್ತಾದ ಇಪ್ಪತ್ತು ಎಕರೆ ಭೂಮಿಯನ್ನು ಕಿತ್ತುಕೊಳ್ಳಲಾಯಿತು. 1980ರಲ್ಲಿ ಸಿಮ್ಡೆಗಾ ಪಟ್ಟಣದ ಸಮೀಪದ ಚಿಂದಾನದಿಗೆ ಕಟ್ಟಿದ ಡ್ಯಾಮ್‌ನಲ್ಲಿ ನಮ್ಮ ಪೂರ್ವಿಕರ ಭೂಮಿ ಮುಳುಗಿಹೋಯ್ತು. ನಾವು ನಮ್ಮ ಮನೆ, ಕೃಷಿ ಭೂಮಿ ಮತ್ತು ತೋಟವನ್ನೆಲ್ಲ ಕಳೆದುಕೊಂಡೆವು; ಆದರೆ ನಮಗೆ ಸಿಕ್ಕ ಪರಿಹಾರ ಜುಜುಬಿ 11 ಸಾವಿರ ರೂಪಾಯಿ ಮಾತ್ರ. ಗ್ರಾಮಸ್ಥರು ಇದನ್ನು ಪ್ರತಿಭಟಿಸಿದಾಗ ಅವರನ್ನು ಹರಿಬಾಗ್ ಜೈಲಿಗಟ್ಟಲಾಯಿತು. ಕೇವಲ 11 ಸಾವಿರ ರೂಪಾಯಿಗಳಲ್ಲಿ ಆರು ಜನರ ಕುಟುಂಬವೊಂದು ಇಡೀ ಜೀವಮಾನದುದ್ದಕ್ಕೂ ಆಹಾರ, ಬಟ್ಟೆ, ವಸತಿ, ಶಿಕ್ಷಣ, ಆರೋಗ್ಯ ಸೌಲಭ್ಯಗಳನ್ನು ಹೊಂದಿಸಿಕೊಳ್ಳಲಾದೀತೆ?

ಎತ್ತಂಗಡಿಯ ನಂತರ ಹೊಟ್ಟೆಪಾಡಿಗಾಗಿ ದಟ್ಟಾರಣ್ಯದತ್ತ ವಲಸೆ ಹೋಗಬೇಕಾಗಿತ್ತು. ತುಂಡುಭೂಮಿ ಖರೀದಿಸಿದ ನಾವು ಅರಣ್ಯದಲ್ಲಿ ವಾಸ ಮಾಡತೊಡಗಿದೆವು. ಕುಟುಂಬದ ಜೀವನ ನಿರ್ವಹಣೆಗಾಗಿ ನಾವು ಹೂವು ಹಣ್ಣು ಮತ್ತು ಉರುವಲು ಕಟ್ಟಿಗೆಯನ್ನು ಸಂಗ್ರಹಿಸಿ ಮಾರಬೇಕಾಯ್ತು. ನಮ್ಮ ಬಳಿ ಸಾಕಷ್ಟು ಜಾನುವಾರುಗಳು ಇದ್ದುದ್ದರಿಂದ ಆರ್ಥಿಕ ನಿರ್ವಹಣೆ ನಡೆಯತೊಡಗಿತು. ಎಂದಿನಂತೆ ನಮ್ಮ ಮೇಲೆ ಪ್ರಭುತ್ವದ ದೌರ್ಜನ್ಯ ಮುಂದುವರೆದೇ ಇತ್ತು. ಕಾಡಲ್ಲಿ ವಾಸಿಸುತ್ತಿದ್ದಾಗ, ಅತಿಕ್ರಮಣ ಮಾಡಿದನೆಂದು ಮತ್ತು ಮರಗಳ್ಳನೆಂದು ನನ್ನ ತಂದೆ ಮೇಲೆ ಅರಣ್ಯ ಇಲಾಖೆ (ದೇಶದ ಅತಿ ದೊಡ್ಡ ಭೂಮಾಲೀಕ!) ಹಲವಾರು ಸುಳ್ಳುಕೇಸುಗಳನ್ನು ಜಡಿಯಿತು. ನಮ್ಮ ಆ ಹಳ್ಳಿಯಲ್ಲಿ ಶಾಲಾ ಕಟ್ಟಡವಿರದಿದ್ದುದರಿಂದ ನಾವು ಮರಗಳ ಕೆಳಗೆ ಕಲಿಯಬೇಕಾಗಿತ್ತು ಮತ್ತು ಮಳೆ ಶುರುವಾಯಿತೆಂದರೆ ನಮ್ಮ ಶಾಲೆ ಬಂದ್ ಆಗಿಬಿಡುತ್ತಿತ್ತು. ಆದರೆ ಸದಾ ನ್ಯಾಯಕ್ಕಾಗಿ ಹೋರಾಡಬೇಕೆಂಬುದನ್ನು ನಮ್ಮಪ್ಪ ನಮಗೆಲ್ಲ ಕಲಿಸಿದರು. ತನ್ನ ಮನೆ ನಡೆಸೋದೆ ಆತನಿಗೆ ಕಷ್ಟವಾಗಿದ್ದರೂ ತನ್ನ ಸಮುದಾಯದ ಒಳಿತಿಗಾಗಿ ಹೋರಾಡುವುದನ್ನು ಆತನೆಂದು ಬಿಡಲಿಲ್ಲ.

ದುರಾದೃಷ್ಟವಶಾತ್, ಜೂನ್ 20, 1990ರಂದು ಕೇಸೊಂದಕ್ಕೆ ಹಾಜರಾಗಲು ಸಿಮ್ಡೆಗಾ ಸಿವಿಲ್ ಕೋರ್ಟಿಗೆ ಹೊರಟಾಗ ನನ್ನ ತಂದೆ-ತಾಯಿಗಳನ್ನು ಬರ್ಬರವಾಗಿ ಕೊಲ್ಲಲಾಯಿತು. ನಾವು ನಾಲ್ಕು ಮಕ್ಕಳು ಅನಾಥರಾಗಿ ಹೋದೆವು. ಮುಂದೆ ನಾವು ಏನೇನು ಕಷ್ಟಗಳನ್ನು ಎದುರಿಸಿದಿವಿ ಎಂಬುದನ್ನು ಯಾರಿಗಾದರೂ ಊಹಿಸಲು ಸಾಧ್ಯವೇ? ಇನ್ನೂ ಕೆಟ್ಟದ್ದೆಂದರೆ ಕೊಲೆಗಾರರಿಗೆ ಶಿಕ್ಷೆಯೂ ಆಗಲಿಲ್ಲ. ಅಭಿವೃದ್ಧಿ ಹೆಸರಲ್ಲಿ ನಮ್ಮ ಸಂಪನ್ಮೂಲ, ಆಧಾರಗಳನ್ನೆಲ್ಲ ಕಿತ್ತುಕೊಂಡ ಭಾರತದ ಪ್ರಭುತ್ವ ನಮಗ್ಯಾಕೆ ನ್ಯಾಯ ಕೊಡಿಸಲಿಲ್ಲ ಎಂಬ ಪ್ರಶ್ನೆಗೆ ನಿಮ್ಮಲ್ಲಿ ಉತ್ತರವಿದೆಯೇ? ಯಾಕೆ ಇವತ್ತಿಗೂ ನನ್ನೂರಲ್ಲಿ ಕರೆಂಟು ಇಲ್ಲ? ನೀರಾವರಿ ಯೋಜನೆಗಳೆಂದು ನನ್ನ ಜನರ ಭೂಮಿಯನ್ನು ಕಿತ್ತುಕೊಂಡ ಪ್ರಭುತ್ವ ಅವರ ಈಗಿನ ತುಂಡು ಭೂಮಿಗೇಕೆ ನೀರು ಕೊಡುತ್ತಿಲ್ಲ? ಪವರ್ ಪ್ರಾಜೆಕ್ಟ್‌ಗಳಿಗೆ ಭೂಮಿ ಬಿಟ್ಟುಕೊಟ್ಟವರ ಮನೆಗಳಿಗೆ ಯಾಕಿನ್ನೂ ಕರೆಂಟು ಬರಲಿಲ್ಲ? ಸ್ಟೀಲ್ ಉದ್ಯಮಗಳಿಗಾಗಿ ಭೂಮಿ ಕಳೆದುಕೊಂಡ ನನ್ನ ಜನ ಇನ್ನೂ ಯಾಕೆ ಮಣ್ಣಿನ ಮನೆಗಳಲ್ಲೇ ಜೀವ ದೂಡುತ್ತಿದ್ದಾರೆ? ಬಹುಶಃ ಆದಿವಾಸಿಗಳು ಯಾತನೆಯನ್ನೇ ಅನುಭವಿಸಲೆಂದೇ ಹುಟ್ಟಿರಬೇಕು ಮತ್ತು ನಮ್ಮ ಸಂಕಷ್ಟಗಳ ಗೋರಿಗಳ ಮೇಲೆ ಇತರರೆಲ್ಲ ಮಜಾ ಅನುಭವಿಸಬೇಕು ಎಂಬ ನಿಯಮವಿದೆಯೇ?

ಸುದೀರ್ಘ ಹೋರಾಟದ ನಂತರ ನಮ್ಮ ಬದುಕಿನಬಂಡಿ ದಾರಿಗೇನೋ ಬಂತು, ಆದರೆ ನನ್ನ ನೋವು, ಯಾತನೆಗಳು ಮಾತ್ರ ಮುಗಿಯಲಿಲ್ಲ. ಯುರೋಪಿಯನ್ ಕಮಿಷನ್ನಿನ ಆರ್ಥಿಕ ನೆರವಿನಿಂದ ನಡೆಯುತ್ತಿದ್ದ ಪ್ರಾಜೆಕ್ಟ್‌ವೊಂದರಲ್ಲಿ ನಾನು ಯೋಜನಾ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ, ಒಬ್ಬ ಹಿರಿಯ ಸರ್ಕಾರಿ ಅಧಿಕಾರಿ ಮತ್ತು ಒಬ್ಬ ನಿಯತಕಾಲಿಕದ ಸಂಪಾದಕ (ಇಬ್ಬರೂ ಮೇಲ್ಜಾತಿಯವರು) 'ಒಬ್ಬ ಆದಿವಾಸಿಯಾಗಿ ನಿನ್ನ ಅರ್ಹತೆಗಳೇನು, ನೀನು ಇಂತಹ ಮಹತ್ವದ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುವುದು ಹೇಗೆ ಸಾಧ್ಯ?' ಎಂದು ಪ್ರಶ್ನಿಸಿದ್ದರು. ಹೀಗೆಯೇ ಮತ್ತೊಮ್ಮೆ ನನ್ನ ಗೆಳೆಯ ನವವಿವಾಹಿತ ಜೋಡಿಯೊಂದನ್ನು ಭೇಟಿಯಾಗಲು ರಾಂಚಿಗೆ ಕರೆದುಕೊಂಡು ಹೋಗಿದ್ದಾಗ, ನನಗೆ ಆ ನವದಂಪತಿಗಳನ್ನು ಭೇಟಿ ಮಾಡಲು ನಿರಾಕರಿಸಲಾಯಿತು. ಒಬ್ಬ ಆದಿವಾಸಿ ಅವರನ್ನು ಭೇಟಿ ಮಾಡಿದರೆ ಅವರು ಮಲಿನಗೊಳ್ಳುತ್ತಾರೆ ಮತ್ತು ಮುಂದೆ ಅವರ ಇಡೀ ಜೀವನ ಅಲ್ಲೋಲಕಲ್ಲೋಲವಾಗುತ್ತದೆ ಎಂದು ಅವಮಾನಿಸಿದರು.

ಅವರ ಪಾಲಿಗೆ ನಾನೇನು ದೆವ್ವ-ಭೂತವೇ?

ಇದಿರಲಿ, ಮುಂದೆ ನಾನು ಇನ್ನೊಂದು ಕಂಪನಿಗೆ ಕೆಲಸಕ್ಕೆ ಸೇರಿದಾಗ ನನ್ನನ್ನು ನಿರ್ಲಕ್ಷಿಸಲಾಯಿತು. ಮತ್ತು ನನಗೆ ಸಿಗಬೇಕಾಗಿದ್ದ ಸ್ಥಾನವನ್ನು ನಿರಾಕರಿಸಲಾಯಿತು. ನಾನು ಜನಾಂಗೀಯ ತಾರತಮ್ಯಕ್ಕೊಳಗಾದೆ, ಆರ್ಥಿಕವಾಗಿ ಶೋಷಣೆಗೊಳಗಾದೆ, ಮಾನಸಿಕವಾಗಿ ವಿಚಲಿತನಾದೆ. ನಾನು ನ್ಯಾಯದ ಪರ ಯಾಕೆ ಹೋರಾಡಬಾರದು ಎಂದು ಯಾರಾದರೂ ಈಗ ಹೇಳಬಲ್ಲಿರಾ? ಇವತ್ತಿನ ಈ ಅನ್ಯಾಯದ, ಅಸಮಾನ ಅಭಿವೃದ್ಧಿ ಪ್ರಕ್ರಿಯೆಯ ಬೆಂಬಲಿಗರಾಗಿರುವ ಆದರೆ ಸೋ-ಕಾಲ್ಡ್ 'ರಾಷ್ಟ್ರೀಯ ಹಿತಾಸಕ್ತಿ'ಗಾಗಿ ಇವತ್ತಿಗೂ ಒಂದಿಂಚು ಭೂಮಿಯನ್ನು ಕಳೆದುಕೊಳ್ಳದವರೇ ಮತ್ತು ನನ್ನನ್ನು ಮಾವೋ ಸಿದ್ಧಾಂತಿ, ಸಿಂಪಥೈಸರ್, ಬೆಂಬಲಿಗ ಎನ್ನುವವರೇ, ನನ್ನೀ ಪ್ರಶ್ನೆಗೆ ಪ್ರತಿಕ್ರಿಯಿಸಿ: "ಯಾಕೆ ನಾನು ಬಾಯ್ಮುಚ್ಚಿಕೊಂಡು ಕುಳಿತಿರಬೇಕು ಮತ್ತು ಅನ್ಯಾಯ, ಅಸಮಾನತೆ, ಶೋಷಣೆಗಳ ವಿರುದ್ಧ ಬರೆಯಬಾರದು?"



ನಾನು ಅಭಿವೃದ್ಧಿಯ ಹೆಸರಲ್ಲಿ ಎಲ್ಲವನ್ನು ಕಳೆದುಕೊಂಡಿದ್ದೇನೆ ಮತ್ತು ಈಗ ಕಳೆದುಕೊಳ್ಳಲು ನನ್ನ ಬಳಿ ಏನೂ ಇಲ್ಲ. ಆದ್ದರಿಂದ ನನ್ನ ಜನರಿಗಾಗಿ ಹೋರಾಡಲು ನಾನು ನಿರ್ಧರಿಸಿದ್ದೇನೆ. ಯಾಕೆಂದರೆ ಅವರು ಮತ್ತೆ ಈ ಅಭಿವೃದ್ಧಿಯ ಹೆಸರಲ್ಲಿ ಸಿಕ್ಕಿಹಾಕಿಕೊಂಡು ಸಾಯಬಾರದಲ್ಲವೇ? ಭಾರತ ಸಂವಿಧಾನ ವಿಧಿ 19ರ ಮೂಲಕ ಒದಗಿಸಿರುವ ಪ್ರಜಾತಾಂತ್ರಿಕ ಹೋರಾಟ ಮಾರ್ಗದಲ್ಲಿ ನಾನು ಪ್ರತಿಭಟಿಸುತ್ತಿದ್ದೇನೆ. ಒಂದು ಪೆನ್ನು, ಬಾಯಿ ಮತ್ತು ಮನಸ್ಸು ಇವು ನನ್ನ ಆಯುಧಗಳು. ನಾನು ಮಾವೋವಾದಿಯೂ ಅಲ್ಲ, ಗಾಂಧಿವಾದಿಯೂ ಅಲ್ಲ, ನಾನೊಬ್ಬ ಆದಿವಾಸಿ. ಭಾರತದ ಪ್ರಭುತ್ವದಿಂದ ಎತ್ತಂಗಡಿಯಾದ, ಶೋಷಣೆಗೊಳಗಾದ, ಅನ್ಯಾಯಕ್ಕೊಳಗಾದ, ಅಭಿವೃದ್ಧಿ-ರಾಷ್ಟ್ರೀಯ ಭದ್ರತೆ-ರಾಷ್ಟ್ರದ ಹಿತಾಸಕ್ತಿಗಳ ಹೆಸರಲ್ಲಿ ಪರದೇಸಿಗಳಾಗುತ್ತಿರುವ ನನ್ನ ಜನರಿಗಾಗಿ ದೃಢವಾಗಿ ಹೋರಾಡುತ್ತಿರುವ ಆದಿವಾಸಿ ನಾನು.

• ಕನ್ನಡಕ್ಕೆ: ಮಲ್ಲನಗೌಡರ್

ಹಿಂಗಂತಲ್ಬೇ ಖರೆಯನು?

"ಅಲ್ಬೇ ಯತ್ತಿ, ಈ ಸಲ ನಮ್ಮೂರ್ ಪಾಲ್ಗೆ ಎಲಕ್ಸನ್ನs ಇಲ್ಲಂತs.... ವೋಟು ಇಲ್ದನಾ ಎಲಕ್ಸನ್ನು ಮುಗ್ಸಿಬಿಟ್ಟಾರಂತ......"

"ತಮ್ಗ ಬೇಕ್ ಬೇಕಾದೋರ್ನ ಮೆಂಬರು ಮಾಡಿಕೊಂಡಾರ. ಆ ಮ್ಯಾಲಿನ ಮನಿ ಹನ್ಮನಗೌಡ ಮಲ್ಲೇದೇವ್ರು ಗುಡಿ ಮುಂದ ದೊಡ್ ಕಟ್ಟಿ ಕಟ್ಟಾಕ ಯಾಡು ಲಕ್ಷ ರೊಕ್ಕ ಕೊಟ್ನಂತ, ಅದಕ್ಕನ ಮೆಂಬರ್ರು ಅಂತಾ. ಐನೇರು ಗಂಗವ್ವ ಗುಡಿ ರಿಪೇರಿಗೆ ಲಕ್ಷ ರೂಪಾಯಿ ಕೊಡ್ತಾಳಂತ. ಆಕೀನೂ ಈಗ ಮೆಂಬರ್ರು.... ಇವರ್ಗೆಲ್ಲಾ ಇಷ್ಟು ರೊಕ್ಕ ಎಲ್ಲಿಂದ ಬಂತ್ಲೆ?"

"ಕೂಡಿಟ್ಟಿದ್ದ್ ರೊಕ್ಕ ಇರ್ಬೇಕು ಬಿಡ್ಬೆ ಮಲ್ಲೇದೇವ್ರು ಮ್ಯಾಲ ಅವರಿಟ್ಗೋರು ಭಕ್ತಿಗರ ಮೆಚ್ಚಬೇಕು ಅವರ್ನ....."

"ಎಂದೂ ಇಲ್ಲದ್ದು ಭಕ್ತಿ ಈಗ ಬಂದ್ಬಿಟ್ಟಿತ್ತನು? ಏನಿಲ್ಲ, ಇವತ್ತು ಗುಡಿಗೆ ಕೊಡ್ತಾರ. ನಾಳೆ ಪಂಚಾಯ್ತಿ ಬೋಳಿಸ್ತಾರ.... ಟಿಪಿಯೊಳ್ಗ ನೋಡಿದ್ರ, 'ವೋಟ್ ತಪ್ಪಿಸಿಕೊಬ್ಯಾಡ್ರಿ. ಅದು ನಿಮ್ಮ ಹಕ್ಕು' ಅಂತಾ ಹಗ್ಲೂ ರಾತ್ರಿ ಹೊಯ್‌ಕೊಂತಾರ... ಇಲ್ಲಿ ನೋಡಿದ್ರ ರೊಕ್ಕಕ್ಕ ಪಂಚಾಯ್ತಿ ಹರಾಜ್ ಹಾಕಿ ವೋಟಿs ಇಲ್ದಂಗ ಮಾಡ್ತಾರ. ನಮ್ಗ ಸರಿ ಅನಿಸಿದೋರ್ಗೆ ನಾವು ವೋಟ್ ಹಾಕ್ಬೇಕು. ಅದು ಬಿಟ್ಟು ರೊಕ್ಕದ ಗಂಟು ಇದ್ದಂಗ ಮೆಂಬರು ಮಾಡಿದ್ರ ಇನ್ನೇನ್ ಉಳೀತು?"

"ಆಲ್ಬೇ ನಮ್ ಕೇರ್ಯಾಗೂ ಹಿಂಗs ಮಾಡ್ಯಾರ. ಅಂವ ನಮ್ ಕಾಕಾ ಲಚ್ಚಪ್ಪ ಮಲ್ಲೇದೇವ್ರು ಗುಡಿಗೆ 50 ಸಾವಿರ ಕೊಟ್ ಮೆಂಬರ್ ಆಗ್ಯಾನ...."

"ಇಲ್ ಬಿಡ್ಲೇ. ಅಂವಾ ಎಲ್ಲಿಂದ ಅಷ್ಟು ರೊಕ್ಕಾ ತರ್‍ತಾನ? ಎಲ್ಲಾ ರೊಕ್ಕಾನೂ ಎಮ್ಮೆಲ್ಲೇನಾ ಕೊಟ್ಟಿರ್ತಾನ. ಇವ್ರು ನಿಜವಾಗ್ಲೂ ಭಕ್ತಿ ಇರೋರಾದ್ರ ನಿಮ್ಮ ಕೇರ್ಯಾಗಿನ ದುರ್ಗವ್ವನ ಗುಡಿ ರಿಪೇರಿ ಮಾಡನ್ನು, ಅಲ್ಲಾಸಾಬನ ಮಸೂತಿ ರಿಪೇರಿ ಮಾಡನ್ನು....."

"ಅಂತೂ ಕೈ ಬೆಳ್ಳಿ ಮಸಿ ಗುರ್ತು ಬೀಳಾದ ತಪ್ಪು ಅನ್ನು...."

"ಇಲೆಕ್ಷನ್ನು ಅಂದ್ರೇನು ಮಾಡಿ, ಬೆಳ್ಳಿ ಮಸಿ ಹಾಕ್ಸಿಕೊಂಡ್ ಬರಾದಷ್ಟ ಆಗೈತಿ... ಈ ಸಲಾ ಅದ್ನೂ ಇಲ್ಲಂತ...."

"ಅಲ್ಬೇ ಯತ್ತಿ, ಹ್ಯಾಂಗೂ ಮಲ್ಲೇದೇವ್ರು ನಿಮ್ಮನಿ ದೇವ್ರು. ನೀನೂ ಒಂದ್ ಲಕ್ಷs ಕೊಟ್ಟು ಮೆಂಬರ್ ಆಗಿಬಿಡಬೇಕಿತ್ತು ಬಿಡ್ಬೆ...."

"ತಲಿಗಿಲಿ ಕೆಟ್ಟೈತನು ನಿನಗ? ನಮ್ ಕೈಲಿ ಆದಾಟು ಕಾಣ್ಕಿ ಕೊಡ್ಬೇಕು. ದೇವ್ರಿಗೆ ಲಂಚಾ ಕೊಟ್ಟು, ಆಮ್ಯಾಲ ಪಂಚಾಯ್ತಿ ಬೋಳಿಸ್ತರ ಯಾ ದೇವ್ರೂ ಮೆಚ್ಚಂಗಿಲ್ಲ...."

"ವೋಟು ಇಲ್ಲಂದ್ರೂ ಸರಿ ಹಂಚೋದು ಬಿಡಂಗಿಲ್ಲಂತ....."

"ಚಲೋ ಆಳಿಕಿ ಬಿಡು ಇದು. ಅಂವಾ ಯಡಿಯೂರಪ್ಪ ನಮ್ ರೊಕ್ಕಾನೆಲ್ಲ ಮಠಮಠಕ್ಕ ಹಂಚ್ತಾನ. ಅವ್ನ ನೋಡಿ ಇಲ್ಲಿ ಇವ್ರೂ ಗುಡಿ ರಿಪೇರಿ ಅಂತಾ ಹಾರ್‍ಯಾಡ್ತವ್ರು. ಮೊದ್ಲ ಆ ಸಾಲಿಗುಡಿ ರಿಪೇರಿ ಮಾಡನ್ನು. ನಾಕು ಹುಡುಗ್ರು ನಾಕು ಅಕ್ಷರನರ ಕಲಿತಾವು...."

• ಮುನ್ನಿ, ಗದಗ

ಗೋಡಂಬಿ ಮತ್ತು ಕಮಲಕ್ಕ

ತೀರ ಇತ್ತೀಚಿನ ದಿನಗಳವರೆಗೂ ಗೋಡಂಬಿ ಕಂಡರೆ ನನಗೆ ವಿಶೇಷ ಪ್ರೀತಿ. ಅದೊಂದು ಐಷಾರಾಮಿ ಆಹಾರ ಎಂಬ ಕಲ್ಪನೆ ಎಳೆವಯಸ್ಸಿನಿಂದಲೂ ನನ್ನಲ್ಲಿ ಅಚ್ಚೊತ್ತಿ, ಅದರ ಬಗ್ಗೆ ಒಂದು ಬಗೆಯ ಆಕರ್ಷಣೆ ಮತ್ತು ಆಸ್ಥೆ. ಬಾಲ್ಯದಲ್ಲಿ ಶಾಲೆಗೆ ಹೋಗಿಬರುವಾಗೆಲ್ಲ ಗೇರುತೋಟದ ನಡುವೆ ನಮ್ಮ ಪಯಣ ಅನಿವಾರ್ಯವಾಗಿತ್ತು, ಅಲ್ಲಿ ಗೇರು ಎಲೆಯ ಚಿಗುರನ್ನು, ಅದು ಹೂ ಬಿಟ್ಟಾಗ ಹೂವನ್ನು ಚಿವುಟಿ ಅದರ ಒಗರೊಗರು ರುಚಿ ಹೀರಿ, ಸುಖಿಸುತ್ತಿದ್ದೆವು. ಕಾಯಿ ಬಿಟ್ಟಾಗ ಅದು ಹಳದಿಯೋ ಕಡುಗೆಂಪೋ ಬಣ್ಣ ತಾಳುವವರೆಗೆ ಕಾದು, ಕಲ್ಲುಹೊಡೆದು ಯಾರ್‍ಯಾರ ಸಂಪಾದನೆ ಎಷ್ಟೆಷ್ಟು ಎಂದು ಲೆಕ್ಕಹಾಕುತ್ತಿದ್ದೆವು. ಹುಡುಗರದು ಬೇರೆ ಆಟ. ಗೋಲಿ ಆಟದಂತೆ ಅವರದು ಕಾಯಿ ಆಟ; ಅನಂತರ ಆಟದಲ್ಲಿನ ಸಂಪಾದನೆಯ ಪರಾಮರ್ಶೆ. ಬೇಸಿಗೆ ರಜೆ ಬಂದೊಡನೆ ಮನೆಯ ಮಕ್ಕಳೆಲ್ಲರೂ ತಾವು ಗಳಿಸಿದ ಗೇರುಬೀಜವನ್ನು ಗುಡ್ಡೆಮಾಡಿ, ಇದ್ದಿಲ ಒಲೆ ಒಣಗಿದ ಪುರಲೆಗೆ ಬೆಂಕಿ ಹಚ್ಚಿ ಅವುಗಳನ್ನು ಸುಡುವುದು ಕ್ರಮ. ಹೀಗೆ ಸುಡುವಾಗ ಪಸರಿಸುವ ಪರಿಮಳದ ಘಮಲಿಗೆ ಮೂಗರಳಿಸಿ, ಜೊಲ್ಲು ಸುರಿಸುತ್ತ ಕೂರುತ್ತಿದ್ದುದೂ ಸಾಮಾನ್ಯ. ಸುಟ್ಟ ಗೇರುಬೀಜಗಳನ್ನು ಒಳಗಿನ ಗೋಡಂಬಿ ತುಂಡಾಗದಂತೆ ಕಲ್ಲಿಂದ ಜಜ್ಜಿ ಹೊರಗೆಳೆಯುವುದಕ್ಕೆ ನಾಮುಂದು ತಾಮುಂದು ಎಂದು ಜಗ್ಗಾಟ. ಇದು ತುಂಡಾಯ್ತು ಇದು ಕಪ್ಪಾಯ್ತು ಇದು ಬೆಂದಿದೆಯಾ ನೋಡ್ತೀನಿ. . . . ಹೀಗೆ ಹತ್ತಾರು ನೆಪ ಹೂಡ್ತಾ ಅಲ್ಲಲ್ಲೇ ಬಾಯಿಗೆ ಎಸೆದುಕೊಳ್ಳುವುದು ನಮ್ಮ ಉದ್ದೇಶ. ಅದರ ರುಚಿಯೇ ಬೇರೆ.

ಕೆಲವೊಮ್ಮೆ ಅಪ್ಪನ ಜೊತೆ ಆತನ ಸ್ನೇಹಿತರ ಮನೆಗೆ ಹೋದಾಗ, ಅಲ್ಲಿ ತಿನ್ನಲೆಂದು ಮಸಾಲೆಗೋಡಂಬಿ, ಉಪ್ಪು ಬೆರೆಸಿದ ಗೋಡಂಬಿಗಳನ್ನು ತಟ್ಟೆಯಲ್ಲಿ ತಿನ್ನಲೆಂದು ತಂದಿಟ್ಟಾಗ, ಅವರೆಂಥಾ ಶ್ರೀಮಂತರಿರಬಹುದು ಎಂದು ಅಕ್ಕತಂಗಿಯರು ನಾವು ಪರಸ್ಪರರಲ್ಲಿ ಲೆಕ್ಕಾಚಾರ ಮಾಡುತ್ತಿದ್ದುದೂ ಇತ್ತು, 'ನಾವು ಆ ಮನೆಯಲ್ಲಿ ಹುಟ್ಟಿದ್ರೆ ಎಷ್ಟು ಗಮ್ಮತ್ತಿತ್ತು' ಎಂದು ಒಂದುಕ್ಷಣ ಕರುಬುತ್ತಿದ್ದೆವು. ಇಂದು ಅವೆಲ್ಲ ನಗು ತರಿಸುವ ಕ್ಷಣಗಳು. ಇಂದು ಮಂಗಳೂರಿನ ನನ್ನ ಮನೆಗೆ ವಿಶೇಷ ಅತಿಥಿಗಳು ಬಂದಾಗ, ಇಲ್ಲವೇ ಅಂಥವರ ಮನೆಗಳಿಗೆ ನಾವು ಹೊರಟರೆ 'ಫಾಲ್ಗುಣಿ'ಯ ಗೋಡಂಬಿ ಪ್ಯಾಕೆಟ್ ನೀಡುವುದು ಒಂದು ಕ್ರಮವಾಗಿದೆ. ಆದರೂ ಅದೊಂದು ಐಷಾರಾಮಿ ತಿಂಡಿ ಎಂಬ ಭಾವ ಮಾತ್ರ ಮರೆಯಾಗಿಲ್ಲ.

ಕೆಲವೊಮ್ಮೆ ಪ್ರಯಾಣ ಮಾಡುವಾಗ ಗೋಡಂಬಿ ಸುಡುವ ಪರಿಮಳ ಎದುರಾದೊಡನೆ ನನ್ನ ಮೂಗು ಅರಳುತ್ತದೆ, ಮನಸ್ಸು ಪ್ರಫುಲ್ಲವಾಗುತ್ತದೆ, ಬಾಲ್ಯ ನೆನಪಾಗುತ್ತದೆ. ಜೊತೆಜೊತೆಗೆ ಗೋಡಂಬಿ ಫ್ಯಾಕ್ಟರಿಗೆ ಒಮ್ಮೆ ಹೋಗಬೇಕು ಎಂದು ಪಕ್ಕದವರಲ್ಲಿ ಹೇಳುವುದು ಒಂದು ರೂಢಿಯಾಗಿಬಿಟ್ಟಿದೆ. ಈ ನನ್ನ ಇಚ್ಛೆಗೆ ಪ್ರಬಲವಾದ ಒತ್ತಾಸೆ ಇಲ್ಲವಾದ ಕಾರಣದಿಂದ ಬಹುಶಃ ಮಂಗಳೂರಲ್ಲೇ ಇದ್ದು ಇದುವರೆಗೂ ನನಗೆ ಗೋಡಂಬಿ ಫ್ಯಾಕ್ಟರಿಗೆ ಹೋಗಲಾಗಿಲ್ಲ, ಅದನ್ನು ಹೇಗೆ ಸುಡುತ್ತಾರೆ, ಹೇಗೆ ಬೇರ್ಪಡಿಸುತ್ತಾರೆ, ಕೂಲಿಗಾರರ ಕೈಗಳ ಚರ್ಮ ಸುಲಿಯುತ್ತದಾ? ಇವೇ ಮೊದಲಾದ ಕುತೂಹಲ ಇರುವಂತೆಯೇ, ಅವರದೆಂಥಾ ಸುವರ್ಣಾವಕಾಶ! ಬಿಡಿಸ್ತಾ ಬಿಡಿಸ್ತಾ ಆಗೊಮ್ಮೆ ಈಗೊಮ್ಮೆ ಬಾಯಿಗೂ ಹಾಕಬಹುದಲ್ಲಾ ಎಂಬ ಊಹೆ ಬೇರೆ. ಇಂಥ ಆಲೋಚನೆ ಮಾಡುವಾಗೆಲ್ಲ, ಅಜ್ಜಿ ಮನೆಯಲ್ಲಿ ಶೇಂಗಾಕಾಯಿಂದ ಬೀಜ ಬಿಡಿಸುತ್ತಿದ್ದ ಕೂಲಿಯಾಳುಗಳು ನನಗೆ ಯಾವತ್ತೂ ನೆನಪಾಗಿದ್ದೇ ಇಲ್ಲ. (ಅವರು ದಿನದ ಕೆಲಸ ಮುಗಿಸಿ ಹೋಗುವಾಗ, ಅಜ್ಜ ಅವರ ಲೆಕ್ಕಾಚಾರ ನೋಡಿ ಹಣ ಪಾವತಿಸಿದರೆ, ಅಜ್ಜಿ ಅವರ ಸೆರಗು, ಉಡಿ ಮತ್ತು ಬಾಳೇಕಾಯಿ ಗಂಟು ಮುಂತಾದವುಗಳ ತಪಾಸಣೆಗೆ ನಿಲ್ಲುತ್ತಿದ್ದಳು. ಆದರೂ ಅವಳ ಬುದ್ಧಿ ಗೊತ್ತಿದ್ದ ಹೆಣ್ಣಾಳುಗಳು, ಅದ್ಹ್ಯಾಗೋ ಒಂದಿಷ್ಟು ಕದ್ದುಮುಚ್ಚಿ ಶೇಂಗಾ ಒಯ್ಯುತ್ತಿದ್ದರು.) ಎಳೆ ಶೇಂಗಾ ಕಾಳುಗಳನ್ನು ಅವರು ಅನಾಮತ್ತಾಗಿ ಬಾಯಿಗೆ ಎಸೆದುಕೊಳ್ಳುತ್ತಿದ್ದಂತೆ, ಗೋಡಂಬಿ ಬಿಡಿಸುವವರೂ ಚೂರು ಚೂರಾದ ಗೋಡಂಬಿಯನ್ನು ಬಾಯಿಗೆ ಎಸೆದುಕೊಳ್ಳುತ್ತಿರುತ್ತಾರೆ ಎಂದು ತಿಳಿದಿದ್ದೆ.

ಕಳೆದ ತಿಂಗಳು ಪುನರ್‌ವಸತಿ ಸಂತ್ರಸ್ತರ ಸಮಸ್ಯೆಗಳನ್ನು ಆಲಿಸಲು ಪಡುಬಿದ್ರಿ ಸಮೀಪದ ಹಳ್ಳಿಯೊಂದಕ್ಕೆ ಹೋಗಿದ್ದೆ. ಅವರು ಮೂಲಸ್ಥಳಗಳನ್ನು ಬಿಡಬೇಕಾಗಿ ಬಂದ ಕಾರಣ, ಅದರಿಂದ ಅವರು ಕಳಕೊಂಡ ಜಮೀನಿನ ವ್ಯಾಪ್ತಿ, ಅಲ್ಲಿಯ ಅವರ ಕೃಷಿ, ಸದ್ಯ ಅವರು ಪಡೆದ ಜಾಗ ಮತ್ತು ಹಣ ಹೀಗೆ ಅವರ ಒಂದೊಂದೇ ಸಮಸ್ಯೆಗಳನ್ನು ಆಲಿಸುತ್ತ ಅವರ ಹೋರಾಟದ ಸ್ವರೂಪಗಳನ್ನು ದಾಖಲಿಸಿಕೊಳ್ಳುತ್ತಿದ್ದೆವು. ಆ ವೇಳೆಗೆ ಹಿಂದಿನ ಅವರ ಸ್ವಂತ ಜಮೀನಿನಲ್ಲಿ ಅವರ ದುಡಿಮೆಯ ಮತ್ತು ಉತ್ಪನ್ನಗಳ ಬಹುಸಾಧ್ಯತೆಗಳೂ ಇಲ್ಲಿ ಸರಕಾರಿ ಜಮೀನಿನಲ್ಲಿ ಎರಡೂ ಇಲ್ಲದ ಅವರ ಸ್ಥಿತಿಗಳು ಕಣ್ಣಿಗೆ ಹೊಡೆದು ಕಾಣುತ್ತಿದ್ದವು. ಅಲ್ಲೇ ಎದುರಾದಾಕೆ ಕಮಲಕ್ಕ, ಸಂತ್ರಸ್ತರ ಮಹಿಳಾ ಮುಖಂಡಳಾದ ಅವಳನ್ನು ಮಾತನಾಡಿಸಲೆಂದು ಹೋದೆವು.

ತನ್ನ ಮತ್ತು ಇಡೀ ಕಾಲೋನಿಯ ಮಹಿಳೆಯರ ಸಮಸ್ಯೆಯನ್ನು ಎಳೆಎಳೆಯಾಗಿ ತೆರೆದಿಟ್ಟ ಕಮಲಕ್ಕ, ಒಂದು ಚಿಕ್ಕತಟ್ಟೆಯಲ್ಲಿ ನಾಲ್ಕಾರು ಗೋಡಂಬಿ ಬೀಜ ಹಾಕಿ, ಒಂದು ತಂಬಿಗೆ ನೀರನ್ನು ಹಿಡಿದು ತಂದಳು. ಅವಳ ಮನೆಯಲ್ಲಿ ಪ್ರತ್ಯಕ್ಷವಾದ ಗೋಡಂಬಿ ನನ್ನನ್ನು ಚಕಿತಗೊಳಿಸಿತು. ಅವಳ ಔದಾರ್ಯಕ್ಕೆ ತಲೆಬಾಗಿದರೂ, ಅದನ್ನು ಮುಟ್ಟಲೊಲ್ಲದೆ, ಅವಳೊಡನೆ ಮಾತಿಗೆ ಕುಳಿತಿದ್ದೆವು. ಅಷ್ಟರಲ್ಲೇ ನನ್ನ ಗಮನ ಮೆಟ್ಟಿಲ ಮೇಲೆ ಉದುರಿದ್ದ ಗೇರುಬೀಜಕ್ಕೆ ಅಂಟಿಕೊಂಡ ಕೆಂಪು ಪದರದ ಪುಡಿಯತ್ತ ಹರಿಯಿತು. ಅದೇ ಕ್ಷಣ ಕಮಲಕ್ಕನೂ ಅದನ್ನು ಕಂಡು ಒಂದು ಕಾಗದದ ತುಂಡು ತಂದು ಆ ಉದುರಿದ ಪುಡಿಯನ್ನು ಬಳಿದುಕೊಂಡು ಪೊಟ್ಟಣ ಕಟ್ಟಿದಳು. ಇದು ಇನ್ನಷ್ಟು ಕುತೂಹಲ ಉಂಟುಮಾಡಿ, ಹಾಗೆ ಯಾಕೆ ಮಾಡಿದ್ದೆಂದು ಕೇಳಿದೆ. "ನಾನು ಇಲ್ಲಿಗೆ ಬಂದ ಮೇಲೆ ಮಾಡಲು ಬೇರೆ ಕೆಲಸ ಇಲ್ಲದ್ದಕ್ಕೆ, ಹತ್ತಿರದ ಗೇರುಬೀಜದ ಕಾರ್ಖಾನೆಯ ಕೆಲಸ ಒಪ್ಪಿಕೊಂಡಿದ್ದೇನೆ" ಎಂದಳು. "ಹಾಗಾದ್ರೆ ಇವತ್ತು ನಮಗಾಗಿ ರಜಾ ಹಾಕಿದ್ರಾ" ಎಂದೆ. "ಇಲ್ಲ, ಇಲ್ಲ ನಾನು ದಿನಾ ಬೆಳಗ್ಗೆ ಸುಟ್ಟ ಗೋಡಂಬಿ ತಂದು, ಅದರ ಸಿಪ್ಪೆ ಬಿಡಿಸಿ, ಬೇಳೆ, ಕಾಳು, ಸಿಪ್ಪೆ ಎಲ್ಲ ಬೇರ್ಪಡಿಸಿ, ಪೊಟ್ಟಣ ಕಟ್ಟಿ ಒಯ್ತೀನಿ. ಅವ್ರು ತೂಕ ಮಾಡಿ ಕೂಲಿ ಕೊಡ್ತಾರೆ" ಎಂದಳು. ಕೇಳುತ್ತಾ ಹೋದಂತೆ ಒಂದು ಕೆಜಿ ಗೋಡಂಬಿಗೆ ದೊರೆವ ಕೂಲಿ ಏಳು ರೂಪಾಯಿ ಎಂದು ತಿಳಿಯಿತು. ಅವಳ ಕೂಲಿಯ ಅಪವಮೌಲ್ಯವನ್ನು ಅರಗಿಸಿಕೊಳ್ಳುವಷ್ಟರಲ್ಲಿ, ಕಾರ್ಖಾನೆಯಿಂದ ತಂದ ಮಾಲನ್ನು ಹಿಂದಿರುಗಿಸುವಾಗ ಗೋಡಂಬಿ, ಅದರ ಮೇಲಿನ ತೆಳು ಸಿಪ್ಪೆಯ ಧೂಳು, ಹೊರಗಿನ ದಪ್ಪ ಸಿಪ್ಪೆ ಅದನ್ನು ಕುಟ್ಟುವಾಗ ಬೀಳುವ ಪುಡಿ ಎಲ್ಲವನ್ನೂ ಅವರು ಎಷ್ಟು ಜತನದಿಂದ ಎತ್ತಿಟ್ಟು ಒಯ್ಯಬೇಕು ಎಂಬುದು ತಿಳಿದು ಇನ್ನಷ್ಟು ಗಾಬರಿಗೊಂಡೆ. ತೂಕ ಕಡಿಮೆ ಆದರೂ ಕೂಲಿಗೆ ಖೋತಾ. ಬೀಡಿ ಕಟ್ಟುವವರಿಗಿಂತ ಇವರದು ಎಂಥಾ ಕಷ್ಟ ಎನಿಸಿತು. ಚಿನ್ನದ ಅಂಗಡಿಯಲ್ಲಿ ಉದುರಿದ ಚಿನ್ನದ ಪುಡಿಯನ್ನು ಸಂಗ್ರಹಿಸಲಾದರೂ ಅವರ ಬಳಿ ಸಾಧನ ಉಪಕರಣಗಳಿವೆ. ಇವರು ಈ ಧೂಳನ್ನೂ ಒಯ್ದು ತೂಕಕ್ಕೆ ಹಾಕಬೇಕಂದ್ರೆ. . . . ಊಹಿಸುತ್ತ ಹೋದಂತೆ ಮೈಜುಂ ಎಂದಿತು. ಊಟಕ್ಕೇ ತತ್ವಾರ ಇರುವ ಈ ಮಂದಿ, ಮನೆಯಲ್ಲೇ ಗೋಡಂಬಿ ಬಿಡಿಸ್ತಾ, ತಮ್ಮ ಹಾಗೂ ತಮ್ಮ ಮನೆಮಂದಿಯ ಜಿಹ್ವೆಗೆ ಹೊಲಿಗೆಹಾಕಿ ಬದುಕಬೇಕಾದ ಸ್ಥಿತಿ ನೆನಪಿಸಿಕೊಂಡು ಕರುಳ್ ಚುರ್ ಎಂದಿತು.

ಅಷ್ಟರಲ್ಲಿ ಮನೆಯೊಳಗಿಂದ ಕಮಲಕ್ಕನ ಮೊಮ್ಮಗು ಹೊರಗೆ ಓಡಿಬಂದರೆ, ಅದರ ಹಿಂದೆಯೇ ಅನಾರೋಗ್ಯದಿಂದ ಹಾಸಿಗೆ ಹಿಡಿದ ಅದರ ತಾಯಿಯ ಬೊಬ್ಬೆಯೂ ಕಿವಿಗಪ್ಪಳಿಸಿತು. ಏನು ಎಂದು ನೋಡುವಷ್ಟರಲ್ಲಿ ಕಮಲಕ್ಕ ಮಗುವಿನ ಮುಷ್ಟಿ ಬಿಡಿಸಲು ನಾನಾ ಉಪಾಯ ಮಾಡುತ್ತಿದ್ದಾಳೆ. ಕೊನೆಗೆ ಬಲವಂತದಿಂದ ಅದರ ಬಾಯಿಗೆ ಬೆರಳುಹಾಕಿದಳು; ಆ 'ಬಾಲಕೃಷ್ಣ' ವಿಶ್ವರೂಪದ ಬದಲು ಅಜ್ಜಿಗೆ ಗೋಡಂಬಿ ಲೋಕವನ್ನು ತೋರಿಸಿದ. ಹೊಡೆಯಲೆಂದು ಎತ್ತಿದ ಕೈಯನ್ನು ಕಮಲಕ್ಕ ಇಳಿಸಿದಳು. ಬೇರೇನೋ ತೋರಿಸಿ, ಅದರ ಮುಷ್ಟಿಯಲ್ಲಿದ್ದ ಗೇರುಬೀಜವನ್ನು ತೆಗೆದು ಒಳಗೋಡಿದಳು. ನಮ್ಮೆದುರಿನ ಗೋಡಂಬಿ ನಮ್ಮನ್ನೇ ನೋಡಿ ನಗುತ್ತಿದ್ದವು. ಮಾತುಮುಗಿಸಿ ನಾವು ಹೊರಟುನಿಂತಾಗ, ನಾವೆಷ್ಟೇ ತಿರಸ್ಕರಿಸಿದರೂ ನಮ್ಮ ಉಡಿಯಲ್ಲಿ ಕಮಲಕ್ಕ ನಾಲ್ಕು ಗೋಡಂಬಿ ತುರುಕಿದ್ದಳು.

ಮೊದಲಬಾರಿಗೆ ಗೋಡಂಬಿಯ ಅದ್ಭುತರಮ್ಯ ಕನಸು ಒಡೆದು, ಅದರ ರುಚಿ ಹಿನ್ನೆಲೆಗೆ ಸರಿದು, ಅದರ ಹಿಂದಿನ ಒಡಲುರಿಯ ದರ್ಶನ ನನಗಾಗಿತ್ತು. ಅಂತೆಯೇ ಈಗೀಗ ಗೋಡಂಬಿ ಕಂಡರೆ ನನಗೆ ಅಷ್ಟಕಷ್ಟೇ.



• ಡಾ. ಸಬಿಹಾ ಭೂಮೀಗೌಡ



ರಾಮರಾಜ್ಯದ ಕನಸು

ನಾನೊಂದ ಕನಸ ಕಂಡೆ
ರಾಮರಾಜ್ಯದ್ದು; ರಾಮಾಯಣದ್ದಲ್ಲ.

ಸತ್ವವೆಲ್ಲ ಕೂಡಿ
ದೋಷವನು ಕಳೆದು
ಜೊಳ್ಳು ತೂರಿ
ಗಟ್ಟಿ ಉಳಿದ ರಾಮರಾಜ್ಯ.

ನಾನೊಂದ ಕನಸ ಕಂಡೆ...

ಮಂಥರೆ ಕೈಕೆಯಿಯರಿಲ್ಲ
ದಶರಥ-ದಶಮುಖಿಗಳಿಲ್ಲ
ಪ್ರಜಾಪರ-ಏಕಮುಖರೇ ಎಲ್ಲ
ಪಕ್ಷಪಾತಾಘಾತಗಳಿಲ್ಲದ ರಾಜ್ಯ

ನಾನೊಂದ ಕನಸ ಕಂಡೆ...

ರಾಮ-ಲಕ್ಷ್ಮಣರಂಥ ವಾಲಿ-ಸುಗ್ರೀವರು
ಅಳಿಮನದ ಲಂಕೆಗೆ ಕಿಚ್ಚಿಟ್ಟ ಹನುಮರು
ಅಲ್ಲಿಲ್ಲ ಬಾಲ ಹೋದ ವಾನರರು
ಜಿಂಕೆ ರೂಪದ ರಾಕ್ಷಸರು.

ನಾನೊಂದ ಕನಸ ಕಂಡೆ...

ತನ್ನ ತಾ ಗೆದ್ದ ಮೇಲೆ
ಇನ್ನಾರ ಜಯಿಸುವದು?

ಅಶ್ವಮೇಧಗಳಿಲ್ಲ, ಕುದುರೆಗಳೂ ಇಲ್ಲ
ಆದರೂ ಕನಸಿನಲಿ ಯುದ್ಧಗಳು ನಿಂತಿಲ್ಲ.

ನಾನೊಂದ ಕನಸ ಕಂಡೆ...

ರಾಮಾವತಾರ ಅಲ್ಲಿ
ರಕ್ಕಸರ ದಮನಕ್ಕಲ್ಲ
ರಾಕ್ಷಸತ್ವದ ನಿರ್ನಾಮಕ್ಕೆ
ಮಾನವತ್ವದ ನಿರ್ಮಾಣಕ್ಕೆ.

ನಾನೊಂದ ಕನಸ ಕಂಡೆ...

ಆನೆಯನೂ ಇರುವೆ
ವರಿಸಬಹುದಲ್ಲಿ
ಒಂದು ಎದೆ ಹತ್ತು ತಲೆಗಳನು
ಉಳಿಸಬಹುದು.

ನಾನೊಂದ ಕನಸ ಕಂಡೆ...

ವನವಾಸಗಳೇ ಎಲ್ಲ
ಇಲ್ಲ ಒಣವಾಸಗಳು
ಅಗಸಗೂ ಬೆಲೆಯುಂಟು
ಸೀತೆಗೂ ನೆಲೆಯುಂಟು
ನಾನು ನೊಂದು
ಒಂದು ಕನಸ ಕಂಡೆ
ರಾಮರಾಜ್ಯದ್ದು; ರಾಮಾಯಣದ್ದಲ್ಲ.

• ಸುಭಾಸ ಯಾದವಾಡ

ಇದು ಒಂದು ನಮೂನಿ ಸಂಗ್ಯಾನ ಕತಿ ಇದ್ದಾಂಗೈತಲ್ರಿ!

ಉಗ್ರಿ, ತುಂಬ ರಸವತ್ತಾಗಿ ಹರತಾಳು ಹಾಲಪ್ಪನ ದರದ ಪುರಾಣ ಹೇಳುತ್ತಿರಬೇಕಾದರೆ, ಕಾಳಮಾವನಿಗೆ ನಿಸಿಕೊಳ್ಳಲು ಕಿರಿಕಿರಿಯಾಗುತ್ತಿತ್ತು. ಆದರೆ ಸೀರನಿಗೆ ನಚ್ಚಗಾಗುತ್ತಿದ್ದವು. ಇದೀ ದಿನ ಹೇಳಿದರೂ ಬೇಸರ ದಿಕೊಳ್ಳದೆ ಕೇಳುವವನಾಗಿದ್ದ. ಅದಕ್ಕಾಗಿಯೇ ಇದ್ದ ವಿ.ಚಾನೆಲ್ ನೋಡುವಂತಿರಲಿಲ್ಲ. ಏಕೆಂದರೆ ಊರಲ್ಲಿ

ಬಯಲುಸೀಮೆ ಕಟ್ಟೆಪುರಾಣ

ಬಿ. ಚಂದ್ರೇಗೌಡ

ಟು ಬರುತ್ತಿದ್ದುದು ಎರಡೇ ಬಾರಿ. ಅದೂ ಕೂಡಾ ಗಿಷ್ಟ ಬಂದಾಗ ಕಾಣಿಸಿಕೊಂಡು ಕೈಕೊಡುತ್ತಿತ್ತು. ಮತ ಲು ಹೊರಡಲಿದ್ದ ಜುಮ್ಮಿಗೂ ಕೂಡ ಹರತಾಳನ ಕಥೆ ಬೇಕಿರಲಿಲ್ಲ. ಆಗ ಹಠಾತ್ತನೆ ಕಲಕಪ್ಪ ಸಿಸಿಕೊಂಡರು.

"ನಮಸ್ಕಾರ್ರಿ ಜುಮ್ಮಿಯವರಾ. ನೀವು ಇಲೆಕ್ಷನ್ನಿಗೆ ಕೀರಿ ಅಂತ ಗೊತ್ತಾತು. ಅದಕೆ ಬಂದೇನ್ರಿ" ಎಂದ.

ಜುಮ್ಮಿಗೆ ಕಲಕಪ್ಪನವರನ್ನು ನೋಡಿ ಬಹಳ ಷಿಯಾಯ್ತು! ಅವನ ಭಾಷೆ, ಉಕ್ಕೆಗಿದ್ದನಂತಿದ್ದ ಹಾಕೃತಿ, ಎಲ್ಲವೂ ಇಷ್ಟವಾಗಿದ್ದವು.

"ಅಂತೂ ಆಟುದೂರದಿಂದ ಬಂದ್ರಲ್ಲ ಹೇಳಿ."

"ಈಗ ಬಾಳದೂರೇನು ಇಲ್ರಿ. ನಿಮ್ಮ ಪಕ್ಕದ ಜಿಲ್ಲಾ?ಗ ನೇನಿ. ಹ್ಯಾಂಗ ನಡದೈತ್ರಿ ಕ್ಯಾನುವಾಸು?"

"ಅಯ್ಯೋ, ಯಾಕಾದ್ರು ನಿಂತೆ ಅನ್ನಂಗಾಗ್ಯದೆ ಕಪ್ಪಾರೆ."

"ಯದಕ್ರಿ ಹಾಗಂತಿರಿ?"

"ನನ್ನೆದ್ರಿಗೆ ನಿಂತಿರೋಳು ಸಿಂಗಲ್ಲು ವಡಿಸಿಗತ್ತಳಂತೆ."

"ಬೇಕಿದ್ರೆ ಡಬಲ್ ವಡಿಸಿಕೊವಲ್ಲಳ್ಯಾಕೆ. ನಿಮ್ಮ ಕೆಲಸ ವು ಮಾಡ್ರಿ. ನಾ ಹೇಳೋದೇನಾಪಾ ಅಂದ್ರ, ಒಂದು ಬ್ಯಾಂಡ್ ಬಲ್ಲು ತೊಗೊರ್ರಿ, ದರವೊಬ್ಬರ ಮನಿಗೂ ಹೋಗಿ ಕೈ ಮುಗುದು 'ಶರಣಪ್ಪಾ ಯಪ್ಪ ಕೈ ಬುಡಬ್ಯಾಡ್ರಿ' ಅಂತೇಳಿ ಮನಿಗೆ ಬರ್ರೆಲ್ಲಾ. ಇದೇ ಕಾಳೇಗೌಡ್ರು ಹೇಳೋ, ಬ್ಯಟಕ ಕೂದಲ ಕಟ್ಟಿ ಆಟ ಆಡಬೇಕ್ರಿ. ಮತ್ತ ನಿನ ಸಲುವಾಗಿ ರ್‍ವಕ್ಕ ಕೊಡಾಕ ಹೋಗಬ್ಯಾಡ್ರಿ, ತಿಳಿತಿಲ್ಲ."

"ತಗಳೊ ಮುನ್ನೂರ ಓಟಗೆ ಮೂರು ಲಕ್ಷ ಕೊಡಕ್ಕೆ ಯಾಗ್ಯವುರೆ ಕಲಕಪ್ಪಾರೆ. ಅವುರೆದ್ರಿಗೆ ಜುಮ್ಮಿ ಂಗೆ ಮಾಡಬೇಕು ಹೇಳಿ?" ಎಂದ ಉಗ್ರಿ.

"ಆದಾರಿ ನಾ ಹೇಳಿದ್ದು ರ್‍ವಕ್ಕದ ಮುಂದೆ ಬರಿಗೈಲಿ ಚುನಾವಣೆ ಹೆದರಸಬೇಕ್ರಿ. ಬ್ರಿಟಿಷರ ಕೂಡ ಗಾಂಧಿ ಮಾಡಿದ್ದು ಹಾಂಗೆ ಅಲ್ಲೇನು?"

"ಆದಾಕಾಲ ಕಲಕಪ್ಪಾರೆ. ಈಗಲವೇಳಿ. ಮಂತ್ರಿ ಮನಿಗೆ ಬಂದು ಕಂಡೋರೆದ್ದಿ ಹಿಡಕತ್ತನೆ ಅಂದ್ರೆ ಕಾಲ ಎಲ್ಲಿಗೆ ಬತ್ತೇಳಿ?" ಎಂದ ಕಾಳಮಾವ.

"ಅವುನ್ಯಾರ್ರಿ ಕಲಕಪ್ಪಾರೆ ಹಾಲಪ್ಪ ಅಂದ್ರೆ ಇನ್ಯಂತ ಕಳ್ಳಮುಂಡೆ ಮಗ ಅವುನು. ಹಿಟ್ಟಕ್ಕಿದೋಳನೆ ಹಿಡಕಳಕ್ಕೋಗ್ಯವುನಲ್ಲ" ಎಂದಳು ಜುಮ್ಮಿ.

"ಅಂಗೆ ಆತ್ರಿ, ಮಂತ್ರಿಯಾದವ ಐಬ್ಯಾಗಿರಬೇಕು. ಅದಕ ಅಲ್ಲೇನ್ರಿ ಐಬಿ ಕಟ್ಟಿಸೋದು. ಇವ ಗೆಳೆಯನ ಮನಿಗೋಕ್ಯನ ಅಂದ್ರು ಇವ ಇನ್ಯಂಥ ಹಲಕಟ್ಟ ಮಂದಿ ಇದ್ದಾನ್ರಿ."

"ಅದೇನ್ರಿ ಕಲಕಪ್ಪಾರೆ ನಿಜ ಹೇಳ್ರಿ?" ಎಂದ ಕಾಳಮಾವ.

"ಇದೊಂದ ನಮೂನಿ ಸಂಗ್ಯಾ ಬಾಳ್ಯಾನ ಕತಿ ಇದ್ದಾಂಗೈತ್ರಿ ಕಾಳೇಗೌಡ್ರ. ಬಾಳ ಹಿಂದೆ ಅಂದ್ರು ನೂರು ವರ್ಸಾಗಿರಬೇಕ್ರಿ. ಆಗ ಸಂಗ್ಯಾ ಅಂತ ಒಬ್ಬಿದ್ದನ್ರಿ. ಅವಗೆ ಊರಗೌಡನ ಹೇಂಡ್ತಿ ಚಂದ ಕಾಣಾಕತ್ತಿದ್ಲು. ಬಾಳ್ಯ ಅನ್ನೊ ಗೆಳೆಯನ ಕೂಡ 'ಲೋ ಬಾಳ್ಯ ಗೌಡನ ಹೇಂಡ್ತಿ ಕೂಡಬೇಕಲೇ. ನನ್ನ ಚೆಂದು ಹೋಗುವಲ್ಲದ್ಯಾಕೆ' ಅಂತ ಹಟಹಿಡದನ್ರಿ. ಬಾಳ್ಯಾ ಅದಕ ಅವುಕಾಶ ಮಾಡಿಕೊಟ್ಟ. ಸಂಗ್ಯಾ ಹೋಗಿ ಗೌಡನೆಂಡ್ತಿ ಕೂಡಿದ! ಗೌಡ, ಗೌಡನ ತಮ್ಮದೀರು ಬಂದ್ರು, ಸಂಗ್ಯಾನ ಜೀವ ತೊಗೊಂಡ್ರು. ಇದು ಕತಿಯಲ್ಲ, ನಡೆದದ್ದು. ಆದ್ರ ಅದೇ ಸಂಗ್ಯಾ ನಮ್ಮ ಮಂತ್ರಿ ಹಾಲಪ್ಪನ ಮೈ ಹೊಕ್ಕೇನ್ರಿ. ಆದ್ರ ಎಡೂರಪ್ಪ ಹಾಲಪ್ಪನ ಬೆನ್ನಿಗಿಟಗೊಂಡು ಬಚಾವು ಮಾಡ್ತಿಕ್ಕ ಹೊಂಟಾನ್ರಿ."


"ನೀವೇಳಿದ್ದು ಅರ್ತಾಗಲಿಲ್ಲ."

"ಹರತಾಳು ಹಾಲಪ್ಪ ಅಂತ ಒಬ್ಬ ಮಂತ್ರಿ ಯದಾನ್ರಿ. ಅವ ಒಂದ್ ನಮೂನಿ ಲಿಕ್ಕರ್ ಶಾಪಿ ಓನರ್ ಇದ್ದಾಂಗ್ರಿ. ಫುಡ್ ಮಿನಿಸ್ಟರು. ಮಗ ಏನು ಮಾಡ್ಯಾನೆ ಅಂದ್ರಾ ಶಿವಮೊಗ್ಗಕ್ಕೆ ಹೋಗ್ಯಾನ್ರಿ. ಅಲ್ಲಿ ಬಾಳ್ಯನಂಗೇ ಇದ್ದ ಗೆಳೆಯನ ಕೂಡ 'ಇವತ್ತು ನಿನ್ನ ಮನಿಗೆ ಊಟಕ್ಕೆ ಬರ್ತಿನಿ' ಅಂದಾನ. ಮಿನಿಸ್ಟರು ಊಟಕ್ಕೆ ಬರ್ತಿನಿ ಅಂದ್ರ ಬ್ಯಾಡನ್ನಕಾಕ್ಯತೇನ. ಅದಕ ಅವ 'ಬಾರಪ' ಅಂದಾನ. ಹೋದ್ರು, ಉಂಡು ಮಲಗಿದ್ರು. ಅರ್ಧರಾತ್ರಿಯಾತು. ಹಾಲಪ್ಪಗ ನಿದ್ದಿ ಬಂದಿಲ್ಲ, ಯದಕಪ್ಪ ಅಂದ್ರೆ, ಊಟ ಮಾಡುವಾಗ ಗೆಳೆಯನ ಹೇಂಡ್ತಿಮಾರಿ, ಕಣ್ಣು ಆಕಿ ಒನಪು, ಒಯ್ಯಾರ ನೋಡಿ ತೆಲಿಕೆಡಿಸಿಕೊಂಡು ಕುಂತಿದ್ದನ್ರಿ. ಆಗ ಗೆಳೆಯನ ಕರದು, 'ನೋಡಪಾ, ನನ್ನ ಮೈಯಾಗಾರಮಿಲ್ಲ, ಗುಳಿಗಿ ತೊಗಂಡು ಬರ್ತಿಯೇನ' ಅಂತ ಕಳಿಸ್ಯಾನ್ರಿ. ಆತ ಐ.ಬಿ.ಗೋಗಿ ಗುಳಿಗಿ ತೊಗಂಡು ಬರುವಷ್ಟರಲ್ಲಿ ಅವನ ಹೇಂಡ್ತಿ ಕೆಡಿಸ್ಯಾನ್ರಿ ಮಗ."

"ಅವುಳು ಸುಮ್ಮನಿದ್ದದ್ದೇಳೂ" ಎಂದಳು ಜುಮ್ಮಿ.

"ಆಕಿ ಗಂಡ ಅನಕೊಂಡಾಳ್ರಿ. ನಿದ್ದಿಗಣ್ಣು, ಆದ್ರು ಗುರುತಾಗಿ ಆಕಿ ವದ್ದಾಳ್ರಿ. ಆದರ ಅಷ್ಟರಾಗ ಹಾಲಪ್ಪ ಹಾಲುಕುಡದದಾಗಿತ್ರಿ" ಎಂದು ಕಲಕಪ್ಪ ನಗಾಡಿದ. ಬಿದ್ದು ಬಿದ್ದು ನಕ್ಕ ಜುಮ್ಮಿ,

"ಇವುನಿಗಿಂತ ರೇಣುಕಾಚಾರಿನೆ ವಾಸಿ. ಕದ್ದುಮುಚ್ಚಿ ಬ್ಯಾಡ ಅಂತ ಯಲ್ಲಾರು ಕಾಣಂಗೇ ನರ್ಸ್ ಮಡಿಕಂಡಿದ್ದ ಅಲವೆ" ಎಂದಳು.



"ಇವನವ್ವನ, ವ್ಯಭಿಚಾರಿಗಳ ಸರಕಾರಾತ್ರಿ ಇದು. ಮದಲಕ್ಕ ಶೋಬಾ ಎಡೂರಪ್ಪನ ಎಪಿಸೋಡಿತ್ತು. ಆ ನಂತರ ಯಾರವ ಆ ಉಡುಪಿ ಭಟ್ಟನ ಹೇಂಡ್ತಿ ಎಪಿಸೋಡು. ಆದಾತು ಅನ್ನದರಾಗ ರೇಣುಕಾಚಾರಿ ರಾಸಲೀಲೆ. ಈಗ ನೋಡ್ರಿ ಈ ಹರತಾಳ ಹಾಲಪ್ಪನ ಕಾಮಿ ಕತಿ. ಇದಕ್ಕೂ ಮೊದ್ಲು ಆ ನಮ್ಮ ನಿತ್ಯಾನಂದನ ಕಾಮಕಾಂಡ. ನೋಡಿ ನೋಡಿ ತೆಲಿಕೆಟ್ಟ ಮಸರ ಗಡಿಗ್ಯಾಗಿತ್ತರಿ" ಎಂದು ಕಲಕಪ್ಪ ನಕ್ಕ.

ಅಷ್ಟರಲ್ಲಿ ನುಗ್ಗಿದ ವಾಟಿಸ್ಸೆ,

"ನಿತ್ಯಾನಂದ ಹಾಲಪ್ಪನಿಗೆ ಫೋನ್ ಮಾಡಿ ಥ್ಯಾಂಕ್ಸ್ ಹೇಳಿದ್ನಂತೆ ಗೊತ್ತೆ."

"ಇರಬಹುದು ಬಿಡ್ರಿ. ಮುಂಜನಾತು ಅಂದ್ರ, ಟೀವ್ಯಾಗೆ, ಪೇಪರ್‌ನಾಗೆ ಆ ಜರತಾರಿ ಜಗದ್ಗುರು ನಿತ್ಯಾನಂದನ ರತಿವಿಜ್ಞಾನದ ಎಪಿಸೋಡು ನೋಡಿ ನೋಡಿ ಬೋರಬಂದಿತ್ರಿ. ಅವ್ರುನವ್ರುನ್ ಈಗ ನಮ್ಮ ಹಾಲಪ್ಪನ ರೇಪಿನ ಮುಂದೆ ಅವುನ ಸುದ್ದಿ ಹಳೇದಾತ್ರಿ."

"ನನಿಗೊಂದು ಡವುಟು ಕಲಕಪ್ಪಾರೆ."

"ಏನ್ರಿ?"

"ರೇಪ್ ಮ್ಯಾಟ್ರು ಲೀಕಾದ ಮೇಲೆ, ಎಡೂರಪ್ಪ ಈಶ್ವರಪ್ಪ ಇಬ್ಬರೂ ಸೇರಿ ಹಾಲಪ್ಪನ ಕರದು ಮಾತಾಡ್ಸಿ, ಆಮ್ಯಾಲೆ ಸಿಐಡಿಗೆ ಕೊಟ್ಟವುರೆ ಅಂದ್ರೆ, ಮುಖ್ಯಮಂತ್ರಿ ಹೇಳಿದಂಗೆ ಸಿಐಡಿ ಕೆಲಸ ಮಾಡಿದ್ರೆ, ಈ ಕೇಸು ಹಳ್ಳ ಹಿಡದಂಗೆ ಅಲವೆ?"

"ಹಿಡಿಯೂದೆ ಕಂಡ್ರಿ. ಆದ್ರ ಹರತಾಳು ಮಾನ ಹರಾಜಾಗಿ ಅವ ಕೂಡ ಹಳ್ಳ ಹಿಡಿತಾನೌದಿಲ್ಲೋ?"

"ಸರಿ, ಪುನಃ ಎದ್ದು ಬರದಿಲ್ಲ ಅನ್ನದೇನು ಗ್ಯಾರಂಟಿ? ಅಂತ ರೇಣುಕಾಚಾರಿನೆ ಗೆದ್ದು ಬಂದು ಮಿನಿಷ್ಟ್ರಾಗಿ ಮ್ಯರಿತಾ ಅವುನೆ."


"ಇದೇನ್ರಿ ಇದು ಉತ್ತರಭಾರತದ ಬಿಹಾರ, ಉತ್ತರಪ್ರದೇಶ, ಅಂತ ರಾಜ್ಯದಲ್ಲಿ ನಡಿಯೋ ಹಲಕಟಗಿರಿ ನಮ್ಮ ರಾಜ್ಯದಾಗ ಶುರುವಾದವಲ್ರೀ?"

"ಊ ಕಂಡ್ರಿ ಕಲಕಪ್ಪಾರೆ, ನಮ್ಮ ರಾಜ್ಯ ಒಳ್ಳೆ ರಾಜ್ಯ ಅಂತ ಹೆಸರು ಮಾಡಿತ್ತು, ಈ ಸೂಳೆ ಮಕ್ಕಳು ಬಂದು ಹಾಳು ಮಾಡಿದ್ರು."

"ಈ ಘಟನೆಯಿಂದ ನಾವು ಕಲಿಬೇಕಾದ್ದೇನಪ್ಪ ಅಂದ್ರೆ, ಯಾರಾದ್ರು ನಮ್ಮ ಮನೆಗೆ ಬಂದು ಎನ್ನಾರ ತಗಂಬಾ ಅಂತ ಹೇಳಿದ್ರೆ ಹೋಗಬಾರ್ದು. ನೀನು ಅಷ್ಟೇ ಕಣಕ್ಕ ನೀನು ರಾಜಕೀಯದಲ್ಲಿ ಇರದ್ರಿಂದ ಗಣ್ಯವ್ಯಕ್ತಿಗಳು ಬಂದ್ರೆ ಮನೆಲಿ ಮನಗಕ್ಕೆ ಅವುಕಾಶ ಕೊಡಬ್ಯಾಡ. ಅಕಸ್ಮಾತ್ ಕೊಟ್ರು, ನೀನು ಬ್ಯಾರೆ ಮನಿಗೋಗಿ ಮನಿಕ್ಕೊ. ಸರಿಯಲವ ಕಲಕಪ್ಪಾರೆ ನಾನೇಳಿದ್ದು?"

"ಖರೇರಿ!"

ರಾಮಾನುಜನ್ ಮ್ಯಾಜಿಕ್!




ಮೊನ್ನೆ ನಡೆದ ರಾಮಾನುಜನ್ ಸೆಮಿನಾರ್‌ಗೆ ಲ್ಲಿಯಿಂದ ಶಾ. ಬಾಲುರಾವ್ ಬಂದಿದ್ದರು. ಜನಕ್ಕೆ ಲುರಾವ್ ಬಗ್ಗೆ ಹೆಚ್ಚಿಗೆ ಗೊತ್ತಿರಲಿಕ್ಕಿಲ್ಲ. ಅವರು ಡ ಸಾಹಿತಿಗಳಿಗೆ ಗೊತ್ತಾದದ್ದು ನಾಲ್ಕು ದಶಕದ ದೆ, "ಲೇಖಕ" ಎಂಬ ದಿಟ್ಟ ಮಾಸಿಕ ಪ್ರಕಟಿಸುತ್ತಿದ್ದಾಗ. ಮೇಲೆ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ರ್ಗದರ್ಶಿಯಾಗಿ ದಿಲ್ಲಿಯಲ್ಲಿ ವಾಸಿಸತೊಡಗಿದರು; ಕ್ಕೆ ಕನ್ನಡದಲ್ಲಿ ಬರೆಯತೊಡಗಿದರು. ಬೇರೆ ಭಾಷೆಗಳಿಂದ ಡಕ್ಕೆ ಕೃತಿಗಳನ್ನು ತರತೊಡಗಿದರು. ಮೊನ್ನೆ ಬೆಂಗಳೂರಿಗೆ ದಾಗ ಭೇಟಿಯಾದೆವು; ಅವರು ಮಾತಾಡುತ್ತಾ ರಾಮಾನುಜನ್ ಬಗ್ಗೆ ಒಂದು ಕುತೂಹಲಕರ ವಿಷಯ ಳಿದರು. ಬಾಲುರಾವ್ ರಾಮಾನುಜನ್ ಮನೆಗೆ ಆಗಾಗ ಹೋಗುತ್ತಿದ್ದರಂತೆ; ರಾಮಾನುಜನ್‌ರ ಅಣ್ಣ ನಿವಾಸನ್ ಬಾಲುರಾವ್ ಅವರಿಗೆ ಪರಿಚಿತರಂತೆ. ಅಣ್ಣನ ಬಗ್ಗೆ ರಾಮಾನುಜನ್‌ಗೆ ಭಯ, ಭಕ್ತಿ. ಆ ದಲ್ಲಿ ರಾಮಾನುಜನ್ (ಹದಿನೈದೋ ಹದಿನಾರೋ ವಯಸ್ಸಿನಲ್ಲಿ!) ಸ್ಕೂಲು, ಕಾಲೇಜುಗಳಲ್ಲಿ ಯಕ್ಷಿಣಿ ಡುತ್ತಿದ್ದರಂತೆ. ಒಂದೊಂದು ಪ್ರದರ್ಶನಕ್ಕೆ ಎರಡೋ ಮೂರೋ ರೂಪಾಯಿ-ಪಾಕೆಟ್ ಮನಿ-ಸಿಗುತ್ತಿತ್ತಂತೆ. ಸ್ಕಿ ರಾಲೋ ಎಂಬ ಪ್ರೊಫೆಸರ್ ರಾಮಾನುಜನ್‌ರ ಯಕ್ಷಿಣಿ ನೋಡಿ ಮೆಚ್ಚಿ ಹತ್ತು ರೂಪಾಯಿ ಟ್ಟರಂತೆ. ಅದನ್ನು ನೋಡಿ ರಾಮಾನುಜನ್‌ರ ಅಣ್ಣ ಶ್ರೀನಿವಾಸನ್‌ಗೆ ಅಸೂಯೆಯಾಗಿ "ಮ್ಯಾಜಿಕ್ ಮಾಡಿ ಮ್ ವೇಸ್ಟ್ ಮಾಡ್ತಾನೆ" ಎಂದು ಗೊಣಗಿದರಂತೆ!

ಮೇಲಿನದನ್ನು ಬಾಲುರಾವ್ ಹೊಗಳುವುದಕ್ಕಾಗಿಯಾಗಲೀ ಟೀಕಿಸುವುದಕ್ಕಾಗಿಯಾಗಲೀ ಹೇಳಲಿಲ್ಲ. ು ಸುಮ್ಮನೆ ನಕ್ಕೆ.

ಹಾಗೇ ಬಾಲುರಾವ್ ವಯಸ್ಸಿನ ಬಗ್ಗೆ ಹೇಳಿದರು. "ಮನುಷ್ಯ ಹೇಗೆ feel ಮಾಡ್ತಾನೋ ಅಷ್ಟೇ ಯಸ್ಸು ಅವನಿಗೆ. ನಾವೆಲ್ಲ ಮೂವತ್ತು ವರ್ಷದ ಮುದುಕರನ್ನು ನೋಡಿದ್ದೇವೆ. ಅರವತ್ತರ ಹುಡುಗರನ್ನು ನೋಡಿದ್ದೇವೆ."

ಕಾಲಕ್ಕೆ ತಕ್ಕಂತೆ



ನನ್ನ ಮೈಯಲ್ಲಿ ಅಷ್ಟು ಸರಿಯಾಗಿಲ್ಲದ ಈಗ ಕೆಲವು ತುಂಟ ಪ್ರಸಂಗಗಳು ನೆನಪಾಗುತ್ತವೆ. ವಯಸ್ಸಾಗುತ್ತಾ ಎಲ್ಲವನ್ನೂ ನೋಡಿ ನಗುವುದು ಸಾಧ್ಯವಾಗುತ್ತದೆ; ಹಾಗೆಯೇ ಯಾರಿಗೂ ತೊಂದರೆ ಕೊಡದೆ ರೊಮ್ಯಾಂಟಿಕ್ ಆಗಿರುವುದು ಸುಲಭ. ಇದು ನೈತಿಕ ಎಚ್ಚರದ, ಮರೆವಿನ, ಮೋಹಕ, ಸ್ಥಿತಿ. ಮೊನ್ನೆ ಗೆಳೆಯನೊಬ್ಬನಿಗೆ ಫೋನ್ ಮಾಡಿದರೆ ಅವನ ಹೆಂಡತಿ ಫೋನ್ ತೆಗೆದುಕೊಂಡಳು; ಇವರೆಲ್ಲ ನನಗೆ ಹಳೇ ಗೆಳೆಯರು. ಆಕೆಯನ್ನು ಫೋನ್‌ನಲ್ಲಿ ನಗಿಸಿದೆ. "ನಿನ್ನ ಅತ್ತೆಗೆ ಫೋನ್ ಕೊಡು" ಅಂದೆ. ಆಕೆಗೆ ಹೇಳಿದೆ, "ನಿನ್ನ ಸೊಸೆ ಅದೇನ್ ಜೋಕ್ ಪ್ರಚೋದಿಸಿದಳು! ನಾನು ಜೋಕ್ ಮಾಡಿದರೆ ಅದು ಹೇಗೆ ನಕ್ಕಳು! ನಿನ್ನ ಮಗನಿಗೆ ನನ್ನ ಬಗ್ಗೆ ಹುಷಾರಾಗಿರಲು ಹೇಳು" ಅಂದೆ. ಅತ್ತೆ ಜೋರಾಗಿ ನಕ್ಕು ಮಗನಿಗೆ ಫೋನ್ ಕೊಟ್ಟಳು.

ನನಗೆ ಪರಿಚಿತ ಹೆಂಗಸೊಬ್ಬಳು ವಾಕ್ ಹೋಗುವಾಗ ಸಿಗುತ್ತಾಳೆ. ಒಬ್ಬನೇ ನಡೆಯುವುದು ನನಗೆ ಇಷ್ಟ. ಬೈದರೂ ಚಿಂತೆಯಿಲ್ಲ ಎಂದು ಆಕೆ ಕೆಲವು ಸಲ ಜೊತೆಗೆ ಬಂದೇಬಿಡುತ್ತಾಳೆ. ನನಗೆ 'ಬರಬೇಡ' ಅನ್ನಲು ಯಾವ ಅಧಿಕಾರವಿದೆ? ಆಕೆಯ ಗೆಳತಿಯೊಬ್ಬಳು ನಮ್ಮ ಕಚೇರಿಯ ಎದುರಿನ ಮಹಿಳಾ ಕಾಲೇಜಿನಲ್ಲಿ ವಿದ್ಯಾರ್ಥಿನಿ; ರತ್ನ ಅಂತ ಹೆಸರು. "ನಿನ್ನೆ ರತ್ನಾಗೆ-ನಿಮ್ಮ ಆಫೀಸಿಗೆ ಹೋಗಿ ನಿಮ್ಮಿಂದ ಒಂದು ಪುಸ್ತಕ ಇಸಿದುಕೊಂಡು ಬರೋದಕ್ಕೆ ಹೇಳಿದ್ದೇನೆ" ಅಂದಳು. "ಬರಲಿಲ್ಲವಲ್ಲ" ಅಂದೆ. ಆ ರತ್ನ ಎಲ್ಲಿಗೆ ಹೋಗಿದ್ದಳೋ, ಬರಲೇ ಇಲ್ಲ. ನಾನೂ ಮರೆತೆ. ಮೂರು ದಿನವಾದ ಮೇಲೆ ಈಕೆ "ರತ್ನ ಬರಲಿಲ್ಲವೆ?" ಅಂದಳು. "ಇಲ್ಲ, ಅದೇನು ಆಯಿತೋ. ಬಂದರೆ ಮೇಷ್ಟ್ರು ನಿನ್ನ ಹಿಡ್ಕೋತಾರೆ ಅಂತ ಹೇಳು" ಅಂದೆ. ಆಕೆ ಮಾರನೆಯ ದಿನ ಸಿಕ್ಕಿ "ನೀವು ಹೇಳಿದ್ದ ರತ್ನಾಗೆ ಹೇಳಿದೆ" ಅಂದಳು. "ಹ್ಞಾ! ಏನಂದ್ಲು?" ಅಂದೆ. "ಹಿಡ್ಕೊಳ್ಳೋದಾದ್ರೆ ಮಾತ್ರ ರತ್ನ ಬರ್ತಾಳಂತೆ!" ಅಂದಳು. ನಾನು ಪೆಚ್ಚಾಗಿ, "ಈಗಿನ ಕಾಲದ ಹುಡುಗಿಯರು ಹೀಗೂ ಇರಬಹುದು. ನಮ್ಮ ಕಾಲದಲ್ಲಿ ಅಪ್ಪ ಅಮ್ಮನಿಗೆ ಹೇಳಿ ರಾಮಾಯಣ ಮಾಡಿಬಿಡ್ತಿದ್ರು" ಅಂದೆ. "ಆದ್ರೆ ಅವರ ಮನೆಯ ಎಲ್ರಿಗೂ ನಿಮ್ಮನ್ನ ಕಂಡ್ರೆ ಇಷ್ಟ, ಬೇಕಾದ್ರೆ ಅವರನ್ನೂ ಹಿಡ್ಕೋಬಹುದು!" ಅಂದಳು ಆಕೆ.

ಹುಡುಗರಿಗೆ ಹೊಟ್ಟೆಕಿಚ್ಚಾಗಲಿ ಎಂದು ಬರೆದಿದ್ದೇನೆ.

ಹೇಗಿದೆ ಸವಲತ್ತು!


–ಸೆಪ್ಟೆಂಬರ್ 22, 1993

ದೈವ ಆದ ದೇವತೆ

ಸಿನಿಮಾ ತಾರೆಯರಿಗೆ ದೈವೀ ಆಕರ್ಷಣೆ ಇದೆ ಎಂದು ತೋರುತ್ತೆ. ಚರಾಚರ ವಸ್ತುಗಳನ್ನೆಲ್ಲ ಅವರಿಗೆ ಯಾವ ರೂಪದಲ್ಲಾದರೂ ಹೋಲಿಸಲೇಬೇಕು ಎನ್ನುವ ಗೀಳು ಸಾರ್ವಜನಿಕವಾಗಿರುವ ಹಾಗಿದೆ.

ಲಲ್ಲೂ ಪ್ರಸಾದ್ ಯಾದವ್‌ಗೆ ಹೇಮಮಾಲಿನಿ ಕೆನ್ನೆಯ ಮೇಲೇ ಕಣ್ಣು. ಬಿಹಾರದ ರಸ್ತೆಗಳನ್ನೆಲ್ಲ ಹೇಮಮಾಲಿನಿ ಕೆನ್ನೆಯ ತರಹ ನುಣುಪಾಗಿರುವಂತೆ

ಅಣಕ



▸▸ ಎಚ್.ಎಲ್. ಕೇಶವಮೂರ್ತಿ

ಮಾಡುಸ್ತೀನಿ ಅಂದ್ರು, ಚುನಾವಣೆ ಸಮಯದಲ್ಲಿ. ನುಣುಪು ಹೆಚ್ಚಾಯಿತೋ ಏನೋ, ಜಾರಿ ಬಿದ್ದರು. ಬಿಹಾರದಲ್ಲಿ ಅಧಿಕಾರವೇ ಕಿತ್ಕೊಂಡೋಯ್ತು.

ಈ ಆಕರ್ಷಣೆ ರಾಜಕಾರಣಿಗಳಿಗೆ ಮಾತ್ರ ಸೀಮಿತ ಆಗೇನೂ ಇಲ್ಲ. ಸಿರಿಯಾಕ್ ಜೋಸೆಫ್ ಇದ್ದಾರಲ್ಲ... ಅದೇ ನಮ್ಮ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾಗಿದ್ದೋರು... ಅವರಿಗೂ ಸಿನಿಮಾ ತಾರೆಯರು ಅಂದರೆ ಅಭಿಮಾನ. ಯಾವುದೋ ಸಮಾರಂಭದಲ್ಲಿ... ಬಟನ್ ಇಡ್ಲಿ ಅಂತ ಕೇಳಿದ್ದೀರಲ್ಲ... ಅದನ್ನು ತಮಿಳುನಾಡಿನಲ್ಲಿ 'ಖುಷ್ಬೂ ಇಡ್ಲಿ' ಅನ್ನುತ್ತಾರೆ ಅನ್ನುವ ವಿಷಯವನ್ನ ಬಹಿರಂಗಪಡಿಸಿದರು. ಈ ಹೆಸರು ಯಾಕೆ ಬಂತು? ಖುಷ್ಬೂ ದೇಹದ ತರಹ ಅದು ಮೃದು ಆಗಿರುತ್ತೆ ಅಂತಾನೋ ಅಥವಾ ಪುಟ್ಟು ಪುಟ್ಟದಾಗಿ ನೋಡೋಕೆ ಚಂದ ಕಾಣಿಸ್ತದೆ ಅಂತಾನೋ ಎಂಬುದರ ವಿವರಣೆಯನ್ನೇನೂ ಅವರು ನೀಡಿದ ಹಾಗಿಲ್ಲ. ಇದು ಹೇಗಾದರೂ ಇರಲಿ. ಕೆಲವು ತಮಿಳರಿಗಂತೂ ಆಕೆ ಅರಾಧ್ಯದೈವ. ಆ ಭಕ್ತರು ಆಕೆಯ ದೇವಾಲಯ ನಿರ್ಮಿಸಿ ತಮ್ಮ ಭಕ್ತಿ ಸಮರ್ಪಣೆ ಮಾಡಿದ್ದಂತೂ ನಿಜ. ಅಲ್ಲಿ ನಿತ್ಯ ಪೂಜೆ ಪುನಸ್ಕಾರಗಳು ಸಾಂಗವಾಗಿ ನಡೆಯುತ್ತಿತ್ತೆ? ಅಲ್ಲಿಗೆ ಬರುತ್ತಿದ್ದ ಭಕ್ತರು ಯಾರು? ಇಲ್ಲ ಅದು ಪಾಳು ದೇಗುಲ ಆಗಿತ್ತೆ ಎಂಬುದರ ಬಗ್ಗೆ ಮಾಹಿತಿ ಇಲ್ಲ. ಆದರೆ ಸ್ವಭಾವತಃ ಭಾವುಕರಾದ ತಮಿಳರು ತಮ್ಮ ಅಭಿಮಾನ ಪ್ರದರ್ಶಿಸಲು ಯಾವ ಹಂತಕ್ಕಾದರೂ ಹೋಗಬಲ್ಲರು ಎಂಬುದಕ್ಕೆ ಸಾಕ್ಷಿ ಇದಾಗಿದೆ ಎಂಬುದಂತೂ ಸತ್ಯ.

ಖುಷ್ಬೂ ಆರಾಧನೆ ಹೀಗೆ ಮುಂದುವರೆಯುತ್ತಿತ್ತೇನೋ. ಅಷ್ಟರಲ್ಲಿ ಯಾವುದೋ ಪತ್ರಿಕೆ 'ಲೈಂಗಿಕ ಪ್ರವೃತ್ತಿ' ಕುರಿತ ಅಭಿಪ್ರಾಯ ಸಂಗ್ರಹಣೆಗೆ ಮುಂದಾಯಿತು. ತಮಿಳರ ಹೃದಯಸಿಂಹಾಸನವನ್ನೇರಿರುವ ಖುಷ್ಬೂ ಅಂತಹವರ ಹೇಳಿಕೆಯನ್ನು ಮುದ್ರಿಸಿದರೆ ಬಿಸಿಬಿಸಿ 'ಖುಷ್ಬೂ ಇಡ್ಲಿ-ಸಾಂಬಾರ್'ನಂತೆಯೇ ಖರ್ಚಾಗುತ್ತದೆ ಅಂತಾನೋ ಅಥವಾ ಇಂತಹ ವಿಚಾರದಲ್ಲಿ ಆಕೆಯ ಹೇಳಿಕೆ ಬಂದರೆ ರೋಚಕ ಆಗಿರುತ್ತದೆ ಅಂತಾನೋ ಆಕೆಯ ಅಭಿಪ್ರಾಯ ಕೇಳಿತು. ಇತ್ತೀಚೆಗೆ ಹೆಚ್ಚುತ್ತಿರುವ ವಿವಾಹಪೂರ್ವ ಲೈಂಗಿಕತೆ ಆಕೆಗೆ ನೆನಪಾಗಿರಬೇಕು. ಯುವತಿಯರ ಸುರಕ್ಷತೆ ಅವರನ್ನು ಕಾಡಿರಬೇಕು. ಇಂತಹ ಸಂದರ್ಭದಲ್ಲಿ ಹೆಣ್ಣುಮಕ್ಕಳು ಬೇಡವಾದ ಗರ್ಭ ಹಾಗೂ ಲೈಂಗಿಕ ರೋಗಗಳು ಕಾಡದಂತೆ ಸುರಕ್ಷಿತ ಕ್ರಮಗಳನ್ನು ಅನುಸರಿಸಬೇಕು ಎಂಬ ಕಿವಿಮಾತು ಹೇಳಿದರು. ಈ ಮಾತುಗಳು ಇವೆಯಲ್ಲ ಅವು..... ಪಿಎಂಕೆ ಪಕ್ಷದ ಕಟ್ಟಾಳುಗಳಿಗೆ 'ತಮಿಳುನಾಡಿನ ಮಹಿಳೆಯರಿಗೆ ನೈತಿಕತೆ ಇಲ್ಲ' ಎಂಬುದಾಗಿ ಕೇಳಿಸಿತು!

ಪರಿಣಾಮ: ಸಿಡಿದೆದ್ದಿತು ನೈತಿಕ ಸೇನೆ!

ದೇವತೆ ಆಗಿದ್ದಾಕೆ ದೈವ ಆದಳು!

ತಮಿಳುನಾಡಿನ ವಿವಿಧ ಸ್ಥಳಗಳಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಿದರು. 23 ಕೇಸುಗಳು ಖುಷ್ಬೂ ವಿರುದ್ಧ ದಾಖಲಾದವು.

ಕೋರ್ಟಿಗೆ ಅಲೆಯುವುದೇ ಖುಷ್ಬೂ ಕೆಲಸ ಆಯಿತು!

ಇವರಿಗೆ ಬೆಂಬಲ ನೀಡಿದ ಅಪರಾಧಕ್ಕಾಗಿ ಸುಹಾಸಿನಿಯವರಿಗೇ ದಿನನಿತ್ಯ ಕೋರ್ಟಿನ ನೋಟೀಸು ಬೇತಾಳದಂತೆ ಕಾಡಿತಂತೆ!

ಖುಷ್ಬೂ ಹೈಕೋರ್ಟಿನ ಮೊರೆ ಹೋದರು. ಕೇಸುಗಳನ್ನೆಲ್ಲ ವಜಾ ಮಾಡುವಂತೆ ಕೋರಿದರು. ಅದು ತಮಿಳುನಾಡಿನ ಕೋರ್ಟ್ ಅಲ್ಲವಾ- ತಮಿಳುನಾಡಿನ ಸ್ತ್ರೀಯರ ನೈತಿಕತೆ ಎತ್ತಿ ಹಿಡಿಯಿತು! ಖುಷ್ಬೂ ಅವರ ಬೇಡಿಕೆಯನ್ನು ತಿರಸ್ಕರಿಸಿತು! ಸುಪ್ರೀಂಕೋರ್ಟಿಗೆ ಹೋದರು. ಅದು ಯಾವುದೋ ಬುದ್ಧಿ ಇಲ್ಲದ ಮುಂಡೇಮಕ್ಕಳು ಹಿಂಗೆ ಕ್ಯಾತೆ ತೆಗ್ದವೆ ಅಂತ ಸುಮ್ಮನೆ ತೀರ್ಪು ನೀಡಿದ್ದರಾಗುತ್ತಿತ್ತು. ತೀರ್ಪು ನೀಡುವ ಮುನ್ನ 'ಗಂಡು ಹೆಣ್ಣು ವಿವಾಹವಾಗದೆ ಜೊತೆಯಲ್ಲಿ ಬಾಳಿದರೆ ತಪ್ಪೇನು' ಎಂದು ಪ್ರಶ್ನಿಸಿತು. ಅಷ್ಟೇ ಅಲ್ಲದೆ ರಾಧೆ-ಕೃಷ್ಣ ವಿವಾಹವಾಗದೆ ಪ್ರೇಮಿಸುತ್ತಿದ್ದರು ಎಂಬುದನ್ನ ನಮ್ಮ ಪುರಾಣಗಳೇ ಸಾರುತ್ತಿವೆಯಲ್ಲ ಎಂದು ಉದಾಹರಣೆ ನೀಡಿದ್ದರು!

ಪತ್ರಿಕೆಗಳಲ್ಲಿ ಬಂದ ಈ ವಿಚಾರಗಳನ್ನೆಲ್ಲ ಗಮನಿಸುತ್ತಿದ್ದರಂತೆ ರಾಯರು. ಮುಂಜಾನೆ ಎಂದಿನಂತೆ ವಾಕಿಂಗ್ ಹೋಗಿದ್ದಾಗ 'ನಾಶವಾಯಿತು.... ಸರ್ವನಾಶವಾಯಿತು' ಎಂದು ಒಬ್ಬರೇ ಬುಸುಗುಟ್ಟುತ್ತಿದ್ದರು. 'ಏನಾಯ್ತು ರಾಯ್ರೆ' ಎಂದು ಕೇಳಿದೆ. ಈ ಪುರಾಣವೆಲ್ಲ ಒದರಿದರು.

'ವಿವಾಹವಾಗದೆ ಹೆಣ್ಣುಗಂಡು ಜೊತೇಲಿ ವಾಸಿಸಬಹುದು ಅಂದರೇನಯ್ಯ ಅರ್ಥ' ಕೆಂಡ ಕಾರಿದರು. 'ಕಲಿಗಾಲ, ಕಲಿಗಾಲ' ಎಂದು ಹೇಳುತ್ತಾ ಹಣೆಹಣೆ ಚಚ್ಚಿಕೊಂಡರು. 'ಸಮಾಧಾನ ಮಾಡ್ಕೊಳ್ಳಿ ರಾಯರೆ' ಅಂದೆ. 'ಹೇಗಯ್ಯ ಸಮಾಧಾನವಾಗಿರೋದು?'. ಹೀಗೇನಾದರೂ ಆದರೆ ಸೂಳೆಗೇರಿ ಅಂತ ಬೇರೆ ಇದೆಲ್ಲ, ಊರೇ ಸೂಳೆಗೇರಿ ಆಗುತ್ತೆ' ಅಂತ ದುಮುಗುಟ್ಟಿದರು 'ವಿದೇಶೀಯರ ಮುಂದೆ ನಾವು ಹೋಗಯ್ಯ ತಲೆ ಎತ್ತಿ ಮೆರೆಯೋದು ಅಂತ ಪೇಚಾಡಿದರು. 'ಅಲ್ಲೂ ಇಂತಹವೆಲ್ಲ ನಡೀತಾವಂತಲ್ಲ ರಾಯರೆ' ಅಂದೆ. 'ನಡೀತಾವೆ ಕಣಯ್ಯ ನಡೀತವೆ. ಹೆಚ್ಚಗೇನೆ ನಡೀತವೆ. ಅದ್ಕೇ ಭಾರತೀಯ ಪರಂಪರೆಯ ಕುಟುಂಬ ವ್ಯವಸ್ಥೆಯನ್ನು ಅವರು ಮೆಚ್ಚುತ್ತಿದ್ದರು. ಈಗ ನಾವೂ ಅವರಂತೆಯೇ ಆದವಲ್ಲ, ಭಾರತದ ಮಾನಾನ ಹರಾಜು ಮಾಡ್ತಲ್ಲ ಈ ಕೋರ್ಟು' ಎಂದು ರೇಗಿದರು. 'ಈ ಮುಂಡೇಮಕ್ಕಳಿಗೆ ಬುದ್ಧಿ ಅನ್ನೋದು ಇದೆಯ. ಇಂತಹ ತೀರ್ಪು ಬಂದರೆ ಭಾರತವೇ ಅನಾಥಾಶ್ರಮ ಆಗುತ್ತೆ' ಅನ್ನುವ ಆತಂಕ ವ್ಯಕ್ತಪಡಿಸಿದರು. 'ಹಾಗೇನೂ ಆಗುವುದಿಲ್ಲ ಬಿಡಿ ರಾಯರೆ' ಎಂದು ಸಮಾಧಾನ ಮಾಡಲು ಪ್ರಯತ್ನಿಸಿದೆ. 'ಆಗದೆ ಹಾಗೇ ಇರುತ್ಯೇನಯ್ಯ ಹುಟ್ಟಿದ ಮಕ್ಕಳ ನೋಡ್ಕೊಳೋರ್‍ಯಾರು? ಅವು ಅಪ್ಪಅಮ್ಮ ಅಂತ ಯಾರನ್ನ ಕರೀತಾವೆ' ಅಂತೆಲ್ಲ ಪೇಚಾಡಿಕೊಂಡರು.


ಭವ್ಯ ಭಾರತದ ಭವಿಷ್ಯ ಕುರಿತ ಅವರ ಸದ್ವಿಚಾರಗಳಿಂದ ಪ್ರಭಾವಿತನಾದ ನಾನು ವಾಕಿಂಗ್ ಮುಂದುವರೆಸಿದೆ. ಯಾರೋ 'ರೀ ಇವರೆ' ಅಂದ ಹಾಗಾಯಿತು. ನಿಂತೆ. 'ಒಳ್ಳೆಯ ತೀರ್ಪು ಬರುವ ಲಕ್ಷಣಗಳೆಲ್ಲ ಇವೆ ಕಣ್ರಿ' ಅಂದರು. ಮುಖಮುಖ ನೋಡಿದೆ. 'ಅದೇ ಖುಷ್ಬೂ ವಿಚಾರ ಕಣ್ರಿ. ಅವನೇಳ್ತಿದ್ನಲ್ಲ ಆದರ ವಿಚಾರ. ಈ ಹಾಳಾದ ದೇಶದಲ್ಲಿ ಮದುವೆ ಅನ್ನೋದು ಹಿರಿಯರು ತೋರಿಸಿದವರನ್ನೇ ಸಂಗಾತಿ ಅನ್ನೊ ಹಾಗೆ ಆಗಿದೆ ಕಣ್ರಿ. ಇದರಿಂದ ಯಾರಿಗೂ ಸುಖ ಇಲ್ಲ' ಅಂದ್ರು. 'ಯಾರಿಗೂ ಇಲ್ವೆ' ಅಂತ ಸಂಶಯ ಸೂಚಿಸಿದೆ. ಸ್ವಲ್ಪ ಯೋಚಿಸಿದ ನಂತರ 'ಕೆಲವರಿಗಿದೆ. ಯಾರಿಗೆ ಅಂತೀರಾ... ಮದುವೆ ದಲ್ಲಾಳಿಗಳಿಗೆ, ಪುರೋಹಿತರಿಗೆ ಮತ್ತು... ಡೈವೋರ್ಸ್ ಲಾಯರಿಗೆ ಏನಂತೀರಾ' ಎಂದು ಮುಖ ನೋಡಿದರು. ಹೇಳಲು ಏನೂ ಇರಲಿಲ್ಲ.



ಇದಾದನಂತರ ಈ ಘಟನೆ ಕುರಿತ ಪತ್ರಿಕೆಗಳಲ್ಲಿ ಬರುವುದನ್ನು ಗಮನಿಸಿದೆ. ರಾಧೆ-ಕೃಷ್ಣ ಪ್ರೇಮ ಪ್ರಕರಣ ಪುರಾಣದಲ್ಲಿದೆ ನಿಜ. ಅವರಲ್ಲಿ ಪ್ರೇಮಾಂಕುರವಾದಾಗ ರಾಧೆಗೆ 14 ವರ್ಷ, ಕೃಷ್ಣನಿಗೆ 16 ವರ್ಷ ಅಂತೆ. ವಯಸ್ಸೇನೋ ಸರಿಯಾಗೇ ಇದೆ. ಆದರೆ ಆನಂತರ ಅವರ ಮಿಲನವೇ ಆಗಿಲ್ಲವಂತೆ! ಪುರಾಣದಲ್ಲಿ ಬರುವ ಈ ಪವಿತ್ರ ಪ್ರಸಂಗವನ್ನು ನ್ಯಾಯಾಲಯವು ಎತ್ತಿ ಹಿಡಿಯುವುದು ಎಷ್ಟು ಸರಿ? ಹಾಗಾದಲ್ಲಿ ಶ್ರೀಕೃಷ್ಣನ ಹದಿನಾರು ಸಾವಿರ ಗೋಪಿಕಾ ಸ್ತ್ರೀಯರ ಸಂಬಂಧವನ್ನು ಒಪ್ಪಬೇಕಲ್ಲಾ- ಕೆಲವು ಸಂಘಟನೆಗಳು ಪುರಾಣವನ್ನೇ ಇತಿಹಾಸ ಮಾಡಿಕೊಂಡಿವೆ. ರಾಮಜನ್ಮಭೂಮಿಯನ್ನೂ ನ್ಯಾಯಾಲಯ ಪುಷ್ಟೀಕರಿಸಬೇಕಲ್ಲಾ ಅನ್ನುವ ಚಿಂತೆ ಕೆಲವರದಾಗಿದೆ. ಯಾರಿಗೆ ಗೊತ್ತು, ಇದು ಪರೋಕ್ಷವಾಗಿ ಸಂಘ ಪರಿವಾರದ ಪರವಾದ ತೀರ್ಪೇ ಆಗಿರಬಹುದು....

ನಮ್ಮದು 'ಪ್ರಜಾ'ಪ್ರಭುತ್ವವಲ್ಲ, 'ಹರಾಜು'ಪ್ರಭುತ್ವ

'ರೆಡ್ಡಿ ಗ್ಯಾಂಗ್ ಮೇಲೆ ಪುನೀತ್ ಬಾಂಬ್' ವರದಿ ಪ್ರಸ್ತುತ ರಾಜಕೀಯ ವ್ಯವಸ್ಥೆಗೆ ಹಿಡಿದ ಕನ್ನಡಿಯಂತಿದೆ. ಇವತ್ತು ರಾಜ್ಯ ಸರ್ಕಾರವನ್ನು ತನ್ನ ಕಪಿಮುಷ್ಠಿಯಲ್ಲಿ ಹಿಡಿದುಕೊಂಡಿರುವ ರೆಡ್ಡಿ ಗ್ಯಾಂಗಿನ ದುಷ್ಟ ಮುಖವಾಡವನ್ನು 'ಪೃಥ್ವಿ' ಚಿತ್ರ ಕಳಚಿದೆ. 'ಪೃಥ್ವಿ' ಸಿನಿಮಾ ಕನ್ನಡ ಚಿತ್ರರಂಗದ ಮಟ್ಟಿಕ್ಕೆ ನಿಜವಾಗಲೂ ಐತಿಹಾಸಿಕ ಸಿನಿಮಾ.



ಈ ಚಿತ್ರದಲ್ಲಿ ಪುನೀತ್ ರಾಜ್‌ಕುಮಾರ್ ಅವರ ನಟನೆ ಅದ್ಭುತವಾಗಿದೆ. ಆದರೆ ಅದಕ್ಕಿಂತಲೂ ಮುಖ್ಯವಾಗಿ ಅವರು ಇಂತಹ ರಾಜಕೀಯ ಚಿತ್ರದಲ್ಲಿ ನಟಿಸಲು ಒಪ್ಪಿದ್ದೇ ಪ್ರಶಂಸಾರ್ಹವಾಗಿದೆ.

ರಾಜ್‌ಕುಮಾರ್ ಸೇರಿದಂತೆ ಅವರ ಇಡೀ ಕುಟುಂಬದವರು ಎಂದೂ ವಿವಾದಗಳಿಂದ ಮತ್ತು ರಾಜಕೀಯದಿಂದ ದೂರ ಉಳಿದವರು. ಆ ಹಿನ್ನೆಲೆಯಲ್ಲಿ ಪ್ರಸ್ತುತ ರಾಜಕೀಯ ಮತ್ತು ಸಾಮಾಜಿಕ ಸಮಸ್ಯೆಯನ್ನು ಕುರಿತ ಇಂತಹ ಚಿತ್ರದಲ್ಲಿ ನಟಿಸಲು ಪುನೀತ್ ಒಪ್ಪಿದ್ದು ಅಚ್ಚರಿ ಮೂಡಿಸಿತು. ಓರ್ವ ಕಲಾವಿದನಾಗಿ ಅವರು ಹೇಗೆ ಈ ಚಿತ್ರ ಒಡ್ಡಿದ ಸವಾಲನ್ನು ಸ್ವೀಕರಿಸಿದರೋ ಹಾಗೆಯೇ ಮುಂದೆಯೂ ಇಂತಹ ಸವಾಲುಗಳನ್ನು ಒಪ್ಪಿ ರಾಜ್ಯ ರಾಜಕೀಯ ಮತ್ತು ಚಿತ್ರರಂಗ ಉದ್ಧಾರವಾಗುವಂತೆ ಮಾಡಲಿ.

- ನಿರಂಜನ ಪಾಟೀಲ್, ಹುಣಸಿನಹಳ್ಳಿ

ಜೆ. ರಾಜಶೇಖರ ಅವರ 'ಉಡುಪಿಯ ಒಂದು ಆಧುನಿಕ ಸ್ಥಳಪುರಾಣ' ಲೇಖನದೊಂದಿಗೆ ಪ್ರಕಟಗೊಂಡ ಫೋಟೋದಲ್ಲಿ ಶಿರೂರು ಮಠದ ಸ್ವಾಮಿ ಓರ್ವ ರೌಡಿ ಶೈಲಿಯಲ್ಲಿ ಸೊಂಟದ ಮೇಲೆ ಕೈಇಟ್ಟು ನಿಂತಿರುವ ದೃಶ್ಯ ಅವರ ಧಾರ್ಮಿಕ-ಸಾಂಸ್ಕೃತಿಕ ಗೂಂಡಾಗಿರಿಗೆ ನಿದರ್ಶನದಂತಿದೆ.

ಶಿರೂರು ಸ್ವಾಮಿಗಳು ತಾವು ಖಾವಿ ತೊಟ್ಟಮಾತ್ರಕ್ಕೆ, ಉಡುಪಿಯ ಶಾಸಕ ರಘುಪತಿಭಟ್ಟ ತಾನು ಖಾದಿ ತೊಟ್ಟಮಾತ್ರಕ್ಕೆ ಈ ದೇಶದ ಕಾನೂನುಗಳನ್ನು ತಾವು ಉಲ್ಲಂಘಿಸಬಹುದು ಎಂದು ನಂಬಿರಬಹುದು. ಆದರೆ ಅವರಿಬ್ಬರಿಗೆ ಕ್ಯಾಕರಿಸಿ ಉಗಿದಿರುವ ನ್ಯಾಯಾಲಯ ಈ ದೇಶದ ಸಂವಿಧಾನವನ್ನು ಎತ್ತಿಹಿಡಿದಿದೆಯಲ್ಲದೆ, ಈ 'ಶಿರೂರು-ಭಟ್ಟ'ರಂತಹ ಹುಚ್ಚರ ಸಂತೆಯಲ್ಲಿ ನಮ್ಮಂತಹವರಿಗೆ ನೆಮ್ಮದಿಯನ್ನು ನೀಡಿದೆ.

- ಲಕ್ಷ್ಮಿ ರಘುಪತಿ, ಮಂಡ್ಯ

ಹೊಗಳಿಕೆ ತೆಗಳಿಕೆ

ಗೌರಿ ಲಂಕೇಶರ 'ಕಂಡಹಾಗೆ' ಮತ್ತು ಶಿವಸುಂದರ್ ಅವರ 'ಚಾರ್ವಾಕ' ಅಂಕಣಗಳು ಮಹಾತ್ಮಾ ಗಾಂಧಿಯವರ ಆಶಯವಾಗಿದ್ದ 'ಗ್ರಾಮ ಸ್ವರಾಜ್'ಗೂ, ಇವತ್ತಿನ 'ಗ್ರಾಮ ಹರಾಜ್'ಗೂ ಇರುವ ವ್ಯತ್ಯಾಸಗಳನ್ನು ತೆರೆದಿಟ್ಟವು.

ಇವತ್ತು ಬಿಲಿಯಾಧೀಶರೇ ಸಂಸದರಾಗುತ್ತಿದ್ದಾರೆ, ಕೋಟ್ಯಾಧೀಶಪತಿಗಳೇ ಶಾಸಕರಾಗುತ್ತಿದ್ದಾರೆ, ಈಗ ಲಕ್ಷಾಧಿಪತಿಗಳೇ ಗ್ರಾಮ ಪಂಚಾಯತಿಗಳ ಮುಖ್ಯಸ್ಥರಾಗುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ನಮ್ಮದು 'ಪ್ರಜಾ'ಪ್ರಭುತ್ವವಲ್ಲ, ಬದಲಾಗಿ ನಮ್ಮದು 'ಹರಾಜು'ಪ್ರಭುತ್ವ ಎಂದೇ ಬಣ್ಣಿಸಬಹುದು.

- ಪ್ರಕಾಶ್‌ಕುಮಾರ್, ಬೆಂಗಳೂರು

ಅರುಣ್ ಅವರು ಹಾಗೂ ಗೌರಿ ಲಂಕೇಶ್ ಪತ್ರಿಕೆ, ನನ್ನ ಹಾಗೂ ನನ್ನ ಚಿತ್ರ 'ನವಿಲಾದವರು' ಬಗ್ಗೆ ಮೆಚ್ಚುಗೆಯ ಮಾತಾಡಿದ್ದಕ್ಕೆ ನಿಮಗೆ ಅನಂತಾನಂತ ಧನ್ಯವಾದಗಳು. ಹಲವಾರು ತಿರಸ್ಕಾರಗಳನ್ನು ಅನುಭವಿಸಿದ ನಂತರ, ನಾನು ನಿರ್ದೇಶಕ ಆಗುವುದೇ ಇಲ್ಲವೇನೋ ಅನ್ನುವ ಭಯವನ್ನು ಹೋಗಲಾಡಿಸಲು, ನಾನು ಈ ಹುಂಬ ಪ್ರಯತ್ನಕ್ಕೆ ಕೈಹಾಕಿದೆ. ನನ್ನ ಸಿನಿಮಾವನ್ನು ನಾಲ್ಕು ಜನ ನೋಡಿ ಹೊಗಳಿದರೆ ಸಾಕು ಅಂದುಕೊಳ್ಳುತ್ತಿದ್ದೆ. ಆದರೆ ನಿಮ್ಮ ಬರವಣಿಗೆಯಿಂದಾಗಿ ನನ್ನ ಸಿನಿಮಾವನ್ನು ನೋಡದಿರೋರು ಕೂಡ ಇದನ್ನು ಮೆಚ್ಚಿಕೊಂಡಿದ್ದಾರೆ. ನಿಮ್ಮ ಸಹಕಾರಕ್ಕೆ ನಾನು ಚಿರಋಣಿ, ನೀವಿಟ್ಟಿರುವ ನಂಬಿಕೆಯನ್ನು ನಾನು ಹುಸಿ ಆಗಲು ಬಿಡೆನು ಎಂದು ಮಾತು ನೀಡುತ್ತಾ ನಿಮಗೆ ಮತ್ತೊಮ್ಮೆ ಧನ್ಯವಾದಗಳು.

-ಗಿರಿರಾಜ್, ಬೆಂಗಳೂರು

ನೋವೇಟೀವ್ ಪ್ರಶಸ್ತಿ ಶುರುವಾಯ್ತೊ? ಮುಗಿಯಿತಾ?

ಕನ್ನಡ ಚಿತ್ರರಂಗದ ಎಲ್ಲಾ ಕಲಾವಿದರು ಕೊನೆಗೂ ಡೆ ಸೇರಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದರು. ಮೊನ್ನೆ ನಡೆದ ಸಮಾರಂಭವೊಂದರಲ್ಲಿ ರೆಬೆಲ್ ಅಂಬರೀಶರಿಂದ ಹಿಡಿದು, ಕಾಮಿಡಿ ಸ್ಟಾರ್ ಕೃಷ್ಣ ತನಕ ಎಲ್ಲರೂ ಹಾಜರಿದ್ದರು. ಎಂದೂ ಸಮಾರಂಭದಲ್ಲಿ ಕಾಣಿಸಿಕೊಳ್ಳದ ಸುದೀಪ್ ದರ್ಶನ್ ಕೂಡಾ ಅಲ್ಲಿದ್ದರು. ರಾಜ್‌ಕುಮಾರ್, ರಮೇಶ್ ಅರವಿಂದ್ ಮತ್ತು ಬ್ಲನ್ ಸ್ಟಾರ್ ಗಣೇಶ್ ತಮ್ಮ ಪತ್ನಿಯರೊಂದಿಗೆ ದ್ದರು. ರವಿಚಂದ್ರನ್, ಉಪೇಂದ್ರ, ಜಗ್ಗೇಶ್, ಶ್ ರೈ ಯಶ್, ದಿಗಂತ್, ಆದಿತ್ಯ ಗದೀಶ್, ರಾಜೇಂದ್ರ ಸಿಂಗ್ ಬಾಬು, ದೊಡ್ಡಣ್ಣ, ಯಣ ರಘು, ಗರಾಜ್ ಭಟ್, ನ್, ಸೂರಿ ದದ ಎಲ್ಲಾ ರು ಅಲ್ಲಿ ಯಿಸಿದ್ದರು. ್ಯ, ಅಂದ್ರಿತಾ ಹರಿಪ್ರಿಯಾ, ಣಿ, ತೇಜಸ್ವಿನಿ, ಪ್ರಭಾಕರ್, ಪ್ರಿಯಾಂಕ, ಮಲತಾ, ರಾಧಿಕಾ ಧಿ, ಪೂಜಾ ಗಾಂಧಿ, ನಿಧಿ ಸುಬ್ಬಯ್ಯ, ಹೇಮಾ ಮರಿ, ಭಾರತಿ ವಿಷ್ಣುವರ್ಧನ್, ವಿಜಯಲಕ್ಷ್ಮಿ ್... ಹೀಗೆ ಹಳೇ ಕಾಲದ ಮತ್ತು ಈ ಕಾಲದ ಮಕಿಯರೂ ಅಲ್ಲಿ ಕಾಣಿಸಿಕೊಂಡರು.



ರಾಜ್ಯ ಪ್ರಶಸ್ತಿ ವಿತರಣಾ ಸಮಾರಂಭ ಸೇರಿದಂತೆ ವ ಸಭೆಗೂ ಹೀಗೆ ಇಡಿಯಾಗಿ ಬಾರದ ಕನ್ನಡ ರಂಗ ಅಂದು ಜೊತೆಗೂಡಿದ್ದು ಬಿಡದಿ ಬಳಿ ಇರುವ ೋವೇಟಿವ್ ಸಿಟಿಯಲ್ಲಿ ನಡೆದ ಪ್ರಶಸ್ತಿ ಸಮಾರಂಭಕ್ಕೆ! ದಲ ಬಾರಿಗೆ ಕನ್ನಡ ಚಿತ್ರರಂಗದವರಿಗೆ ಈ ಇನೋ ಟಿವ್ ಫಿಲಂ ಸಿಟಿ ಪ್ರಶಸ್ತಿಗಳನ್ನು ನೀಡಿತು. ಮಾತ್ರವಲ್ಲ ಿ ಚಿತ್ರರಂಗದವರಂತೆ ಅದನ್ನು ದ್ದೂರಿಯಾಗಿಯೂ ಏರ್ಪಡಿಸಿದ್ದರು. ಅಲ್ಲ, ಚಿತ್ರರಂಗದ ಎಲ್ಲಾ ಕಲಾ ಗಳಿಗೆ ಬೇಜಾರಾಗದ ರೀತಿಯಲ್ಲಿ ು ಪ್ರಶಸ್ತಿಗಳನ್ನು ಎಲ್ಲರಿಗೂ ಲಾಯಿತು. ಬಹುಶಃ ಎಲ್ಲಾ ವಿದರೂ ಅಲ್ಲಿಗೆ ಬರಲು ಇದೇ ್ಯ ಕಾರಣವಿರಬಹುದು.



ಆದರೆ ಇನೋವೇಟಿವ್ ಫಿಲ್ಮ್ ಬಗ್ಗೆ ನಮ್ಮ ಚಿತ್ರರಂಗದ ರಿಗೆ ಇಷ್ಟೊಂದು ಅಭಿಮಾನ ಲು ಏನು ಕಾರಣ ಎಂದು ೋಕಿಸಿದಾಗ ಈ ತಾರೆಯರ ಾದ ಬಣ್ಣ ಬಯಲಾಯಿತು. ನೆಂದರೆ ಕಲಾವಿದರ ಸಂಘದ ಅಧ್ಯಕ್ಷ ರೆಬೆಲ್‌ಸ್ಟಾರ್ ಅಂಬರೀಶ್ ಈ ಫಿಲ್ಮ್‌ಸಿಟಿಯ ಬ್ರಾಂಡ್ ಅಂಬಾಸಡರ್ ಆಗಿ ಕೆಲವೇ ವಾರಗಳ ಹಿಂದೆ ಆಯ್ಕೆಯಾಗಿದ್ದಾರೆ.

ಮತ್ತೊಂದೆಡೆ ಕಲಾವಿದರ ಸಂಘದ ಕಾರ್ಯದರ್ಶಿ ರಾಕ್‌ಲೈನ್ ವೆಂಕಟೇಶ್ ಈ ಫಿಲ್ಮ್‌ಸಿಟಿಯ ಷೇರುದಾರರು. ಪುನೀತ್ ರಾಜ್‌ಕುಮಾರ್, ಜಯಮಾಲ ಮೊದಲಾದವರು ಇದರ ಸಲಹೆಗಾರ ಸಮಿತಿಯ ಸದಸ್ಯರು. ಪ್ರಶಸ್ತಿ ಆಯ್ಕೆಗಳಿಗೆ ನಟಿ ತಾರಾ ನೇತೃತ್ವದಲ್ಲಿ ಒಂದು ಸಮಿತಿ ಕಾರ್ಯನಿರ್ವಹಿಸಿದ್ದರೂ ಪ್ರಶಸ್ತಿಗಳು ಮಾತ್ರ ಎಲ್ಲರಿಗೂ ಸಿಕ್ಕಿದವು! ಅದಕ್ಕೇ ಎಲ್ಲರೂ ದೂರದ ಬಿಡದಿಗೆ ಬಂದಿದ್ದರು!

ಇಷ್ಟೆಲ್ಲಾ ಸುದೀರ್ಘವಾದ ಟಿಪ್ಪಣಿ ಯಾಕೆಂದರೆ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಇಂತಹ ಅನೇಕ ಪ್ರಶಸ್ತಿ ಸಮಾರಂಭಗಳು ನಡೆದಿವೆ. ಉದಾಹರಣೆಗೆ, ಆರಂಭದಲ್ಲಿ ಟೆನ್ನಿಸ್ ಕ್ರೀಡಾಂಗಣದಲ್ಲಿ ನಡೆದ ತರಂಗಿಣಿ-ಬರ್ಕಲಿ ಪ್ರಶಸ್ತಿ ಸಮಾರಂಭ. ಅನಂತರ ಉದಯ ಟಿವಿಯವರು ಅದ್ದೂರಿಯಾಗಿ ಸಿನಿಮಾದವರಿಗೆ ಪ್ರಶಸ್ತಿ ಹಂಚುವ ಸಮಾರಂಭ ಮಾಡಿದರು. ಅವರಿಗಿಂತ ತಾವೇನು ಕಡಿಮೆ ಎಂದು ಸುಪ್ರಭಾತ ಚಾನೆಲ್‌ನವರು ಕೂಡಾ ಒಂದು ಸಮಾರಂಭ ಏರ್ಪಡಿಸಿದ್ದರು. ಕಳೆದ ವರ್ಷ 'ಹಲೋ ಗಾಂಧಿನಗರ' ಎಂಬ ಸಿನಿಮಾಪತ್ರಿಕೆಯವರೂ ಪ್ರಶಸ್ತಿಗಳನ್ನು ನೀಡಿದ್ದರು. ವಿಶೇಷವೆಂದರೆ ಈ ಎಲ್ಲಾ ಸಮಾರಂಭಗಳು ಒಂದೇ ವರ್ಷಕ್ಕೆ ಖತಂ ಆದವು.

ಇನ್ನು ಕೆಲವು ಪ್ರಶಸ್ತಿ ಸಮಾರಂಭಗಳು ಯಾವಾಗ ನಡೆಯುತ್ತೆ? ಯಾರು ನಡೆಸುತ್ತಾರೆ? ಯಾವ ಮಾನದಂಡದ ಆಧಾರದ ಮೇಲೆ ಪ್ರಶಸ್ತಿ ನೀಡುತ್ತಾರೆ? ಎಂಬುದು ಗೊತ್ತಾಗುವುದೇ ಇಲ್ಲ. ಉದಾಹರಣೆಗೆ ಚಿತ್ರರಸಿಕರ ಪ್ರಶಸ್ತಿ ಆರ್ಯಭಟ ಪ್ರಶಸ್ತಿ ಇತ್ಯಾದಿಗಳು.

ಈ ಎಲ್ಲಾ ಹಿನ್ನೆಲೆಯನ್ನು ಗಮನಿಸಿದಾಗ ಇನೋವೇಟಿವ್ ಫಿಲ್ಮ್ ಪ್ರಶಸ್ತಿ ಬಗ್ಗೆ ಒಂದು ರೀತಿಯ ಸಂಶಯ ಹುಟ್ಟುತ್ತದೆ. ಬಾಲಿವುಡ್ ಶೈಲಿಯಲ್ಲಿ ಅದ್ದೂರಿಯಾಗಿ ನಡೆದ ಈ ಸಮಾರಂಭ ಒಂದೇ ವರ್ಷಕ್ಕೆ ಮುಗಿದುಹೋಗುತ್ತದೆಯೇ? ಅಥವಾ ಪ್ರತಿವರ್ಷ ನಡೆಯುತ್ತದೆಯೇ? ಎಂಬುದೇ ಸದ್ಯಕ್ಕೆ ಇರುವ ಕುತೂಹಲ.

ಯಾಕೆಂದರೆ ಕನ್ನಡ ಚಿತ್ರರಂಗದಲ್ಲಿ ಇಷ್ಟೊಂದು ಅದ್ದೂರಿಯಾಗಿ ಈ ಹಿಂದೆ ಯಾರೂ ಸಮಾರಂಭ ನಡೆಸಿರಲಿಲ್ಲ. ಇದು ಖಂಡಿತವಾಗಿಯೂ ಸ್ವಾಗತಾರ್ಹ ಬೆಳವಣಿಗೆ. ಹೇಗೆ ಫಿಲ್ಮ್‌ಫೇರ್ ಪ್ರಶಸ್ತಿ ಈಗ ತನ್ನದೇ ಆದ ವರ್ಚಸ್ಸನ್ನು ಪಡೆದಿದೆಯೋ ಅಂತಹ ಸ್ಥಾನವನ್ನು ಇನೋವೇಟಿವ್ ಫಿಲ್ಮ್ ಸಂಸ್ಥೆ ಪಡೆಯಬೇಕಾಗಿದೆ. ಇನೋವೇಟಿವ್ ಪ್ರಶಸ್ತಿಗಳು ಒಂದು ವರ್ಷದ ಸಂಭ್ರಮ ಆಗದಿರಲಿ ಎಂಬುದು ನಮ್ಮ ಆಶಯ.

● ಶೆಣೈ






ಇಜ್ಜೋಡು ಸತ್ಯ

ಅಬ್ಬಬ್ಬಾ ಈ ಹುಡುಗಿಯ ಪ್ರತಿಭೆಯ ಬಗ್ಗೆ ಏನೆನ್ನಬೇಕೋ ಗೊತ್ತಿಲ್ಲ, ಮೊನ್ನೆ ಎಂ.ಎಸ್.ಸತ್ಯು ನಿರ್ದೇಶನದ 'ಇಜ್ಜೋಡು' ಚಿತ್ರ ನೋಡಿದಾಗ ಮಲೆಯಾಳಿ ಕುಟ್ಟಿ ಮೀರಾ ಜಾಸ್ಮಿನ್ ಪ್ರತಿಭೆಯ ಬಗ್ಗೆ ಅಚ್ಚರಿಯಾಯಿತು. ಈ ಮೋಹಕ ನಟಿ ಈ ಹಿಂದೆ ಕನ್ನಡದ ಅನೇಕ ಚಿತ್ರಗಳಲ್ಲಿ ನಟಿಸಿದ್ದಾಳೆ ನಿಜ. ಆದರೆ ಆಕೆಯ ಪ್ರತಿಭೆಯನ್ನು ಅಭಿವ್ಯಕ್ತಪಡಿಸುವಂತಹ ಪಾತ್ರ ಆಕೆಗೆ ದೊರೆತಿರಲಿಲ್ಲ, ಅತ್ಯುತ್ತಮ ನಾಯಕ ನಟಿ ಎಂಬ ರಾಷ್ಟ್ರೀಯ ಪ್ರಶಸ್ತಿಯನ್ನು ತನ್ನ ಹೆಗಲಿಗೇರಿಸಿಕೊಂಡಿರುವ ಮೀರಾ ಜಾಸ್ಮಿನ್ 'ಇಜ್ಜೋಡು' ಚಿತ್ರದಲ್ಲಿ ಬೆರಗು ಹುಟ್ಟಿಸುವಂತೆ ನಟಿಸಿದ್ದಾಳೆ.

ಈ ಚಿತ್ರದ ವಿಶೇಷತೆಯೇನೆಂದರೆ ಸತ್ಯು ಅವರು ಡಬ್ಬಿಂಗ್ ಮಾಡುವ ಬದಲು ಸ್ಪಾಟ್ ಡಬ್ಬಿಂಗ್‌ಗೆ ಮೊರೆ ಹೋಗಿರುವುದು. ಕನ್ನಡ ಚಿತ್ರರಂಗದಲ್ಲಿ ಸಾಮಾನ್ಯವಾಗಿ ಶೂಟಿಂಗ್ ನಡೆದ ಮೇಲೆ ಸ್ಟುಡಿಯೋದಲ್ಲಿ ಡಬ್ಬಿಂಗ್ ಮಾಡಲಾಗುತ್ತದೆ. ಆದರೆ 'ಇಜ್ಜೋಡು' ಚಿತ್ರದ ಚಿತ್ರೀಕರಣದ ಸಂದರ್ಭದಲ್ಲೇ ಆಯಾ ನಾಯಕ ನಾಯಕಿಯರು ಏನು ಮಾತನಾಡುತ್ತಾರೋ ಅದೇ ಬೆಳ್ಳಿ ಪರದೆ ಮೇಲೆ ನಿಮಗೆ ಕೇಳಿಸುತ್ತದೆ. ಕನ್ನಡ ಭಾಷೆಯ ಗಂಧಗಾಳಿಯೂ ಗೊತ್ತಿಲ್ಲದ ಮೀರಾ ಜಾಸ್ಮಿನ್ ಭಾಷೆಯನ್ನು ಕಲಿತು, ಅದಕ್ಕೆ ಸರಿಯಾಗಿ ಭಾವನೆಯನ್ನು ವ್ಯಕ್ತಪಡಿಸುತ್ತಾ ನಟಿಸಿರುವ ರೀತಿ ನಿಜಕ್ಕೂ ಒಂದು ವಿಸ್ಮಯವೇ ಸರಿ. ಅಂತಹ ಒಂದು ಸಾಧನೆ ಮಾಡಿ ಕನ್ನಡಿಗರ ಹೃದಯ ಗೆಲ್ಲುವತ್ತ ಒಂದು ಹೆಜ್ಜೆ ಮುಂದಿಟ್ಟ ಮಲೆಯಾಳಿ ಕುಟ್ಟಿ ಮೀರಾ ಜಾಸ್ಮಿನ್‌ಗೆ ನಮ್ಮದು ಒಂದು ಪುಟ್ಟ ಅಭಿನಂದನೆ...



* * * * * *




ಕನ್ನಡ ಚಿತ್ರರಂಗ ಮಾತ್ರವಲ್ಲ, ಭಾರತೀಯ ಚಿತ್ರರಂಗದಲ್ಲೇ ನಿರ್ದೇಶಕ ಎಂ.ಎಸ್.ಸತ್ಯು ಅವರಿಗೆ ಒಂದು ವಿಶೇಷವಾದ ಸ್ಥಾನವಿದೆ. ಆದರೆ ಕಳೆದ ಹನ್ನೆರಡು ವರ್ಷಗಳಿಂದ ಅವರು ಕನ್ನಡದ ಯಾವುದೇ ಚಿತ್ರವನ್ನು ಕೈಗೆತ್ತಿಕೊಂಡಿರಲಿಲ್ಲ, ಹಾಗಂತ ಅವರು ಚಿತ್ರರಂಗದಿಂದ ದೂರವಾಗಿದ್ದರು ಎಂಬುದು ಅರ್ಥವಲ್ಲ, ಸತ್ಯು ಇಲ್ಲಿ ಏನು ಮಾಡುತ್ತಿಲ್ಲ ಎಂದರೆ ಬಾಲಿವುಡ್‌ನಲ್ಲಿ ಏನಾದರೂ ಮಾಡುತ್ತಿರುತ್ತಾರೆ ಎಂದೇ ಅರ್ಥೈಸಬೇಕಾಗುತ್ತದೆ. ಚಿತ್ರರಂಗ, ಕಿರುತೆರೆ, ರಂಗಭೂಮಿ ಹೀಗೆ ಎಲ್ಲಾ ಕ್ಷೇತ್ರಗಳಲ್ಲೂ ಸಕ್ರಿಯವಾಗಿರುವ ಸತ್ಯು ಈಗ ಮತ್ತೆ ಕನ್ನಡದಲ್ಲಿ ಚಿತ್ರ ನಿರ್ದೇಶಿಸಿರುವುದು ಕುತೂಹಲ ಮೂಡಿಸಿದೆ.

ಹನ್ನೆರಡು ವರ್ಷಗಳ ಸುದೀರ್ಘ ಅಜ್ಞಾತವಾಸದ ನಂತರ ಸತ್ಯು ನಿರ್ದೇಶಿಸಿದ 'ಇಜ್ಜೋಡು' ಚಿತ್ರ ನೋಡಿದಾಗ ನಿರಾಶೆಯೇ ಆಯಿತು. ಇದಕ್ಕೆ ಅವರು ಆಯ್ಕೆ ಮಾಡಿದ ಕಥಾವಸ್ತುವೇ ಮುಖ್ಯ ಕಾರಣ ಎನ್ನಬಹುದು. ದೇವದಾಸಿ ಪದ್ಧತಿಯ ಬಗೆಗಿನ ಈ ಚಿತ್ರದಲ್ಲಿ ಅಂತಹ ಹೇಳಿಕೊಳ್ಳುವ ತಿರುವುಗಳಾಗಲಿ, ಥ್ರಿಲ್‌ಗಳಾಗಲಿ ಇಲ್ಲ, ಅದಕ್ಕಿಂತಲೂ ಮುಖ್ಯವಾಗಿ ದೇವದಾಸಿ ಪದ್ಧತಿಯನ್ನು ಸರ್ಕಾರ ಈಗ ನಿರ್ಬಂಧಿಸಿರುವುದರಿಂದ ಸಮಕಾಲೀನ ಜ್ವಲಂತ ಸಮಸ್ಯೆಯಾಗಿ ಅದು ಪ್ರೇಕ್ಷಕರನ್ನು ಕಾಡುವುದೂ ಇಲ್ಲ. ಆದರೂ ಸತ್ಯು ಅವರ ನಿರೂಪಣಾ ಶೈಲಿ ಮಾತ್ರ ಗಮನ ಸೆಳೆಯುತ್ತದೆ. ಅದು ಅವರಿಗೆ ದೃಶ್ಯ ಮಾಧ್ಯಮದ ಮೇಲಿರುವ ಹಿಡಿತವನ್ನು ತೋರಿಸುತ್ತದೆ.

ಜಿ.ಎಸ್.ಭಾಸ್ಕರ್ ಅವರ ಅದ್ಭುತವಾದ ಕ್ಯಾಮರಾ ಕೈಚಳಕ ಮತ್ತು ಆಯ್ಕೆ ಮಾಡಿರುವ ಸುಂದರ ಹೊರಾಂಗಣ ತಾಣಗಳು ಈ ಚಿತ್ರದ ಹೈಲೈಟ್. ಹಾಗೆಯೇ ನಾಯಕ ಅನಿರುದ್ಧ್ ಮತ್ತು ನಾಯಕಿ ಮೀರಾ ಜಾಸ್ಮಿನ್ ತಮ್ಮ ಪಾತ್ರಕ್ಕೆ ಜೀವ ತುಂಬಿ ಈ ಚಿತ್ರದಲ್ಲಿ ಮೆರೆಯುತ್ತಾರೆ. ಒಂದು ಹಾಡಂತೂ ಸ್ಲೋಮೋಷನ್‌ನಲ್ಲಿ ಸಾಗುವ ರೀತಿ ಮನಸ್ಸಿಗೆ ಮುದ ನೀಡುತ್ತದೆ. ಅಷ್ಟರಮಟ್ಟಿಗೆ 'ಇಜ್ಜೋಡು' ಇಷ್ಟವಾಗುತ್ತದೆ. ಅಷ್ಟಕ್ಕೆ ಸತ್ಯು ಅಂತಹ ಪ್ರತಿಭಾವಂತ ನಿರ್ದೇಶಕ ಹನ್ನೆರಡು ವರ್ಷಗಳ ಕಾಲ ಅಜ್ಞಾತವಾಸದಲ್ಲಿರಬೇಕಿತ್ತೇ ಎಂಬ ಪ್ರಶ್ನೆ ಕಾಡುತ್ತದೆ.

ಸತ್ಯು ತಮ್ಮ ಮುಂದಿನ ಚಿತ್ರಕ್ಕೆ ಮತ್ತೆ ಹನ್ನೆರಡು ವರ್ಷದ ವನವಾಸ ಮಾಡದಿರಲಿ ಎಂಬುದೇ ನಮ್ಮ ಹಾರೈಕೆ....

* * * * * *



ವಿಷ್ಣುವರ್ಧನ್ ಅವರ ಮನೆಯಲ್ಲಿ ಮೊನ್ನೆ ಅಳಿಯ ಅನಿರುದ್ಧ್ ಮಧ್ಯಾಹ್ನದ ಹೊತ್ತು ಒಂದು ಸಂತೋಷಕೂಟವನ್ನು ಏರ್ಪಡಿಸಿದ್ದರು. ಅದು ಅವರು ನಾಯಕನಾಗಿ ನಟಿಸಿರುವ 'ಇಜ್ಜೋಡು' ಚಿತ್ರಕ್ಕೆ ಸಂಬಂಧಪಟ್ಟಿದ್ದಾದರೂ ಅಲ್ಲಿ ಮಾತು ನಡೆದದ್ದೇ ವಿಷ್ಣುವರ್ಧನ್ ಅವರ ಬಗ್ಗೆ. ಪತ್ರಕರ್ತರಿಗಂತೂ ವಿಷ್ಣು ಮನೆ ಪ್ರವೇಶಿಸಿದಾಗ ಸಿಂಹವಿಲ್ಲದ ಗುಹೆಯನ್ನು ಪ್ರವೇಶಿಸಿದಂತೆ ಭಾಸವಾಯಿತು. ಕೇವಲ ಆರು ತಿಂಗಳ ಹಿಂದೆ ಉತ್ತರ ಕರ್ನಾಟಕದ ನೆರೆಪೀಡಿತ ಪ್ರದೇಶದ ಜನರಿಗಾಗಿ ಪಾದಯಾತ್ರೆ ಮಾಡಿ ಸಂಗ್ರಹಿಸಿದ ಹಣವನ್ನು ಜಯನಗರದ ಶಾಸಕರಿಗೆ ಹಸ್ತಾಂತರಿಸುವಾಗ ವಿಷ್ಣು ಪತ್ರಕರ್ತರನ್ನು ತಮ್ಮ ಮನೆಗೆ ಆಹ್ವಾನಿಸಿದ್ದ ನೆನಪು ಎಲ್ಲರಲ್ಲಿ ಇನ್ನೂ ಅಚ್ಚಳಿಯದೆ ಉಳಿದಿದೆ.

'ಇಜ್ಜೋಡು' ಚಿತ್ರದ ತನ್ನ ಪಾತ್ರವನ್ನು ಪ್ರೇಕ್ಷಕರು ಮೆಚ್ಚಿದ್ದಾರೆ, ನಿಮ್ಮ ಬೆಂಬಲವೂ ಬೇಕೆಂದು ಮಾತು ಆರಂಭಿಸಿದ ಅನಿರುದ್ಧ್, ಅನಂತರ ಸ್ನೇಹಲೋಕ ಕರೋಕೆ ಸಂಗೀತ ಕಾರ್ಯಕ್ರಮದ ವಾರ್ಷಿಕೋತ್ಸವ, ಸ್ನೇಹಲೋಕ ಕ್ರಿಕೆಟ್ ಟೂರ್ನಿಮೆಂಟ್ ಇವುಗಳನ್ನೆಲ್ಲಾ ವಿಷ್ಣು ಅವರ ಆಶಯದಂತೆ ನಡೆಸುವುದಾಗಿ ತಿಳಿಸಿದರು. ವಿಷ್ಣು ಸಮಾಧಿ ಕೆಲಸ ಚುನಾವಣೆ ಮುಗಿದ ತಕ್ಷಣ ಆರಂಭವಾಗುತ್ತದೆ, ಇದಕ್ಕಾಗಿ ಪಕ್ಷಭೇದ ಮರೆತು ರಾಜಕಾರಣಿಗಳು, ಅಧಿಕಾರಿಗಳು ಸಹಾಯ ಮಾಡುತ್ತಿರುವುದನ್ನು ಭಾರತಿ ವಿಷ್ಣುವರ್ಧನ್ ಕೃತಜ್ಞತಾ ಮನೋಭಾವದಿಂದ ಹೇಳಿಕೊಂಡರು.

ಅನಂತರ ಮತ್ತೆ ವೃತ್ತಿ ಜೀವನದ ಬಗ್ಗೆ ಮಾತನಾಡಿದ ಅನಿರುದ್ಧ್ ಈ ವರ್ಷದೊಳಗಡೆ ಒಂದು ಚಿತ್ರದ ನಿರ್ಮಾಣ ಮತ್ತು ಮತ್ತೊಂದು ಚಿತ್ರದ ನಿರ್ದೇಶನದ ಬಗ್ಗೆ ಅನೌನ್ಸ್ ಮಾಡಿದರು.

ಅಂತೂ ವಿಷ್ಣು ನಿಧನದ ಶಾಕ್‌ನಿಂದ ಅವರ ಕುಟುಂಬದ ಸದಸ್ಯರು ನಿಧಾನವಾಗಿ ಚೇತರಿಸಿಕೊಳ್ಳುತ್ತಿರುವುದು ಕಾಣಿಸುತ್ತಿತ್ತು, ಮುಂದಿನ ತಿಂಗಳು ಮುದ್ದಿನ ಮೊಮ್ಮಗ ಅಪ್ರಮೇಯನ ಉಪನಯನದ ಸಿದ್ಧತೆಗಾಗಿ ಓಡಾಡುವಷ್ಟು ಭಾರತಿಯವರು ಈಗ ಚೇತರಿಸಿಕೊಂಡಿದ್ದಾರೆ. ●

Regd.No.KA/RNP/BGS/2036/2008-10 Posted at : GPO, Bangalore-01.

R B P LANKESH, Kannada Weekly Price Rs. 12/-

ಹಳೇ ದಿಗಂತನ ಹೊಸ ಆಟ

ಕನ್ನಡ ಚಿತ್ರರಂಗದ ಪ್ಲೇಬಾಯ್ ಖ್ಯಾತಿಯ ಸುಂದರನಟ ದಿಗಂತ್ ವಿರುದ್ಧ ಬಾಂಬ್ ಹಾಕಲು ಹಳೇ ನಿರ್ದೇಶಕ ಕೂಡ್ಲು ರಾಮಕೃಷ್ಣ ಹೊರಟಿದ್ದಾರೆ. "ನಾನು ನನ್ನ ಜನ್ಮದಲ್ಲಿ ಆ ನಟನನ್ನು ಮಾತ್ರ ಯಾವತ್ತೂ ಕ್ಷಮಿಸಲಾರೆ, ಆತ ಬರೆದುಕೊಟ್ಟ ಪತ್ರವೊಂದು ನನ್ನ ಬಳಿ ಇದೆ. ಅದನ್ನು ಸದ್ಯದಲ್ಲೇ ಬಹಿರಂಗಗೊಳಿಸುತ್ತೇನೆ" ಎಂದು ಕೂಡ್ಲು ರಾಮಕೃಷ್ಣ ದಿಗಂತ್ ವಿರುದ್ಧ ಹರಿಹಾಯ್ದಿದ್ದಾರೆ.



ಈ ದಿಗಂತ್ ಕನ್ನಡ ಚಿತ್ರರಂಗಕ್ಕೆ ಕಾಲಿಟ್ಟ ದಿನದಿಂದಲೇ ಈ ರೀತಿಯ ವಿವಾದಾತ್ಮಕ ನಟನಾಗಿ ಬೆಳೆಯುತ್ತಿದ್ದಾನೆ. ಮುಖ್ಯವಾಗಿ ನಾಯಕಿಯರು ಮತ್ತು ಹೆಣ್ಣುಮಕ್ಕಳು ಈ ಸುಂದರ ನಟನನ್ನು ಮುತ್ತಿಗೆ ಹಾಕುತ್ತಿರುವುದು ಅನೇಕ ಇತರ ನಾಯಕ ನಟರಿಗೂ ನುಂಗಲಾರದ ತುತ್ತಾಗಿದೆ. ಬಹುತೇಕ ಎಲ್ಲಾ ಯುವ ನಾಯಕಿಯರ ಜೊತೆ ಈತನ ಹೆಸರು ಈಗಾಗಲೇ ಗಾಸಿಪ್ ಕಾಲಮ್ಮುಗಳಲ್ಲಿ ರಾರಾಜಿಸಿದೆ.

ಮೊನ್ನೆ ಇನೋವೇಟಿವ್ ಪ್ರಶಸ್ತಿ ಸಮಾರಂಭದಲ್ಲೂ ಇಂತಹ ಒಂದು ತಮಾಷೆ ನಡೆಯಿತು. ನಾಯಕಿ ತೇಜಸ್ವಿನಿ ಮತ್ತು ದಿಗಂತ್ ಅಕ್ಕಪಕ್ಕದಲ್ಲಿ ಕುಳಿತುಕೊಂಡ ಭಂಗಿಯನ್ನು ಛಾಯಾಗ್ರಾಹಕರು ಒಂದೇ ಸಮನೆ ಕ್ಲಿಕ್ಕಿಸುತ್ತಿದ್ದರು. ಅದನ್ನು ನೋಡಿ ಸಹಿಸಲಾಗದ ಆಂದ್ರಿತಾ ರೇ ದಿಗಂತ್‌ನನ್ನು ತನ್ನ ಪಕ್ಕ ಕರೆದು ಕೂರಿಸಿಕೊಂಡರು. ಅದನ್ನು ನೋಡಿದ ಉದ್ಯಮದ ಉಳಿದ ನಾಯಕರು ದಿಗಂತ್ ಬಗ್ಗೆ ಮಾತಾಡಿದ್ದೇ ಮಾತಾಡಿದ್ದು.

ಈಗ ಕೂಡ್ಲು ರಾಮಕೃಷ್ಣ ತಾನೇ ಉದ್ಯಮಕ್ಕೆ ಕರೆತಂದ ಈ ಹುಡುಗನ ಮೇಲೆ ಏನು ಬಾಂಬು ಹಾಕುತ್ತಾರೋ ಕಾದು ನೋಡಬೇಕು...



ಶೌರ್ಯ ಮದಲಸ

ಪೃಥ್ವಿಯ ಸ್ಫೂರ್ತಿಯಲ್ಲಿ ಶಿವಣ್ಣ...



ಪುನೀತ್ ರಾಜ್‌ಕುಮಾರ್ ದಾರಿಯಲ್ಲೇ ಅವರ ಸಹೋದರ ಶಿವರಾಜ್‌ಕುಮಾರ್ ಸಾಗಲು ಅಣಿಯಾಗುತ್ತಿದ್ದಾರೆ.

ಅಪ್ಪು ಈಗಾಗಲೇ 'ಪೃಥ್ವಿ' ಚಿತ್ರದಲ್ಲಿ ಬಳ್ಳಾರಿಯ ಗಣಿ ಧಣಿಗಳ ವಿರುದ್ಧ ಆರ್ಭಟಿಸಿದ ವಿಷಯವನ್ನು ಕಳೆದ ವಾರ ವರದಿ ಮಾಡಿದ್ದೆವು.. ಪುನೀತ್ ರಾಜ್‌ಕುಮಾರ್ ಇಂತಹ ಚಿತ್ರದಲ್ಲಿ ನಟಿಸುವ ಮುಖಾಂತರ ಕನ್ನಡ ಚಿತ್ರರಂಗದ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದ್ದಾರೆ ಮಾತ್ರವಲ್ಲ ಉಳಿದ ನಾಯಕನಟರೂ ಇಂತಹ ಪಾತ್ರಗಳನ್ನು ಒಪ್ಪಲು ಸ್ಫೂರ್ತಿ ನೀಡಿದ್ದಾರೆ.

'ಪೃಥ್ವಿ' ಚಿತ್ರ ಬಾಕ್ಸಾಫೀಸ್‌ನಲ್ಲಿ ಹೇಳಿಕೊಳ್ಳುವಂತಹ ಜಯಭೇರಿ ಬಾರಿಸದಿದ್ದರೂ ಶಿವರಾಜ್‌ಕುಮಾರ್ ಈಗ ಅದೇ ರೀತಿಯ ರಾಜಕೀಯ ಕಥಾವಸ್ತುವಿನ ಚಿತ್ರದಲ್ಲಿ ನಟಿಸಲು ಸಿದ್ಧರಾಗುತ್ತಿದ್ದಾರೆ. ಅದೂ ತಮ್ಮ 100ನೇ ಚಿತ್ರದಲ್ಲಿ! ಹೌದು, ಶಿವರಾಜ್‌ಕುಮಾರ್ ನಟಿಸುತ್ತಿರುವ 'ಜೋಗಯ್ಯ' ಚಿತ್ರದ ಕಥೆಯನ್ನು ರಾಜಕೀಯದ ಸುತ್ತ ಹೆಣೆಯಲಾಗಿದೆಯಂತೆ.



ಈ ಮಾತನ್ನು ಹೇಳಿದವರು ಬೇರಾರೂ ಅಲ್ಲ; 'ಜೋಗಯ್ಯ' ಚಿತ್ರದ ನಿರ್ಮಾಪಕ ಮತ್ತು ನಿರ್ದೇಶಕ ಆಗಿರುವ ಪ್ರೇಮ್. "ಸಾರ್, 'ಕರಿಯ' ಚಿತ್ರದಲ್ಲಿ ನಾನು ಭೂಗತ ಜಗತ್ತಿನ ಕತೆಯನ್ನು ತೋರಿಸಿದೆ. ಈ ಚಿತ್ರದಲ್ಲಿ ರಾಜಕಾರಣಿಗಳ ಮತ್ತು ಭೂಗತ ಜಗತ್ತಿನ ನಡುವಿನ ನಂಟನ್ನು ಬಿಡಿಸಿಹೇಳುತ್ತೇನೆ. ಈ ಚಿತ್ರ ತೆರೆಕಂಡ ನಂತರ ರಾಜಕಾರಣಿಗಳು ರಸ್ತೆಯಲ್ಲಿ ಅಷ್ಟು ಸುಲಭವಾಗಿ ಓಡಾಡಲು ಸಾಧ್ಯವಿಲ್ಲ, ಅಂತಹ ಚಿತ್ರವಿದು" ಎಂದರು ಪ್ರೇಮ್.

"ಕರ್ನಾಟಕದ ಬಹುತೇಕ ಎಲ್ಲಾ ಮುಖ್ಯಮಂತ್ರಿಗಳ ಮತ್ತು ಕೆಲವು ದೊಡ್ಡ ರಾಜಕಾರಣಿಗಳ ದ್ವಿಮುಖವನ್ನು ಬಯಲು ಮಾಡಲಿರುವ ನನ್ನ ಚಿತ್ರ ಭಾರತೀಯ ಚಿತ್ರರಂಗದ ಇತಿಹಾಸದಲ್ಲೇ ಹೊಸ ಅಧ್ಯಾಯ ಬರೆಯುವುದು ಗ್ಯಾರಂಟಿ" ಎಂದು ಹೇಳಲು ಪ್ರೇಮ್ ಮರೆಯಲಿಲ್ಲ.

ನಿಜವಾಗಿಯೂ ಗಾಂಧಿನಗರದಲ್ಲಿ ಬದಲಾಗುತ್ತಿರುವ ಟ್ರೆಂಡನ್ನು ಇದು ತೋರಿಸುತ್ತದೆ. ಅದೇ ಸಿದ್ಧ ಸೂತ್ರಗಳ ಸುತ್ತ ಗಿರಕಿ ಹೊಡೆಯುವ ಯುವ ನಿರ್ದೇಶಕರು ಪ್ರಸ್ತುತ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತಿರುವುದು ಸ್ವಾಗತಾರ್ಹ. ಇಂದು ಅಪ್ಪು, ನಾಳೆ ಶಿವಣ್ಣ... ನಾಡಿದ್ದು ಯಾರು? ಎಂಬ ಕುತೂಹಲ ಗಾಂಧಿನಗರದಲ್ಲಿ ಈಗಾಗಲೇ ಆರಂಭವಾಗಿದೆ...

ಬಸಂತ ಗೋವಿಂದ!



ಚೇಂಬರ್ ಚುನಾವಣೆ ದಿನದಿಂದ ದಿನಕ್ಕೆ ರಂಗೇರುತ್ತಿದೆ. ನಾಡಿದ್ದು ಭಾನುವಾರ ಕನ್ನಡ ಚಲನಚಿತ್ರ ವಾಣಿಜ್ಯ ಮಂಡಳಿಗೆ ಜಯಮಾಲ ಸ್ಥಾನದಲ್ಲಿ ಹೊಸ ಅಧ್ಯಕ್ಷರೊಬ್ಬರು ಆಯ್ಕೆಯಾಗಲಿದ್ದಾರೆ.

ಈ ಬಾರಿ ಬಿಜೆಪಿಯ ಸಕ್ರಿಯ ಸದಸ್ಯ ನಿರ್ಮಾಪಕ ವಿಜಯಕುಮಾರ್ ಅಧ್ಯಕ್ಷ ಸ್ಥಾನಕ್ಕೆ ಕೊನೆ ಗಳಿಗೆಯಲ್ಲಿ ಸ್ಪರ್ಧಿಸಿರುವುದರಿಂದ ಚುನಾವಣೆಗೆ ರಾಜಕೀಯ ವಾಸನೆ ಬಡಿದಿದೆ. ಇಂತಹ ಸಂದರ್ಭದಲ್ಲಿ ಬಸಂತ್‌ಕುಮಾರ್ ಪಾಟೀಲ್ ಪರವಾಗಿ ಬಿರುಸಿನಿಂದ ಪ್ರಚಾರ ನಡೆಸುತ್ತಿರುವ ಸಾ.ರಾ.ಗೋವಿಂದು ಗುಡುಗಿದ್ದಾರೆ. "ಪಾಟೀಲ್ ಮತ್ತವರ ತಂಡ ಈ ಬಾರಿ ಚೇಂಬರ್‌ಗೆ ಆಯ್ಕೆಯಾಗಿ ಬರುವುದು ಗ್ಯಾರಂಟಿ. ಯಾವುದೇ ಕಾರಣಕ್ಕೂ ಬಿಜೆಪಿಯ ಜನರನ್ನು ಚೇಂಬರ್‌ನೊಳಗೆ ನಾನು ಬಿಡುವುದಿಲ್ಲ. ಒಂದುವೇಳೆ ಪಾಟೀಲರು ಸೋತರೆ ನಾನು ನನ್ನ ಜೀವನದಲ್ಲಿ ಮತ್ತೊಮ್ಮೆ ಎಂದೆಂದಿಗೂ ಚೇಂಬರಿನೊಳಗೆ ಕಾಲಿಡುವುದಿಲ್ಲ" ಎಂದು ಗೋವಿಂದು ಶಪಥ ಗೈದಿದ್ದಾರೆ.

ಇದು ಗೋವಿಂದು ಅವರ ಜಾತ್ಯತೀತ ನಿಲುವು ಮತ್ತು ಬದ್ಧತೆಯನ್ನು ತೋರಿಸುತ್ತದೆ. ಈ ಹಿಂದೆ ಎರಡು ಬಾರಿ ಬಸಂತ್‌ಕುಮಾರ್ ಪಾಟೀಲ್ ಅಧ್ಯಕ್ಷಸ್ಥಾನಕ್ಕೆ ನಿಂತಾಗ ಅವರ ವಿರುದ್ಧ ಪ್ರಚಾರ ಮಾಡಿದ್ದ ಗೋವಿಂದು ಈ ಬಾರಿ ಮಾತ್ರ ಪಾಟೀಲರ ಬೆನ್-ಬಲಕ್ಕೆ ನಿಂತಿದ್ದಾರೆ. ಸಿನಿಮಾರಂಗದಲ್ಲೂ ರಾಜಕೀಯದಂತೆ ಯಾರೂ ಅಜನ್ಮ ಶತ್ರುಗಳಾಗಿರುವುದಿಲ್ಲ, ಯಾರೂ ಆಜನ್ಮ ಮಿತ್ರರೂ ಆಗಿರುವುದಿಲ್ಲ ಎಂಬುದಕ್ಕೆ ಇದೊಂದು ತಾಜಾ ಉದಾಹರಣೆ.

ಭಾರತಿಯವರ ಪ್ರಾಮಾಣಿಕತೆ



ವಿಷ್ಣು ನಿಧನ ಹೊಂದಿ ನೂರುದಿನಗಳು ಸಂದು ಹೋದವು. ಈ ನೂರು ದಿನಗಳ ಸಂದರ್ಭದಲ್ಲಿ ಅನೇಕ ಘಟನೆಗಳು ನಡೆದು ಹೋದವು. ವಿಷ್ಣು ಸಮಾಧಿಗಾಗಿ ಸರ್ಕಾರ ಹತ್ತು ಕೋಟಿ ಘೋಷಿಸಿದ್ದು, ಮೊನ್ನೆ ಶಿವಮೊಗ್ಗದಲ್ಲಿ ವಿಷ್ಣು ಪರವಾಗಿ ಅವರ ಪತ್ನಿ ಭಾರತಿ ವಿಷ್ಣುವರ್ಧನ್ ಪ್ರಶಸ್ತಿ ಸ್ವೀಕರಿಸಿದ್ದು, ಹಾಗೆಯೇ ಭಾರತಿ ವಿಷ್ಣುವರ್ಧನ್ ಅವರಿಗೆ ಡಾಕ್ಟರೇಟ್ ಪದವಿ ಪ್ರಾಪ್ತವಾಗಿದ್ದು ಇವೇ ಮೊದಲಾದವುಗಳು ಪ್ರಮುಖವಾದುದು.

ಈ ಮಧ್ಯೆ ಜಯನಗರದ ತಮ್ಮ ನಿವಾಸದಲ್ಲಿರುವ ಭಾರತಿ ಮೇಡಂ ಕೆಲವು ನಿರ್ಮಾಪಕರನ್ನು ಮನೆಗೆ ಕರೆಸಿ ಅವರು ವಿಷ್ಣುವರ್ಧನ್‌ಗೆ ನೀಡಿರುವ ಮುಂಗಡ ಹಣವನ್ನು ವಾಪಸ್ ನೀಡಿ ತಮ್ಮ ಸಹೃದಯತೆಯನ್ನು ಪ್ರದರ್ಶಿಸಿದ್ದಾರೆ.

ಸಾಧಾರಣವಾಗಿ ಒಬ್ಬ ನಟನಿಗೆ ಮುಂಗಡ ಹಣ ನೀಡಿದರೆ ಅದನ್ನು ವಾಪಸು ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಆದರೆ ಈ ವಿಷಯದಲ್ಲಿ ಅಂತಹ ರೂಲ್ಸ್‌ಗೆ ಅಂಟಿಕೊಳ್ಳದ ಭಾರತಿ ಮೇಡಂ ನಿರ್ಮಾಪಕರಿಗೆ ಹಣವನ್ನು ಸ್ವಯಂಪ್ರೇರಿತವಾಗಿ ವಾಪಸು ನೀಡಿ ತಮ್ಮ ನಿಸ್ವಾರ್ಥತತೆಯನ್ನು ತೋರಿದರು.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44